ಕರ್ನಾಟಕ ಸರ್ಕಾರ

# ಪಲ್ಲವ

## ಪಿ.ಯು.ಸಿ. ದ್ವಿತೀಯ ವರ್ಷ

## ಕನ್ನಡ ಭಾಷಾ – ಅಭ್ಯಾಸ ಪುಸ್ತಕ

*{ಪರಿಷ್ಕೃತ ಆವೃತ್ತಿ–೨೦೧೫}*


**ಪದವಿ ಪೂರ್ವ ಶಿಕ್ಷಣ ಇಲಾಖೆ**

೧೮ನೇ ತಿರುವು, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೧೨

© *Department of Pre-University Education* 2014-2015.

***Revised Edition - 2018***

*Printed on 70 GSM Maplitho paper*

**All Rights Are Reserved**

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

This book is sold subject to the condition that it shall not, by way of trade, be lent, resold, hired out or otherwise disposed of without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

## ನಿರ್ದೇಶಕರ ಸಂದೇಶ

**ಆತ್ಮೀಯ ವಿದ್ಯಾರ್ಥಿಗಳೇ,**

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗುಮವಾಗಿ ಸಾಗಿ, ನೀವು ರಾಷ್ಟ್ರ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,

**ಸಹಿ/–**
**ಸಿ.ಶಿಖಾ,** ಭಾ.ಆ.ಸೇ.,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

# ದ್ವಿತೀಯ ಪಿಯುಸಿ ಕನ್ನಡ ಭಾಷಾ ಅಭ್ಯಾಸ ಪುಸ್ತಕ

## ರಚನಾ ಸಮಿತಿ

**ಅಧ್ಯಕ್ಷರು** : **ಶ್ರೀ ಕೆ.ಎಸ್. ಸಿದ್ಧಲಿಂಗಪ್ಪ**
ಪ್ರಾಚಾರ್ಯರು
ಸರ್ಕಾರಿ ಪದವಿ ಪೂರ್ವ ಕಾಲೇಜು
ಗುಬ್ಬಿ, ತುಮಕೂರು ಜಿಲ್ಲೆ – ೫೭೨ ೨೧೬

**ಸಂಚಾಲಕರು** : **ಡಾ. ಎಚ್.ಎಸ್. ಸತ್ಯನಾರಾಯಣ**
ಹಿರಿಯ ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು,
ಬಿ.ಪಿ. ವಾಡಿಯಾ ರಸ್ತೆ,
ಬಸವನಗುಡಿ, ಬೆಂಗಳೂರು – ೫೬೦ ೦೦೪.

---

## : ಸದಸ್ಯರು :

೧. **ಡಾ॥ ಅರ್ಜುನ ಗೊಳಸಂಗಿ**
ಹಿರಿಯ ಕನ್ನಡ ಉಪನ್ಯಾಸಕರು
ಜಿ.ಸಿ.ಟಿ.ಎಂ. ಪದವಿ ಪೂರ್ವ ಕಾಲೇಜು
ಹುಲಕೋಟಿ, ಗದಗ ಜಿಲ್ಲೆ.

೨. **ಶ್ರೀ ಎಸ್. ಚಂದ್ರಶೇಖರ್**
ಹಿರಿಯ ಕನ್ನಡ ಉಪನ್ಯಾಸಕರು
ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು
ಜಯನಗರ ೮ನೇ ಬ್ಲಾಕ್, ಬೆಂಗಳೂರು – ೭೦

---

## : ಪರಿಶೀಲನಾ ಸಮಿತಿ ಸದಸ್ಯರು :

೧. **ಡಾ॥ ಚಂದ್ರಶೇಖರ ನಂಗಲಿ**
ಪ್ರಾಚಾರ್ಯರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಮಾಲೂರು, ಕೋಲಾರ ಜಿಲ್ಲೆ.

೨. **ಡಾ॥ ಪರಮಶಿವಮೂರ್ತಿ**
ಕನ್ನಡ ಪ್ರಾಧ್ಯಾಪಕರು
ತುಮಕೂರು ವಿಶ್ವವಿದ್ಯಾನಿಲಯ.

೩. **ಶ್ರೀ ಮಲೆಯೂರು ಗುರುಸ್ವಾಮಿ**
ವಿಶ್ರಾಂತ ಪ್ರಾಧ್ಯಾಪಕರು ಮತ್ತು ಲೇಖಕರು
ಮೈಸೂರು.

# ಅಭ್ಯಾಸ ಪುಸ್ತಕಕ್ಕೆ ಪ್ರವೇಶಿಸುವ ಮೊದಲು...........

ದ್ವಿತೀಯ ಪಿ.ಯು.ಸಿ. ಕನ್ನಡ ಭಾಷಾ ಪಠ್ಯಪುಸ್ತಕವಾದ 'ಸಾಹಿತ್ಯ ಸಂಪದ'ಕ್ಕೆ ಪೂರಕವಾಗಿ ಈ ಅಭ್ಯಾಸ ಪುಸ್ತಕ 'ಪಲ್ಲವ'ವನ್ನು ಹೊರತರಲಾಗಿದೆ. ಹೊಸ ಪಠ್ಯಕ್ರಮದನ್ವಯ ಕನ್ನಡ ಭಾಷಾ ಪಠ್ಯಕ್ಕೆ ಪ್ರತಿವಾರ ೫ ಅವಧಿಗಳ ಬೋಧನಾವಧಿಯನ್ನು ನಿಗದಿಪಡಿಸಿದೆ. ಒಟ್ಟು ಬೋಧನಾ ಅವಧಿಯಲ್ಲಿ ೨೦ ಗಂಟೆಗಳ ಅವಧಿಯನ್ನು ಅಭ್ಯಾಸ ಪುಸ್ತಕದ ಚಟುವಟಿಕೆಗಳಿಗೆ ಮೀಸಲಿಡುವುದು ಅಗತ್ಯ. ಇತ್ತೀಚಿನ ದಿನಗಳಲ್ಲಿ ಪಠ್ಯಕ್ಕೆ ಪೂರಕವಾದ ಅಭ್ಯಾಸ ಪುಸ್ತಕದ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಅಲಕ್ಷ್ಯ ತೋರುತ್ತಿರುವುದನ್ನು ಗಮನಿಸಿ, ಕಡ್ಡಾಯವಾಗಿ ಪಠ್ಯದ ಜೊತೆಜೊತೆಯಲ್ಲಿಯೇ ಅಭ್ಯಾಸ ಪುಸ್ತಕವನ್ನೂ ಗಂಭೀರವಾಗಿ ಪರಿಗಣಿಸಬೇಕೆಂದು ಸೂಚಿಸಲಾಗಿದೆ. ನಮ್ಮ ಮಾತೃಭಾಷೆಯನ್ನು ಅಗತ್ಯಕ್ಕೆ ತಕ್ಕಂತೆ ಬಳಸುವುದು ಮತ್ತು ಬೆಳೆಸುವುದು, ಸಂಸ್ಕೃತಿ–ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿವೆ. ಕನ್ನಡ ಭಾಷಾ ಉಪನ್ಯಾಸಕರುಗಳು ಪ್ರತಿ ತರಗತಿಗಳಲ್ಲೂ ಪಠ್ಯ ಬೋಧನೆಯೊಂದಿಗೆ ವಿದ್ಯಾರ್ಥಿಗಳು ಭಾಷಾಭ್ಯಾಸದಲ್ಲಿ ತೊಡಗುವಂತೆ ಪ್ರೇರೇಪಿಸಬೇಕಾಗಿದೆ.

ಕನ್ನಡ ಭಾಷೆಯ ಕಲಿಕೆಯಲ್ಲಿ ಸಾಹಿತ್ಯಾಧ್ಯಯನದ ಪ್ರಕ್ರಿಯೆಯ ಸಹಾನುವರ್ತಿಯಾಗಿ ಭಾಷೆಯ ಬಳಕೆ, ರಚನೆ, ಅಭ್ಯಾಸಗಳ ಮಗ್ಗುಲನ್ನೂ ಲಕ್ಷಿಸಬೇಕಾಗಿದೆ. ಅರ್ಥ, ಸಮಾನಾರ್ಥಕ ಪದಗಳು, ನಾನಾರ್ಥಕ ಪದಗಳು, ದೇಶ್ಯ–ಅನ್ಯದೇಶ್ಯ, ತತ್ಸಮ–ತದ್ಭವಗಳು, ನುಡಿಗಟ್ಟುಗಳು, ದ್ವಿರುಕ್ತಿಗಳು, ಮುಂತಾದ ಭಾಷೆಯ ವಿವಿಧ ರಚನಾ ಸ್ವರೂಪವನ್ನು ವಿದ್ಯಾರ್ಥಿಗಳು ಕಲಿಯಬೇಕಿರುವುದು ಅತ್ಯಂತ ಆವಶ್ಯಕ ಸಂಗತಿ. ಈ ದಿಸೆಯಲ್ಲಿ ದ್ವಿತೀಯ ಪಿ.ಯು.ಸಿ. ಹಂತದಲ್ಲಿ ವಿದ್ಯಾರ್ಥಿಗಳು ಪಠ್ಯದೊಂದಿಗೆ ವರ್ಷಪೂರ್ತಿ ಭಾಷಾಭ್ಯಾಸವನ್ನು ಕಲಿಯಲು ಅನುಕೂಲವಾಗುವಂತೆ ಪ್ರಸ್ತುತ ಪುಸ್ತಕವನ್ನು ರೂಪಿಸಲಾಗಿದೆ. ಈಗಾಗಲೇ 'ಸಾಹಿತ್ಯ ಸಂಪದ'ದ ಪ್ರತಿ ಪಾಠದ ಕೊನೆಯಲ್ಲಿ 'ಭಾಷಾಭ್ಯಾಸ' ಭಾಗವನ್ನು ನೀಡಲಾಗಿದೆ. ಅದರ ಮುಂದುವರಿಕೆಯ ರೂಪವಾಗಿ ಇಲ್ಲಿನ ಅಧ್ಯಾಯಗಳಿವೆ. ಅಧ್ಯಾಯದ ಕೊನೆಗೆ ನೀಡಿರುವ ಅಭ್ಯಾಸ ಭಾಗವು ವಿದ್ಯಾರ್ಥಿಗಳಲ್ಲಿ ಭಾಷಾ ರಚನೆಯ ಅರಿವನ್ನು ಮೂಡಿಸಬಹುದೆಂಬ ಆಶಯವಿದೆ.

ಪ್ರಸ್ತುತ ಅಭ್ಯಾಸ ಪುಸ್ತಕವು ಮುಖ್ಯವಾಗಿ ಪರೀಕ್ಷೆಯಲ್ಲಿ 'ಉ–ವಿಭಾಗ'ದಲ್ಲಿ ಕೇಳಲಾಗುವ ಪ್ರಶ್ನೆಗಳನ್ನೇ ಗಮನದಲ್ಲಿಟ್ಟುಕೊಂಡು ರಚಿತವಾಗಿದೆ.

**ಉ–ವಿಭಾಗಕ್ಕೆ ಒಟ್ಟು ಅಂಕಗಳು : ೩೦**

| | | |
|---|---|---|
| ಭಾವಾರ್ಥ ರಚನೆ | : | ೦೫ |
| ಭಾಷಾಭ್ಯಾಸ, ವ್ಯಾಕರಣ | : | ೧೨ |
| ಪ್ರಬಂಧ ರಚನೆ | : | ೦೫ |
| ಪತ್ರಲೇಖನ | : | ೦೪ |
| ಗಾದೆಮಾತಿನ ವಿಸ್ತರಣೆ | : | ೦೪ |
| ಒಟ್ಟು ಅಂಕಗಳು | : | ೩೦ |

ಉ–ವಿಭಾಗದಲ್ಲಿ ಕೇಳುವ ಪ್ರಶ್ನೆಗಳ ಕ್ರಮಾನುಸಾರದಂತೆಯೇ ಇಲ್ಲಿನ ಅಧ್ಯಾಯಗಳನ್ನು ಸಂಯೋಜಿಸಲಾಗಿದೆ. ಇದರಿಂದ ಭಾಷಾಭ್ಯಾಸವನ್ನು ಕಲಿಯುವುದರೊಂದಿಗೆ ಪ್ರಶ್ನೆಪತ್ರಿಕೆಯ ಸ್ವರೂಪವನ್ನು, ವಿತರಣೆ ಮಾಡಲಾಗಿರುವ ಅಂಕಗಳನ್ನು ಮತ್ತೆಮತ್ತೆ ಮನದಟ್ಟು ಮಾಡಿಕೊಳ್ಳುವ ಅವಕಾಶವಾಗುತ್ತದೆ.

ಈ ಅಭ್ಯಾಸ ಪುಸ್ತಕವು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ೩೦ ಅಂಕಗಳಿಗೆ ಭಾಷಾಭ್ಯಾಸ ಮತ್ತು ರಚನಾ ಭಾಗವನ್ನು ಉತ್ತರಿಸುವ ಚಟುವಟಿಕೆಗಳಿಗೆ ಪೂರಕ ಮಾತ್ರ. ಇಲ್ಲಿ ಸೂಚಿಸಿರದ ಎಷ್ಟೋ ವಿಷಯಗಳನ್ನು, ಪ್ರಯೋಗಗಳನ್ನು, ರಚನಾತ್ಮಕ ಅಭ್ಯಾಸಗಳನ್ನು ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ನಡೆಸಲು ಸಾಧ್ಯವಿದೆ. ಎಲ್ಲ ಹಂತಗಳಲ್ಲೂ ಉಪನ್ಯಾಸಕರು ಮಾರ್ಗದರ್ಶಕರಾಗಿದ್ದು ವಿದ್ಯಾರ್ಥಿಗಳಿಗೆ ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡಬಹುದಾಗಿದೆ. ಇಲ್ಲಿ ಅಭ್ಯಾಸಕ್ಕೆ ಸೂಚಿಸಿರುವ ಪದಗಳೇ–ವಿಷಯಗಳೇ ಪರೀಕ್ಷೆಗಳಲ್ಲಿ ಬರಬಹುದೆಂದು ಯಾರೂ ಭಾವಿಸಬೇಕಾದ ಅಗತ್ಯವಿಲ್ಲ. ಪಾಠಗಳನ್ನು ಓದುವಾಗ, ಕೇಳುವಾಗ ಇಂತಹ ಎಷ್ಟೋ ಸಂಗತಿಗಳಿಗೆ ನಾವು ಎದುರಾಗಬಹುದು. ಒಟ್ಟಾರೆ ಕಲಿಕೆಯ ಮುಖ್ಯ ಭಾಗವಾಗಿ ಇದನ್ನು ಗಮನಿಸಬೇಕೆಂದು ಸೂಚಿಸಬಯಸುತ್ತೇವೆ.

ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ಈ ಅಭ್ಯಾಸ ಪುಸ್ತಕವು ಉಪಯುಕ್ತವಾದುದು, ಅವರು ಸಂತೋಷದಿಂದ ಇದನ್ನು ಸ್ವಾಗತಿಸುತ್ತಾರೆ ಎಂದು ನಂಬಿದ್ದೇವೆ. ಈ ಪುಸ್ತಕವನ್ನು ಇನ್ನಷ್ಟು ಅರ್ಥಪೂರ್ಣವಾಗಿ ರೂಪಿಸಲು ಅಗತ್ಯವಾದ ಸಲಹೆಗಳನ್ನು ಅಧ್ಯಾಪಕರು ನೀಡುತ್ತಾರೆ ಎಂದು ಭಾವಿಸುತ್ತೇವೆ. 'ಪಲ್ಲವ'ದ ರಚನೆಯಲ್ಲಿ ಮಾರ್ಗದರ್ಶನ ನೀಡಿದ ಪರಿಶೀಲನಾ ಸಮಿತಿಯ ಸರ್ವಸದಸ್ಯರಿಗೆ, ಪಠ್ಯಪುಸ್ತಕ ಸಮಿತಿಯ ಎಲ್ಲ ಸದಸ್ಯರುಗಳಿಗೆ ಒತ್ತಾಸೆಯಾಗಿ ನಿಂತು ಪ್ರಕಟಿಸುತ್ತಿರುವ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು, ಸಹ ನಿರ್ದೇಶಕರುಗಳು, ಉಪನಿರ್ದೇಶಕರುಗಳು, ಸಹಾಯಕ ನಿರ್ದೇಶಕರುಗಳು, ಉಪನ್ಯಾಸಕ ಮಿತ್ರರಿಗೆ ನಮ್ಮ ಗೌರವಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ಅಭ್ಯಾಸ ಪುಸ್ತಕ ರಚನೆಯಲ್ಲಿ ಸೂಕ್ತ ಸಲಹೆಗಳನ್ನು ನೀಡಿ ಸಹಕರಿಸಿದ ಶ್ರೀಮತಿ ಎಂ.ಆರ್. ಕಮಲ, ಶ್ರೀಮತಿ ಸಿ.ಎಚ್. ಭಾಗ್ಯ, ಕಳಸಾಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಂ.ಡಿ. ಸುದರ್ಶನ್ ಅವರಿಗೆ ಕೃತಜ್ಞತೆಗಳು. ಅಂದವಾಗಿ ಡಿ.ಟಿ.ಪಿ. ಮಾಡಿದ ಶ್ರೀ ರಾಘವೇಂದ್ರ ರಾವ್ ಅವರಿಗೆ, ಮುಖಪುಟ ವಿನ್ಯಾಸದಲ್ಲಿ ಕೈಜೋಡಿಸಿದ ವರ್ತೂರು ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಶಂಕರ ರೆಡ್ಡಿ ಅವರಿಗೆ ಕೃತಜ್ಞತೆಗಳು.

**ಅವಧರಿಪುದು ವಿಬುಧರ್ ದೋ**
**ಷ ವಿದಱಿಕೊಳೇನಾನುಮುಳ್ಳೊಡಂ ಪ್ರಿಯದಿಂ ತಿ**
**ರ್ದುವುದು ಗುಣಯುಕ್ತಮುಂ ದೋ**
**ಷವಿದೂರಮುಮಾಗೆ ಮೆಚ್ಚಿಕೊಳ್ವುದಿದಂ**

**ಡಾ.ಎಚ್.ಎಸ್. ಸತ್ಯನಾರಾಯಣ**
ಸಂಚಾಲಕರು
ಕನ್ನಡ ಪಠ್ಯ ಪುಸ್ತಕ ರಚನಾ ಸಮಿತಿ

**ಕೆ.ಎಸ್. ಸಿದ್ಧಲಿಂಗಪ್ಪ**
ಅಧ್ಯಕ್ಷರು
ಕನ್ನಡ ಪಠ್ಯ ಪುಸ್ತಕ ರಚನಾ ಸಮಿತಿ

# : ಪರಿವಿಡಿ :


| | | |
|---|---|---|
| ೧. | ಪದ್ಯಗಳ ಭಾವಾರ್ಥ ರಚನೆ | ೧ |
| ೨. | ಸಮಾನಾರ್ಥಕಗಳು | ೧೧ |
| ೩. | ನಾನಾರ್ಥಕಗಳು | ೧೩ |
| ೪. | ದೇಶ್ಯ | ೧೭ |
| | ಅನ್ಯದೇಶ್ಯಗಳು | ೧೮ |
| | ತತ್ಸಮ–ತದ್ಭವಗಳು | ೨೧ |
| ೫. | ನುಡಿಗಟ್ಟುಗಳು | ೨೪ |
| ೬. | ದ್ವಿರುಕ್ತಿಗಳು | ೨೮ |
| ೭. | ನಾಮಪದಗಳು | ೩೧ |
| | ಗುಣವಾಚಕಗಳು | ೩೨ |
| | ವಿಭಕ್ತಿ ಪ್ರತ್ಯಯಗಳು | ೩೬ |
| ೮. | ಕ್ರಿಯಾಪದಗಳು | ೩೮ |
| | ಧಾತು | ೩೮ |
| | ಕಾಲಸೂಚಕಗಳು | ೩೯ |
| | ನಿಷೇಧಾರ್ಥಕ ರೂಪ | ೪೨ |
| ೯. | ಪ್ರಬಂಧ ರಚನೆ | ೪೫ |
| ೧೦. | ಪತ್ರಲೇಖನ | ೫೧ |
| ೧೧. | ಗಾದೆಮಾತಿನ ವಿಸ್ತರಣೆ | ೫೭ |
| ೧೨. | ಅನುಬಂಧ : ಲೇಖನ ಚಿಹ್ನೆಗಳು | ೬೩ |

# ೧. ಪದ್ಯಭಾಗದ ಭಾವಾರ್ಥ ರಚನೆ

ಪದ್ಯದ ಭಾವಾರ್ಥವನ್ನು ರಚಿಸುವುದು ವಿದ್ಯಾರ್ಥಿಯ ಗ್ರಹಿಕೆ ಮತ್ತು ರಚನಾ ಸಾಮರ್ಥ್ಯವನ್ನು ಪರೀಕ್ಷಿಸುವಂತಿರುತ್ತದೆ. ಪರೀಕ್ಷೆಯಲ್ಲಿ ಪದ್ಯದ ಭಾವಾರ್ಥ ರಚನೆಗೆ ಐದು ಅಂಕಗಳನ್ನು ನಿಗದಿಗೊಳಿಸಲಾಗುವುದು. 'ಉ' ವಿಭಾಗದಲ್ಲಿ ಸಾಮಾನ್ಯವಾಗಿ ಮೊದಲಿಗೆ, ಪ್ರಶ್ನೆ ಸಂಖ್ಯೆ ೪೧, ೪೨ರಲ್ಲಿ ಎರಡು ಪದ್ಯಭಾಗಗಳನ್ನು ಕೊಟ್ಟು ಒಂದಕ್ಕೆ ಭಾವಾರ್ಥ ಬರೆಯುವಂತೆ ಕೇಳುವುದು ರೂಢಿ. ಈ ಎರಡರಲ್ಲಿ ಒಂದು ಹಳಗನ್ನಡ/ನಡುಗನ್ನಡ ಕಾವ್ಯಭಾಗದಿಂದಲೂ ಇನ್ನೊಂದು ಹೊಸಗನ್ನಡ ಪದ್ಯದಿಂದಲೂ ಆಯ್ದವುಗಳು. ವಿಶೇಷ ವಿಚಾರವನ್ನು, ವೈಶಿಷ್ಟ್ಯಪೂರ್ಣ ಸಂಗತಿಗಳನ್ನು, ಪದ್ಯದ ಮುಖ್ಯ ಆಶಯವನ್ನು ಬಿಂಬಿಸುವ ಪದ್ಯಭಾಗಗಳನ್ನು ಭಾವಾರ್ಥಕ್ಕೆ ಕೇಳಬೇಕಾಗುವುದು ಅಪೇಕ್ಷಣೀಯ.

ವಿದ್ಯಾರ್ಥಿಗಳು ಭಾವಾರ್ಥವನ್ನು ಬರೆಯುವಾಗ ಈ ಕೆಳಕಂಡ ಅಂಶಗಳನ್ನು ಗಮನಿಸಬೇಕು:

೧. ಎರಡರಲ್ಲಿ ಯಾವ ಪದ್ಯವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಉತ್ತರಿಸಬಲ್ಲೆ ಎಂಬುದನ್ನು ನಿರ್ಧರಿಸುವುದು ಮುಖ್ಯ. ಆಯ್ಕೆ ಮಾಡಿಕೊಂಡ ಪದ್ಯಭಾಗವನ್ನು ಪುನಃ ಪುನಃ ಓದಿಕೊಂಡು ಭಾವವನ್ನು ಗ್ರಹಿಸಿಕೊಳ್ಳಬೇಕು. ಆನಂತರ ಭಾವಸ್ವಾರಸ್ಯ ವಿವರಣೆಗೆ ಮುಂದಾಗಬೇಕು.

೨. ಪದ್ಯವನ್ನು ರಚಿಸಿರುವ ಕವಿ, ಪದ್ಯದ ಶೀರ್ಷಿಕೆಗಳ ಉಲ್ಲೇಖವನ್ನೂ ಆರಂಭದಲ್ಲಿ ಮಾಡಬೇಕು. ಪದ್ಯ ಭಾಗದ ಸಂದರ್ಭವನ್ನು ಒಂದೆರಡು ವಾಕ್ಯದಲ್ಲಿ ವಿವರಿಸುವುದು ಸೂಕ್ತ.

೩. ಪದ್ಯಭಾಗದಲ್ಲಿರುವ ಸ್ವಾರಸ್ಯವನ್ನು/ಭಾವಾರ್ಥವನ್ನು ಅರ್ಥಕ್ಕೆ ಕುಂದು ಬಾರದಂತೆ ವಿವರಿಸಬೇಕು. ಐದು ಅಂಕಗಳ ಪ್ರಶ್ನೆ ಇದಾಗಿರುವುದರಿಂದ ಎರಡು–ಮೂರು ಪ್ಯಾರಾಗಳಲ್ಲಿ ಉತ್ತರಿಸುವ ಪ್ರಯತ್ನ ಮಾಡಬೇಕು.

೪. ಮುಖ್ಯವಾದ ಪದ್ಯಗಳನ್ನು ಅಧ್ಯಾಪಕರ ಸಹಾಯದಿಂದ ಗುರುತು ಹಾಕಿಕೊಂಡು, ಅವುಗಳ ಭಾವಾರ್ಥವನ್ನು ಕೇಳಿ ತಿಳಿದುಕೊಂಡು ಉತ್ತರಿಸಲು ಅಭ್ಯಾಸಮಾಡಿಕೊಳ್ಳಬೇಕು. ಎರಡು–ಮೂರು ಬಾರಿ ಮನಸಿಟ್ಟು ಓದುವುದು, ಕಠಿಣ ಶಬ್ದಗಳ ಅರ್ಥವನ್ನು ನಿಘಂಟಿನ ನೆರವಿನಿಂದ ಗ್ರಹಿಸಿ, ವಿಷಯ ಮನನ ಮಾಡಿಕೊಳ್ಳಬೇಕು. ಸಂಗ್ರಹಿಸಿ ಬರೆಯುವ ಕೌಶಲವನ್ನು ರೂಢಿಸಿಕೊಳ್ಳಬೇಕು.

ಭಾವಾರ್ಥವನ್ನು ಬರೆಯುವುದಕ್ಕೆ ಹಲವಾರು ಕ್ರಮಗಳಿರಬಹುದು. ಈ ಮೇಲ್ಕಂಡ ಅಂಶಗಳೆಲ್ಲವನ್ನೂ ದೃಷ್ಟಿಯಲ್ಲಿರಿಸಿಕೊಂಡು ಎರಡು ಪದ್ಯಗಳ ಭಾವಾರ್ಥವನ್ನು ಮಾದರಿಗಾಗಿ ಈ ಕೆಳಗೆ ನೀಡಿದೆ. ಜೊತೆಗೆ ಪದ್ಯಭಾಗದಿಂದಾಯ್ದ ಕೆಲವು ಪದ್ಯಗಳನ್ನು ನಿಮ್ಮ ಅಭ್ಯಾಸಕ್ಕಾಗಿ ನೀಡಲಾಗಿದೆ. ಇಲ್ಲಿ ನೀಡಿರುವ ಪದ್ಯಗಳೇ ಪರೀಕ್ಷೆಗೆ ಬರುತ್ತವೆಂದು ಭಾವಿಸುವ ಅಗತ್ಯವಿಲ್ಲ. ಮುಖ್ಯವಾಗಿ ಇವು ಅಭ್ಯಾಸಕ್ಕಾಗಿ ನೀಡಿರುವುವೆಂಬುದನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ಪ್ರಶ್ನೆಪತ್ರಿಕೆಯಲ್ಲಿ ಬರುವ ವಿಭಾಗ ಮತ್ತು ಪ್ರಶ್ನೆಸಂಖ್ಯೆಗಳನ್ನೇ ಉದಾಹರಣೆಯಲ್ಲಿ ನೀಡಿದೆ. ಇದರಿಂದ ಪ್ರಶ್ನೆಪತ್ರಿಕೆಯ ಸ್ವರೂಪವನ್ನು ಮನದಟ್ಟು ಮಾಡಿಕೊಳ್ಳಲು ನೆರವಾಗಬಹುದು.

**ಅ) ಇವುಗಳಲ್ಲಿ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ: (೧ × ೫ = ೫)**

**೪೧. ಕದಡಿದ ಸಲಿಲಂ ತಿಳಿವಂ**
**ದದೆ ತನ್ನಿಂ ತಾನೆ ತಿಳಿದ ದಶವದನಂಗಾ**

**ದುದು ವೈರಾಗ್ಯಂ ಸೀತೆಯೊ**
**ಋದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ.**

ಅಭಿನವ ಪಂಪನೆಂದೇ ಖ್ಯಾತನಾಗಿರುವ ನಾಗಚಂದ್ರನು ರಚಿಸಿರುವ 'ಶ್ರೀರಾಮಚಂದ್ರಚರಿತ ಪುರಾಣ' ದಿಂದಾಯ್ದ "ಕದಡಿದ ಸಲಿಲಂ ತಿಳಿವಂದದೆ" ಎಂಬ ಕಾವ್ಯಭಾಗದಿಂದ ಈ ಮೇಲಿನ ಪದ್ಯವನ್ನು ಸ್ವೀಕರಿಸಲಾಗಿದೆ.

ಸೀತೆಯ ವಿಚಾರದಲ್ಲಿ ರಾವಣನ ಮನಸ್ಸು ಪರಿವರ್ತನೆಗೊಳ್ಳುವ ಸಂದರ್ಭವನ್ನು ಕವಿಯು ಈ ಮೇಲಿನ ಪದ್ಯದಲ್ಲಿ ಚಿತ್ರಿಸಿದ್ದಾನೆ. ಸೀತೆಯನ್ನು ಅಪಹರಿಸಿದ್ದರಿಂದ ನಿರ್ಮಲ ವ್ಯಕ್ತಿತ್ವದ ರಾವಣನ ಚಿತ್ತ ಕಲುಷಿತಗೊಂಡು ರಾಡಿಯಾಗಿದ್ದಿತು. ಸೀತೆಯು ರಾವಣನನ್ನು ತೃಣಸಮಾನನೆಂದು ನಿರಾಕರಿಸಿ, ಮೂರ್ಛಿತಳಾದಾಗ ರಾವಣನ ಚಿತ್ತವು ಅವಳ ವಿಚಾರದಲ್ಲಿ ಬದಲಾಗುತ್ತದೆ. ಅವಳ ವಿಚಾರದಲ್ಲಿ ವೈರಾಗ್ಯ ಉದಯಿಸುತ್ತದೆ.

"ಕದಡಿ ಹೋಗಿದ್ದ ನೀರು ತನಗೆ ತಾನೇ ತಿಳಿಯಾಗುವಂತೆ, ರಾವಣನ ಚಿತ್ತವೂ ತನ್ನಿಂದ ತಾನೇ ತಿಳಿಗೊಂಡು, ಸೀತೆಯ ವಿಚಾರದಲ್ಲಿ ವೈರಾಗ್ಯವು ಮೂಡಿತು. ಶ್ರೇಷ್ಠರಾದವರಲ್ಲಿ ಮಾತ್ರವೇ ಸ್ಥಿರವಾದ ಪ್ರೀತಿ ಹುಟ್ಟುವುದಲ್ಲವೇ?" ಎಂಬುದು ಈ ಮೇಲಿನ ಪದ್ಯದ ಭಾವವಾಗಿದೆ. ಸೀತೆಯ ರೂಪಕ್ಕೆ ಮಾರುಹೋಗಿ ಅವಳನ್ನು ಅಪಹರಿಸುವ ಮೂಲಕ ತನ್ನ ಮನವೆಂಬ ನಿರ್ಮಲ ಕೊಳವನ್ನು ರಾಡಿಗೊಳಿಸಿಕೊಂಡಿದ್ದ ರಾವಣನಲ್ಲಿ ಪಶ್ಚಾತ್ತಾಪ–ಪರಿವರ್ತನೆಗಳು ಮೂಡಿ, ಕದಡಿದ ನೀರು ತಿಳಿಗೊಳ್ಳುವಂತೆ ಬದಲಾದ ಸಂದರ್ಭವನ್ನು ಕವಿಯು ಇಲ್ಲಿ ಸುಂದರವಾಗಿ ಚಿತ್ರಿಸಿದ್ದಾನೆ. ಸೀತೆಯ ಸ್ಥಿರಮನಸ್ಸಿನ ತಿರಸ್ಕಾರ, ರಾವಣನ ಅಹಂಕಾರವನ್ನು ಬಾಗಿಸಿದೆ. ನೀಲೀರಾಗ ಎಂಬುದಕ್ಕೆ ಸ್ಥಿರಪ್ರೀತಿ ಎಂಬರ್ಥವಿರುವಂತೆಯೇ ನೀಲಿ ಅನಂತವನ್ನು ಸಂಕೇತಿಸುತ್ತದೆಂಬುದನ್ನೂ ಕವಿ ಧ್ವನಿಸಿದ್ದಾನೆ. ರಾವಣನ ಮನಸ್ಸು ಆಕಾಶದಂತೆ ಅನಂತವೆಂಬರ್ಥವೂ ಸ್ಫುರಿಸಿ, ಈ ಪದ್ಯವನ್ನು ಸ್ವಾರಸ್ಯಕರಗೊಳಿಸಿದೆ. ಈ ಪದ್ಯದ ಮೊದಲ ಚರಣವು ಪ್ರಸ್ತುತ ಪದ್ಯಭಾಗದ ಶೀರ್ಷಿಕೆಯೂ ಆಗಿರುವ ವಿಶೇಷವನ್ನು ಗಮನಿಸಬಹುದು.

**೪೨. ಸಾವಿರ ಗಾಲಿ ಉರುಳಿ ಹೊರಳುವ ರಸ್ತೆಯಂಚಿನಲ್ಲೇ**
**ಕೈ ಹಿಡಿದು ನಡೆಸಿದವಳು. ಇರುವ ಒಂದಿಂಚು**
**ಕೋಣೆಯಲ್ಲೇ ಹೊರಲೋಕವನು ಪರಿಚಯಿಸಿ**
**ಎಚ್ಚರಿಕೆ ಕೊಟ್ಟವಳು.**

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ರಚಿಸಿರುವ 'ಮುಂಬೈ ಜಾತಕ' ಎಂಬ ಕವಿತೆಯಿಂದ ಈ ಮೇಲಿನ ಪದ್ಯಭಾಗವನ್ನು ಸ್ವೀಕರಿಸಲಾಗಿದೆ. 'ತೆರೆದ ದಾರಿ' ಎಂಬ ಜಿ.ಎಸ್.ಎಸ್. ಅವರ ಕೃತಿಯು ಪ್ರಸ್ತುತ ಪದ್ಯದ ಮೂಲ ಆಕರವಾಗಿದೆ.

ತಾಯಿಯು ಮಗುವಿಗೆ ಗೋಚರಿಸುವ ಬಗೆಯನ್ನು ಕವಿ ಈ ಭಾಗದಲ್ಲಿ ಚಿತ್ರಿಸಿದ್ದಾರೆ. ಬೃಹತ್ ನಗರಗಳಲ್ಲಿ ವಾಸಿಸುವ ಅವಸರದ ಬದುಕಿನ ಯಾಂತ್ರಿಕತೆಯನ್ನು ವಿವರಿಸಿರುವ ಕವಿತೆಯು ತಂದೆ–ತಾಯಿಯರ ವಾತ್ಸಲ್ಯ, ಪ್ರೀತಿ, ಮಮತೆ, ಆರೈಕೆಗಳಲ್ಲಿ ಕೃತಕವಾದ ಹೊಣೆಗಾರಿಕೆ ವ್ಯಕ್ತವಾಗುವುದನ್ನು ನವಿರಾಗಿ ಚಿತ್ರಿಸಿದೆ.

ತಾಯಿಯು ಮಗುವಿನ ಪಾಲಿಗೆ ಮಮತಾಮಯಿ, ಕರುಣಾಮಯಿಯಾಗಿ ತೋರಿಲ್ಲ. ಸಾವಿರಾರು ವಾಹನಗಳು ಸಂಚರಿಸುವ ರಸ್ತೆಯಂಚಿನಲ್ಲಿ ಕೈಹಿಡಿದುಕೊಂಡು ನಡೆಸಿದ್ದು, ಇರುವ ಪುಟ್ಟ ಕೋಣೆಯಿಂದಲೇ ಹೊರ ಜಗತ್ತನ್ನು ಮಗುವಿಗೆ ಪರಿಚಯಿಸಿ ಎಚ್ಚರಿಕೆ ಕೊಟ್ಟದ್ದು ಮಾತ್ರ ನೆನಪಾಗುವಂತಿದೆ. ಯಾಂತ್ರಿಕ ಬದುಕಿನ ಹೋರಾಟಕ್ಕೆ ಮಗುವನ್ನು ಸಜ್ಜುಗೊಳಿಸುವ ಕೃತಕ ಹೊಣೆಗಾರಿಕೆಯನ್ನು ತಾಯಿ ಇಲ್ಲಿ ನಿರ್ವಹಿಸಿರುವುದನ್ನು ಗಮನಿಸಬಹುದು. ಅವಳು ಮುದ್ದಿಸಿದ ನೆನಪೂ ಮಗುವಿಗೆ ಬರುತ್ತಿಲ್ಲ. ಕರುಳುಬಳ್ಳಿಯ ಸಂಬಂಧವನ್ನು ಕೃತಕವಾಗಿಸುವ ನಗರ ಜೀವನದ ಧಾರುಣತೆಯು ಇಲ್ಲಿ ವ್ಯಕ್ತಗೊಂಡಿರುವುದನ್ನು ಅರಿಯಬಹುದು. ಜೀವನೋಪಾಯಕ್ಕಾಗಿ ನಗರಕ್ಕೆ ವಲಸೆ ಬರುವವರ ಸಂಖ್ಯೆ ವೃದ್ಧಿಸುತ್ತಿರುವ ಇಂದಿನ ದಿನಗಳಲ್ಲಿ ಜಿ.ಎಸ್. ಶಿವರುದ್ರಪ್ಪನವರ ಈ ಕವಿತೆಯು ಹೆಚ್ಚು ಪ್ರಸ್ತುತವೆನಿಸಿದೆ.

## : ಅಭ್ಯಾಸ ಭಾಗ :

**ಈ ಮುಂದೆ ಸೂಚಿಸಿರುವ ಪದ್ಯಗಳ ಭಾವಾರ್ಥ ಬರೆಯುವುದನ್ನು ಅಧ್ಯಾಪಕರ ಸಹಾಯದೊಂದಿಗೆ ಅಭ್ಯಾಸ ಮಾಡುವುದು:**

೧. ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆನ್ನೊಳಿದಿರ್ಚುವನ್ನರಾರ್
ಸಮರದೊಳೆಂದು ತನ್ನ ಭುಜದಂಡಮನೀಕ್ಷಿಸಿ ಜಾನಕೀಮುಖಾ
ಬ್ಜಮನವಲೋಕಿಸಲ್ ಕರಮೆ ಕಾತರನಾಗಿ ವಿಯಚ್ಚರಾಧಿಪಂ
ಪ್ರಮದವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

..........................................................................................

೨. ರಾಮನಿನಗಲ್ಚಿ ತಂದಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
ಕಾಮವ್ಯಾಮೋಹದಿನಾ
ಶಾಮುಖಮಂ ಪುದಿಯೆ ದುರ್ಯಶಃಪಟಹರವಂ

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

..............................................................................................................................

೩. ಪರುಷದ ಗೃಹದೊಳಗಿದ್ದು, ತಿರಿವನೆ ಮನೆಮನೆಯ?
ತೊರೆಯೊಳಗಿದ್ದವನು, ತೃಷೆಯಾಗಲರಸುವನೆ ಕೆರೆಯುದಕವ?
ಮಂಗಳಲಿಂಗ ಅಂಗದ ಮೇಲೆ ಇದ್ದು,
ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

೪. ಇನ್ನು ಹುಟ್ಟದೆಯಿರಲಿ ನಾರಿಯ
ರೆನ್ನವೊಲು ಭಂಗಿತರು ಭುವನದೊ
ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು
ಎನ್ನವೊಲು ಪಾಂಡವರವೊಲು ಸಂ
ಪನ್ನ ದುಃಖಿಗಳಾರು ನವೆದರು
ಮುನ್ನಿನವರೊಳಗೆಂದು ದ್ರೌಪದಿ ಹಿರಿದು ಹಲುಬಿದಳು

...................................................................................................................

೫. ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ.

೬. ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯತುರಿಕೆ, ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ, ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು

**ಮೂರು ಅಂಕಗಳಿಗೆ ಸಂದರ್ಭ ಸ್ವಾರಸ್ಯ ವಿವರಿಸುವಾಗ ಮತ್ತು ಐದು ಅಂಕಗಳಿಗೆ ಪದ್ಯದ ಭಾವಾರ್ಥ ಬರೆಯುವಾಗ ಆರಂಭದಲ್ಲಿ ಕವಿ–ಕೃತಿ ವಿವರ ನೀಡುವುದು ಅಪೇಕ್ಷಣೀಯ. ಪಠ್ಯಪುಸ್ತಕದಲ್ಲಿರುವ ಕವಿ–ಕಾವ್ಯ, ಲೇಖಕರ ಪರಿಚಯ ಭಾಗವನ್ನು ವಿವರವಾಗಿ ಅಭ್ಯಾಸಮಾಡಿರಿ. ನೆನಪಿಟ್ಟುಕೊಳ್ಳುವ ಸಲುವಾಗಿ ಈ ಮುಂದೆ ನೀಡಿರುವ ಅಂಕಣಗಳಲ್ಲಿ ವಿವರವನ್ನು ತುಂಬಿರಿ:**

| ಕ್ರಮ ಸಂಖ್ಯೆ | ಕವಿಯ/ಲೇಖಕರ ಹೆಸರು | ಕಾವ್ಯನಾಮ (ಅಂಕಿತ, ಜನನ) | ಕೆಲವು ಕೃತಿಗಳ ಹೆಸರು |
|---|---|---|---|
| | ಉದಾ: ನಾಗಚಂದ್ರ | ಅಭಿನವ ಪಂಪ | ಶ್ರೀರಾಮಚಂದ್ರಚರಿತ ಪುರಾಣ, ಮಲ್ಲಿನಾಥ ಪುರಾಣ |
| ೧. | ಬಸವಣ್ಣ | ಅಂಕಿತ: ............................ | ಕಾಲ: ....................................... |
| ೨. | ಉರಿಲಿಂಗಪೆದ್ದಿ | ಅಂಕಿತ: ............................ | ಕಾಲ: ....................................... |
| ೩. | ಗದುಗಿನ ನಾರಾಣಪ್ಪ | ಕಾವ್ಯನಾಮ: ...................... | ಕೃತಿ: ....................................... |
| ೪. | ಪುಲಿಗೆರೆ ಸೋಮನಾಥ | ಅಂಕಿತ: ............................ | ಕೃತಿ: ....................................... |
| ೫. | ಶ್ರೀನಿವಾಸನಾಯಕ | ಅಂಕಿತ: ............................ | ಕಾಲ: ....................................... |
| ೬. | ದ.ರಾ. ಬೇಂದ್ರೆ | ಕಾವ್ಯನಾಮ: ...................... | ಕೃತಿ: ....................................... |
| ೭. | ಜಿ.ಎಸ್. ಶಿವರುದ್ರಪ್ಪ | ಕಾಲ: ................................ | ಕೃತಿ: ....................................... |
| ೮. | ಕೆ.ಎಸ್. ನಿಸಾರ್ ಅಹಮದ್ | ಜನನ: ................................ | ಕೃತಿ: ....................................... |

| | | | |
|---|---|---|---|
| ೯. | ಟಿ. ಯಲ್ಲಪ್ಪ | ಜನನ: ............................... | ಕೃತಿ: ...................................... |
| ೧೦. | ಲಲಿತಾ ಸಿದ್ಧಬಸವಯ್ಯ | ಜನನ: ............................... | ಕೃತಿ: ...................................... |
| ೧೧. | ಸುಕನ್ಯಾ ಮಾರುತಿ | ಜನನ: ............................... | ಕೃತಿ: ...................................... |
| ೧೨. | ಪಿ. ಲಂಕೇಶ್ | ಕಾಲ: ............................... | ಕೃತಿ: ...................................... |
| ೧೩. | ಕೃಪಾಕರ, ಸೇನಾನಿ | ಜನನ: ............................... | ಕೃತಿ: ...................................... |
| ೧೪. | ನೇಮಿಚಂದ್ರ | ಜನನ: ............................... | ಕೃತಿ: ...................................... |
| ೧೫. | ಹಾ.ಮಾ. ನಾಯಕ | ಕಾಲ: ............................... | ಕೃತಿ: ...................................... |
| ೧೬. | ಎಚ್. ನಾಗವೇಣಿ | ಜನನ: ............................... | ಕೃತಿ: ...................................... |
| ೧೭. | ಎಚ್.ಆರ್. ರಾಮಕೃಷ್ಣರಾವ್ | ಜನನ: ............................... | ಕೃತಿ: ...................................... |
| ೧೮. | ನಂದಳಿಕೆ ಲಕ್ಷ್ಮೀನಾರಾಯಣಪ್ಪ | ಕಾವ್ಯನಾಮ: ........................ | ಕೃತಿ: ...................................... |
| ೧೯. | ವೀರೇಂದ್ರ ಸಿಂಪಿ | ಜನನ: ............................... | ಕೃತಿ: ...................................... |
| ೨೦. | ಕೆ.ಪಿ. ಪೂರ್ಣಚಂದ್ರ ತೇಜಸ್ವಿ | ಕಾಲ: ............................... | ಕೃತಿ: ...................................... |

# ೨. ಸಮಾನಾರ್ಥಕಗಳು

ಪದಸಂಪತ್ತನ್ನು ಶ್ರೀಮಂತವಾಗಿಸಿಕೊಂಡಷ್ಟೂ ಭಾಷೆಯ ಮೇಲಿನ ನಮ್ಮ ಪ್ರಭುತ್ವ ಬಲಗೊಳ್ಳುತ್ತದೆ. ನಿಘಂಟಿನ ಸಹಾಯದಿಂದ ಪದಕ್ಕಿರುವ ಇತರೆ ಸಮಾನ ಅರ್ಥಗಳನ್ನು ಅರಿಯುವ ಪ್ರಯತ್ನ ಮಾಡಬೇಕು. ಯಾವುದೇ ಭಾಷೆಯನ್ನು ಕಲಿಯುವುದೆಂದರೆ ಆ ಭಾಷೆಯ ಶಬ್ದಸಂಪತ್ತನ್ನು ನಮ್ಮದಾಗಿಸಿಕೊಳ್ಳಬೇಕು. ಪದವೊಂದಕ್ಕೆ ಸಮಾನವಾದ ಅರ್ಥವನ್ನು ಕೊಡುವ ಅನೇಕ ಪದಗಳಿರುತ್ತವೆ. ಪದಬಂಧವನ್ನು ತುಂಬುವುದರಿಂದ, ಪದಗಳೊಡನೆ ಆಡುವುದರಿಂದ ಅವುಗಳನ್ನು ನಮ್ಮದಾಗಿಸಿಕೊಳ್ಳಬೇಕು. ಪರೀಕ್ಷೆಯಲ್ಲಿ ಪದದ ಅರ್ಥ ಬರೆಯುವಂತೆ ಕೇಳಿದಾಗ ಸಾಮಾನ್ಯವಾಗಿ ಒಂದು ಅರ್ಥವನ್ನು ಬರೆಯುತ್ತೇವಲ್ಲವೇ? ಸಮಾನಾರ್ಥಕಗಳನ್ನು ಕೇಳಿದಾಗ ಎರಡಕ್ಕಿಂತ ಹೆಚ್ಚಿನ ಪದಗಳನ್ನು ಬರೆಯುವುದನ್ನು ರೂಢಿಸಿಕೊಳ್ಳಬೇಕು. ಕನ್ನಡ ಸಾಹಿತ್ಯ ಪರಿಷತ್ತಿನ "ಕನ್ನಡ ರತ್ನಕೋಶ"ವನ್ನು ನಿಮ್ಮ ಸಂಗಾತಿಯಾಗಿಸಿಕೊಳ್ಳಿ. ಅದರ ಜೊತೆಗೆ ಲಭ್ಯವಿರುವ ಇನ್ನಿತರ ಅತ್ಯುತ್ತಮ ನಿಘಂಟುಗಳನ್ನು ಪರಾಮರ್ಶಿಸುವುದರಿಂದ ಅರ್ಥ, ನಾನಾರ್ಥ, ಸಮಾನಾರ್ಥ, ನುಡಿಗಟ್ಟು ಮುಂತಾದ ವಿಭಾಗಗಳನ್ನು ಪರೀಕ್ಷೆಯಲ್ಲಿ ಸುಲಭವಾಗಿ ಉತ್ತರಿಸಲು ಸಹಾಯವಾಗುತ್ತದೆ. ಸಮಾನಾರ್ಥಕಗಳಲ್ಲಿ ದೇಶ್ಯ–ಅನ್ಯದೇಶ್ಯಗಳೆಲ್ಲವೂ ಸೇರಿಕೊಳ್ಳುವ ವಿಶೇಷವನ್ನು ಗಮನಿಸಬಹುದು.

*ಉದಾಹರಣೆಗೆ :* 'ಭೂಮಿ' ಎಂಬುದಕ್ಕೆ ಅವನಿ, ಧರೆ, ಪೃಥ್ವಿ, ಇಳೆ, ವಸುಧೆ ಮುಂತಾದ ಸಮಾನ ಅರ್ಥಕೊಡುವ ಪದಗಳಿವೆ. ಇದೇ ರೀತಿಯಲ್ಲಿ ಪಠ್ಯದಲ್ಲಿ ಬಂದಿರುವ ಈ ಕೆಳಗಿನ ಪದಗಳಿಗೆ ಎರಡಕ್ಕಿಂತ ಹೆಚ್ಚಿನ ಸಮಾನಾರ್ಥಕಗಳನ್ನು ಬರೆಯಲು ಅಭ್ಯಾಸ ಮಾಡಿರಿ.

೧. ಚಂದ್ರ – ......................................
೨. ಕಾಂತಾರ – ......................................
೩. ಬಾನು – ......................................
೪. ಕೂಳು – ......................................
೫. ನಾರಿ – ......................................
೬. ಕಾಳ – ......................................
೭. ಕಣ್ಣು – ......................................
೮. ಉರಗ – ......................................
೯. ಮನೆ – ......................................
೧೦. ಅನಲ – ......................................
೧೧. ಅದುರು – ......................................
೧೨. ಅಶ್ರು – ......................................
೧೩. ಇನ – ......................................
೧೪. ಇಂಗು – ......................................
೧೫. ಉಂಬು – ......................................
೧೬. ಒಡಲು – ......................................

೧೭. ಉಪಟಳ – ......................................

೧೮. ಕಂತೆ – ......................................

೧೯. ಕವಲು – ......................................

೨೦. ಕಡಲು – ......................................

೨೧. ಕಲಹ – ......................................

೨೨. ಕೊರಗು – ......................................

೨೩. ಚಿತ್ತ – ......................................

೨೪. ಛಾತಿ – ......................................

೨೫. ತೃಷೆ – ......................................

೨೬. ತಮ – ......................................

೨೭. ದಿಗಿಲು – ......................................

೨೮. ದಿನ್ನೆ – ......................................

೨೯. ಗುಡಿ – ......................................

೩೦. ಧನ – ......................................

೩೧. ಧಣಿ – ......................................

೩೨. ಧನಿಕ – ......................................

೩೩. ತಾರೆ – ......................................

೩೪. ನಿತ್ರಾಣ – ......................................

೩೫. ಪಥ – ......................................

೩೬. ಪ್ರಮೋದ – ......................................

೩೭. ಪರಿಮಳ – ......................................

೩೮. ಪುಷ್ಪ – ......................................

೩೯. ಬಂಗಾರ – ......................................

೪೦. ಬಾಲಕ – ......................................

೪೧. ಮರ – ......................................

೪೨. ಮಾಹೆ – ......................................

೪೩. ಮಾರ – ......................................

೪೪. ಮರ್ಕಟ – ......................................

೪೫. ರಮಣ – ......................................

೪೬. ವಲ್ಲಭೆ – ......................................

೪೭. ವ್ಯಗ್ರ – ......................................

೪೮. ಸಮರ – ......................................

೪೯. ಸೊರಗು – ......................................

೫೦. ಸುತ – ......................................

# ೩. ನಾನಾರ್ಥಕಗಳು

ಪ್ರತಿಯೊಂದು ಭಾಷೆಗಳಲ್ಲಿ ಬಳಕೆಯಾಗುವ ಕೆಲವು ಪದಗಳಿಗೆ ಬಗೆಬಗೆಯ ಅರ್ಥಗಳಿರುತ್ತವೆ. ಇವು ಸಮಾನಾರ್ಥ–ವಿರುದ್ಧಾರ್ಥಗಳಾಗಿರದೆ ನಾನಾ ಬಗೆಯ ಅರ್ಥವನ್ನು ಸ್ಫುರಿಸುವ ಪದಗಳಾಗಿರುತ್ತವೆ. ಇದು ಭಾಷೆಯ ವೈಶಿಷ್ಟ್ಯಗಳಲ್ಲೊಂದು. ಒಂದೇ ಪದವನ್ನು ಬೇರೆಬೇರೆಯದೇ ಆದ ಅರ್ಥಗಳಲ್ಲಿ ಬಳಸುತ್ತಿರುತ್ತೇವೆ. ಉದಾಹರಣೆಗೆ: **'ಕಾಡು'** ಎಂಬ ಪದಕ್ಕೆ ಅರಣ್ಯ, ಅಡವಿ, ವನ, ಕಾಂತಾರ, ವಿಪಿನ, ಬನ ಮುಂತಾದವು ಸಮಾನಾರ್ಥಕ ಪದಗಳೆನಿಸಿದರೆ, **'ಕಾಡು'** ಎಂದರೆ **'ಪೀಡಿಸು'** ಎಂಬ ಮತ್ತೊಂದು ಬೇರೆಯದೆ ಆದ ಅರ್ಥವಿದೆ. ಎಲ್ಲ ಜೀವಂತ ಭಾಷೆಗಳಲ್ಲೂ ಪದವೊಂದಕ್ಕೆ ಇಂತಹ ನಾನಾರ್ಥಗಳಿರುವುದು ತೀರಾ ಸಾಮಾನ್ಯ ಸಂಗತಿಯಾಗಿದೆ. ನಾವು ದಿನನಿತ್ಯ ಬಳಸುವ ಪದಗಳ ನಾನಾರ್ಥವನ್ನು ಅರಿತುಕೊಳ್ಳುವುದರಿಂದ ನಮ್ಮ ಭಾಷಾ ಕೌಶಲ ಮತ್ತು ಶಬ್ದ ಸಂಪತ್ತು ವೃದ್ಧಿಸುತ್ತದೆ. ಒಳ್ಳೆಯ ನಿಘಂಟಿನ ಸಹಾಯದಿಂದ ಇಂತಹ ಪದಗಳ ವಿವಿಧಾರ್ಥಗಳನ್ನು ಅರಿಯುವುದು, ಪದಬಂಧಗಳನ್ನು ತುಂಬುವುದು, ಬೇರೆಬೇರೆ ಅರ್ಥದಲ್ಲಿ ಪ್ರಯೋಗಿಸುವುದು ಇವೆಲ್ಲದರಿಂದಲೂ ನಮ್ಮ ಭಾಷಾಜ್ಞಾನ ವೃದ್ಧಿಸುತ್ತಾ ಹೋಗುತ್ತದೆ.

ಪರೀಕ್ಷೆಯಲ್ಲಿ ಒಂದು ಪದದ ನಾನಾರ್ಥಗಳನ್ನು ಬರೆಯುವಂತೆ ಕೇಳಲಾದ ಪ್ರಶ್ನೆಗೆ ಅನೇಕರು ಆ ಪದಗಳಿಗಿರುವ ಸಮಾನಾರ್ಥಕ ಪದಗಳನ್ನೇ ಬರೆಯುತ್ತಾರೆ. ಇದು ಭಾಷೆಯ ಬಗೆಗಿನ ನಮ್ಮ ಅಜ್ಞಾನವನ್ನು ತೋರುತ್ತದೆ. ಸಮಾನಾರ್ಥಕ ಮತ್ತು ನಾನಾರ್ಥಗಳಿಗಿರುವ ವ್ಯತ್ಯಾಸವನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಒಂದೇ ಪದವು ಬೇರೆಬೇರೆ ರೀತಿಯಲ್ಲಿ ಬಳಕೆಗೊಳ್ಳುವ ವಾಕ್ಯಗಳನ್ನು ಗಮನಿಸುವುದರಿಂದ 'ನಾನಾರ್ಥ'ದ ವ್ಯತ್ಯಾಸಗಳನ್ನು ಸುಲಭವಾಗಿ ತಿಳಿಯಬಲ್ಲೆವು. ಉದಾಹರಣೆಗೆ: "ಬಲ" ಎಂಬ ಪದವು ಬೇರೆಬೇರೆ ಅರ್ಥದಲ್ಲಿ ಬಳಕೆಯಾಗುವುದನ್ನು ಗಮನಿಸಿ:

೧. ಅವನು ತುಂಬಾ ಬಲಶಾಲಿಯಾಗಿದ್ದನು. (ಶಕ್ತಿಶಾಲಿ)

೨. ಪಾಂಡವರ ಬಲ ಹನ್ನೊಂದು ಅಕ್ಷೋಹಿಣಿಯಿಂದ ಕೂಡಿತ್ತು. (ಸೈನ್ಯ)

೩. ಅವಳು ಬಲಗಡೆಯಿಂದ ಪ್ರದಕ್ಷಿಣೆ ಮಾಡಿದಳು. (ದಿಕ್ಕು)

೪. ತಾಯಿ ಮಗುವನ್ನು ಬಲವಾಗಿ ತಬ್ಬಿ ಹಿಡಿದಿದ್ದಳು. (ಬಿಗಿ)

೫. ಸ್ನೇಹಿತನ ಆಗಮನವು ನನಗೆ ಬಲ ನೀಡಿತು. (ನೆರವು)

೬. ರಾಜಕೀಯದಲ್ಲಿ ಆತ ತುಂಬಾ ಬಲಶಾಲಿ. (ವರ್ಚಸ್ಸು)

ಇಲ್ಲಿ 'ಬಲ' ಎಂಬ ಪದಕ್ಕೆ ಶಕ್ತಿ, ಸೈನ್ಯ, ದಿಕ್ಕು, ಬಿಗಿ, ನೆರವು, ವರ್ಚಸ್ಸು ಇತ್ಯಾದಿ ಅರ್ಥಗಳು ಪ್ರಯೋಗಗೊಂಡಿವೆ. ಇವು ಯಾವುವೂ ಸಮಾನಾರ್ಥಕಗಳಲ್ಲ. ಇಂತಹ ವಾಕ್ಯಗಳನ್ನು ಅಭ್ಯಾಸ ಮಾಡುವುದರಿಂದ ಪದವೊಂದರ ವಿವಿಧಾರ್ಥಗಳನ್ನು ಗ್ರಹಿಸಲು ಅನುಕೂಲವಾಗುತ್ತದೆ. ಇನ್ನು ಕೆಲವು ವಾಕ್ಯಗಳನ್ನು ನೋಡಿ:

*೧. ಹೊಳೆ:* ಮೀನುಗಳು ಹೊಳೆಯಲ್ಲಿ ಈಜುತ್ತಿದ್ದವು. (ನದಿ)
ಏನು ಮಾಡಿದರೂ ಉತ್ತರ ಹೊಳೆಯಲಿಲ್ಲ (ತೋಚು)
ಆಗಸದಲ್ಲಿ ನಕ್ಷತ್ರಗಳು ಹೊಳೆಯುತ್ತವೆ. (ಪ್ರಕಾಶಿಸು)

೨. *ಕಳೆ:* ಹೊಲದಲ್ಲಿ ರೈತರು ಕಳೆ ಕೀಳುತ್ತಿದ್ದರು. (ಕಸ)
ಅವರ ಮುಖದಲ್ಲಿದ್ದ ಕಳೆ ಎಲ್ಲರನ್ನೂ ಆಕರ್ಷಿಸುತ್ತಿತ್ತು. (ಕಾಂತಿ)
ನನ್ನ ಪುಸ್ತಕ ಎಲ್ಲೋ ಕಳೆದುಹೋಯಿತು. (ನಷ್ಟ)
ಹತ್ತರಿಂದ ಐದನ್ನು ಕಳೆದರೆ ಐದು ಉಳಿಯುವುದು. (ಕಡಮೆಮಾಡು)

೩. *ಕಲಿ:* ಪಂಪನು ಕಲಿಯೂ, ಕವಿಯೂ ಆಗಿದ್ದನು. (ವೀರ)
ಇದರಿಂದ ಒಳ್ಳೆಯ ಪಾಠ ಕಲಿತೆನು. (ಅರಿ) – ಇತ್ಯಾದಿ.

**ಪಠ್ಯಭಾಗದಲ್ಲಿ ಬಂದಿರುವ ನಾನಾರ್ಥ ಪದಗಳನ್ನು ಪಟ್ಟಿಮಾಡಿ, ಅವುಗಳಿಗಿರುವ ಬಗೆಬಗೆಯ ಅರ್ಥವನ್ನು ಬರೆಯುವ ಅಭ್ಯಾಸ ಮಾಡಿರಿ. ಕೆಲವನ್ನು ಈ ಕೆಳಗೆ ಸೂಚಿಸಿದೆ. ಇವಲ್ಲದೆ ಪಾಠ ಓದುವಾಗ, ಕೇಳುವಾಗ ಗಮನಕ್ಕೆ ಬರುವ ಎಲ್ಲ ಪದಗಳನ್ನು ಗಮನಿಸಿ.**

೧. ಸೂಳ್ – ........................................
೨. ಕರ – ........................................
೩. ರಾಗ – ........................................
೪. ಕಳೆ – ........................................
೫. ಬಗೆ – ........................................
೬. ದೊರೆ – ........................................
೭. ಗಂಡ – ........................................
೮. ಹತ್ತಿ – ........................................
೯. ಏರಿ – ........................................
೧೦. ಅರ್ಥ – ........................................
೧೧. ತೊರೆ – ........................................
೧೨. ನೆನೆ – ........................................
೧೩. ಲಘು – ........................................
೧೪. ಗುರು – ........................................
೧೫. ನರ – ........................................
೧೬. ಅರಿ – ........................................
೧೭. ಮಡಿ – ........................................
೧೮. ತೆರ – ........................................
೧೯. ಸಾರು – ........................................
೨೦. ನಾರು – ........................................
೨೧. ರಸ – ........................................
೨೨. ಪರಿ – ........................................
೨೩. ಕೊನೆ – ........................................
೨೪. ನೆರೆ – ........................................
೨೫. ಹೊಳೆ – ........................................
೨೬. ಎಡೆ – ........................................

೨೭. ಗುಡಿ – ........................................

೨೮. ಕಲಿ – ........................................

೨೯. ಮರ್ಯಾದೆ – ........................................

೩೦. ಹಿಂಡು – ........................................

೩೧. ತಿಳಿ – ........................................

೩೨. ಬಟ್ಟೆ – ........................................

೩೩. ಉಸಿರು – ........................................

೩೪. ಸೇರು – ........................................

೩೫. ಹಿಡಿ – ........................................

೩೬. ಹದ್ದು – ........................................

೩೭. ಅಡಿ – ........................................

೩೮. ಕಂದ – ........................................

೩೯. ಮುನಿ – ........................................

೪೦. ಉತ್ತರ – ........................................

೪೧. ಅರಸು – ........................................

೪೨. ನಡು – ........................................

೪೩. ಎಳೆ – ........................................

೪೪. ಫಲ – ........................................

೪೫. ಕವಿ – ........................................

೪೬. ಮನ್ನಿಸು – ........................................

೪೭. ಬಂಟ – ........................................

೪೮. ತೂಗು – ........................................

೪೯. ಬಿಂಬ – ........................................

೫೦. ಭಾವ – ........................................

**ಇಲ್ಲಿ ಕೆಲವು ಪದಗಳಿಗಿರುವ ನಾನಾರ್ಥಗಳನ್ನು ಸೂಚಿಸಿದೆ. ಅವುಗಳನ್ನು ಬಳಸಿ ವಾಕ್ಯ ರಚಿಸುವುದನ್ನು ಅಭ್ಯಾಸ ಮಾಡಿ:**

*ಉದಾಹರಣೆಗೆ:* ಫಲ
- ಹಣ್ಣು (ಮಾಗಿದ ಫಲ ಸವಿಯಲು ರುಚಿ)
- ಲಾಭ (ಇದರಿಂದ ನಿನಗೆ ಸಿಕ್ಕ ಫಲವೇನು?)

**ಪದಗಳನ್ನು ನಾನಾರ್ಥಗಳಲ್ಲಿ ಪ್ರಯೋಗಿಸಿ ವಾಕ್ಯರಚಿಸಿ:**

೧. ದೊರೆ
- ಸಿಕ್ಕು ..........................................................................................
- ಅರಸ ..........................................................................................

೨. ಅಡಿ
- ಅಳತೆ ..........................................................................................
- ಕೆಳಗೆ ..........................................................................................

೩. ಮುನಿ → ಋಷಿ ........................................

→ ಕೋಪ ........................................

೪. ಪಡೆ → ಸೈನ್ಯ ........................................

→ ಹೊಂದು ........................................

೫. ನೆರೆ → ಪ್ರವಾಹ ........................................

→ ಪಕ್ಕದ ........................................

೬. ಬಟ್ಟೆ → ವಸ್ತ್ರ ........................................

→ ದಾರಿ ........................................

೭. ಉಗಿ → ಉಗುಳು ........................................

→ ಆವಿ ........................................

೮. ಹದ್ದು → ಪಕ್ಷಿ ........................................

→ ಮಿತಿ ........................................

೯. ಬಗೆ → ಯೋಚಿಸು ........................................

→ ವಿಧ ........................................

೧೦. ಕವಿ → ಆವರಿಸು ........................................

→ ಕಾವ್ಯರಚನೆಕಾರ ........................................

೧೧. ಎಡೆ → ಅವಕಾಶ ........................................

→ ನೈವೇದ್ಯ ........................................

೧೨. ಅರಿ → ಶತ್ರು ........................................

→ ತಿಳಿ ........................................

**ಸೂಚನೆ :** ವಾಕ್ಯಗಳನ್ನು ರಚಿಸುವಾಗ ಕ್ರಮಸಂಖ್ಯೆಯ ಪಕ್ಕದಲ್ಲಿ ಕೊಟ್ಟಿರುವ ಪದವನ್ನು ಸೂಚಿಸಿರುವ ಅರ್ಥಗಳಲ್ಲಿ ಬರೆಯಲು ಯತ್ನಿಸಬೇಕು.

# ೪. ದೇಶ್ಯ–ಅನ್ಯದೇಶ್ಯಗಳ ವಿಚಾರ ಮತ್ತು ತತ್ಸಮ–ತದ್ಭವಗಳು

ನದಿಯು ಹುಟ್ಟುವಾಗ ಚಿಕ್ಕಹಳ್ಳವಾಗಿದ್ದು, ಹರಿವ ಇತರ ಅನೇಕ ಹಳ್ಳಗಳಿಂದ ಕೂಡಿ ದೊಡ್ಡ ಪ್ರವಾಹವಾಗುತ್ತದೆ. ಇದರಂತೆಯೇ ಜೀವಂತ ಭಾಷೆಯೊಂದು ನಿಂತನೀರಾಗದೆ ಹರಿಯುವ ನದಿಯಂತೆಯೇ ಅನ್ಯಭಾಷೆಗಳ ಸಂಪರ್ಕವನ್ನು ಹೊಂದಿ ತನ್ನ ಪದಸಂಗ್ರಹವನ್ನು ವೃದ್ಧಿಸಿಕೊಳ್ಳುತ್ತದೆ. ಗಡಿಭಾಗಗಳಿಂದ, ವ್ಯಾಪಾರ, ವ್ಯವಹಾರ, ಆಡಳಿತದ ಕಾರಣ, ಪ್ರವಾಸಾನುಭವ ಇತ್ಯಾದಿಗಳಿಂದ ಅನ್ಯದೇಶ್ಯ ಪದಗಳು ಕನ್ನಡ ಭಾಷೆಯಲ್ಲಿ ಬೆರೆತಿವೆ. **ಕನ್ನಡ ಭಾಷೆಯ ಮೂಲಶಬ್ಧಗಳು ಅಥವಾ ಅಚ್ಚಗನ್ನಡ ಶಬ್ದಗಳು ದೇಶ್ಯಶಬ್ದಗಳೆನಿಸಿದರೆ, ಹೊರಗಿನಿಂದ ಬಂದು ಕೂಡಿಕೊಂಡವು ಅನ್ಯದೇಶ್ಯ ಶಬ್ದಗಳೆನಿಸುತ್ತವೆ.** ಕನ್ನಡ ಭಾಷೆಯಲ್ಲಿ (ಅ) ದೇಶ್ಯ–ಅನ್ಯದೇಶ್ಯಗಳು, (ಆ) ತತ್ಸಮ–ತದ್ಭವಗಳೆಂಬ ವಿಭಜನೆಯನ್ನು ಕಾಣಬಹುದು. ಇವುಗಳಲ್ಲಿ ಮೊದಲಿಗೆ ದೇಶ್ಯ–ಅನ್ಯದೇಶ್ಯಗಳನ್ನು ಗಮನಿಸೋಣ.

## ಅ) ದೇಶ್ಯ–ಅನ್ಯದೇಶ್ಯಗಳು:

ದೇಶ್ಯ ಅಥವಾ ಅಚ್ಚಗನ್ನಡ ಶಬ್ದಗಳಲ್ಲಿ ಕೆಲವು ವಿಶೇಷ ಲಕ್ಷಣಗಳಿರುತ್ತವೆ. ಅವುಗಳನ್ನು ಅರಿತರೆ ಸುಲಭವಾಗಿ ಗುರುತಿಸಬಹುದು. ಕನ್ನಡದ ನಾಮವಾಚಕ, ಧಾತು, ದಿಗ್ವಾಚಕ, ಕಾಲವಾಚಕ, ಸಂಖ್ಯಾವಾಚಕ, ಸರ್ವನಾಮ, ಭಾವವಾಚಕ, ಗುಣವಾಚಕ ಮತ್ತು ಪ್ರಕಾರವಾಚಕಗಳಲ್ಲಿ ವಿಶೇಷವಾಗಿ ದೇಶ್ಯ ಶಬ್ದಗಳನ್ನು ಗುರುತಿಸಬಹುದು. ಈ ಮುಂದಿನವುಗಳನ್ನು ಗಮನಿಸಿ:

೧. ಕನ್ನಡದಲ್ಲಿ ಏ, ಐ, ಓ, ಔ ಕಾರಗಳಿಂದ ಕೂಡಿದ ಶಬ್ದಗಳಿಲ್ಲ. ಇದ್ದರೆ ಅವು ಸಂಸ್ಕೃತದ ತತ್ಸಮ ಅಥವಾ ತದ್ಭವಗಳಾಗಿರುತ್ತವೆ.

*ಉದಾ:* ವೇತ್ರ (ಸಂ) – ಬೆತ್ತ
ವೇಗ (ಸಂ) – ಬೇಗ
ವೈಶಾಖ (ಸಂ) – ಬೇಸಗೆ ... ಇತ್ಯಾದಿ.

೨. ಕನ್ನಡದಲ್ಲಿ 'ಋ'ಕಾರದ ಅಥವಾ ವಿಸರ್ಗಾಂತ್ಯ ಶಬ್ದಗಳಿದ್ದರೆ ಅವು ಸಂಸ್ಕೃತದಿಂದ ಬಂದವುಗಳಾಗಿರುತ್ತವೆ.

*ಉದಾ:* ಋಷಿ (ಸಂ) – ರಿಸಿ
ಮೃಗ (ಸಂ) – ಮಿಗ
ಶೃಂಗ (ಸಂ) – ಸಿಂಗ
ಋಣ (ಸಂ) – ರಿಣ ... ಇತ್ಯಾದಿ.

೩. 'ಶ', 'ಷ' ಕಾರಗಳಿಂದ ಕೂಡಿದ ಶಬ್ದಗಳು ಅಚ್ಚಕನ್ನಡ ಶಬ್ದಗಳಲ್ಲ, ಸಂಸ್ಕೃತ ಭಾಷೆಯವು.

*ಉದಾ:* ಔಷಧ (ಸಂ) – ಔಸಧ
ಭಾಷೆ (ಸಂ) – ಬಾಸೆ
ವೇಷ (ಸಂ) – ವೇಸ
ಋಷಿ (ಸಂ) – ರಿಸಿ ... ಇತ್ಯಾದಿ.

೪. ಸಹಜವಾಗಿ ಮಹಾಪ್ರಾಣಾಕ್ಷರಗಳಿಂದ ಕೂಡಿದ ಕನ್ನಡ ಶಬ್ದಗಳು ಕನ್ನಡದಲ್ಲಿಲ್ಲ. ಅವು ಸಂಸ್ಕೃತ, ಮರಾಠಿ, ಪ್ರಾಕೃತ ಭಾಷೆಗಳಿಂದ ತದ್ಭವಗಳಾಗಿ ಬಂದಿವೆ:

*ಉದಾ:* ಗ್ರಂಥಿ (ಸಂ) – ಗಂಟು

ಚತುರ್ಥೀ (ಸಂ) – ಚೌತಿ, ಚವುತಿ

ಘೂಕ (ಸಂ) – ಗೂಗೆ, ಗೂಬೆ

ಘಟಿಕಾ (ಸಂ) – ಗಳಿಗೆ

ಘೋಷ್ಠಿ (ಸಂ) – ಗೊಟ್ಟಿ ... ಇತ್ಯಾದಿ.

೫. ಕನ್ನಡದಲ್ಲಿ ಆದಿವ್ಯಂಜನದ ದ್ವಿತ್ವ ಶಬ್ದಗಳಿರುವುದಿಲ್ಲ. ಅವು ಸಂಸ್ಕೃತದವು.

*ಉದಾ:* ಬ್ರಹ್ಮ, ಪ್ರಲಾಪ, ಶ್ರೇಣಿ, ತಂತ್ರಿ, ... ಇತ್ಯಾದಿ.

೬. ಕನ್ನಡದಲ್ಲಿ ವಿಜಾತಿ ವ್ಯಂಜನದ ದ್ವಿತ್ವ ಶಬ್ದಗಳಿಲ್ಲ. ಅವೂ ಸಂಸ್ಕೃತದಿಂದ ಬಂದುವು.

*ಉದಾ:* ಸ್ವರ್ಗ, ಪಕ್ಷಿ, ನಿತ್ಯ, ... ಇತ್ಯಾದಿ.

೭. ಕನ್ನಡದಲ್ಲಿ ಗ, ಜ, ಸ, ದ, ಬ, ಎ, ಒ ಕಾರಗಳಿಂದ ಕೂಡಿದ ಶಬ್ದಗಳೇ ಹೆಚ್ಚಾಗಿರುತ್ತವೆ.

*ಉದಾ:* ಅಗಸ, ಗಂಟು, ಇಟ್ಟಿಗೆ, ಜನ, ಜೂಜು, ಸಂಜೆ

ಜಡೆ, ಕಡಗ, ಅಡವಿ, ಮಡು, ದನಿ, ಬಡಗಿ ... ಇತ್ಯಾದಿ.

ಈ ಬಗೆಯ ಇನ್ನೂ ಅನೇಕ ಲಕ್ಷಣಗಳಿರುತ್ತವೆ.

---

### ಅಚ್ಚಗನ್ನಡದ (ದೇಶ್ಯ) ಕೆಲವು ಶಬ್ದಗಳು:

ಮೂಡಣ, ಪಡುವಣ, ಬಡಗಣ, ತೆಂಕಣ, ನೇಸರ್, ತಿಂಗಳ್, ಹೊಲ, ಮನೆ, ಹಿತ್ತಿಲು, ಗದ್ದೆ, ಮರ, ಗಿಡ, ನೆಲ, ಆಳು, ಕಲ್ಲು, ನೆಲ್ಲು, ಹೊಳೆ, ಕರು, ಆಕಳು, ತುರು, ಹಾಲು, ತುಪ್ಪ, ಮೊಸರು, ಮಜ್ಜಿಗೆ, ಸಾರು, ಹುಳಿ, ಹುರುಳಿ, ಹುಲ್ಲು, ರಾಗಿ, ಜೋಳ, ಎಳ್ಳು, ಎಣ್ಣೆ, ಕಯ್, ಕಾಲು, ಬಾಯಿ, ಕಣ್ಣು, ತಲೆ, ಕಿವಿ, ಮೂಗು, ಕೆನ್ನೀರು, ಮೀನು, ಬಾನು, ಬೋನ, ಅರಸು, ಹುಡುಕು, ಅಗಿ, ಅರೆ, ಮುರಿ, ಉಡು, ತೊಡು, ಕಾಡು, ಕಾರು, ಹೀರು, ಸೇರು, ತೋರು, ಹೋಗು, ಬರು, ತಿನ್ನು, ಒಂದು, ಎರಡು, ನೂರು, ಸಾವಿರ, ಹೆಚ್ಚುಕಡಿಮೆ, ಮೆಲ್ಲಗೆ, ಚೆನ್ನಾಗಿ, ತಿಳಿವಳಿಕೆ, ನಡೆವಳಿಕೆ, ಸಣ್ಣ, ದೊಡ್ಡ, ಬಡಿದು, ಕರಿದು, ಹಿರಿದು – ಇತ್ಯಾದಿ.

---

## ಅನ್ಯದೇಶ್ಯಗಳು:

ಸಂಸ್ಕೃತ ಶಬ್ದಗಳ ಪ್ರಭಾವ ಕನ್ನಡದ ಮೇಲೆ ಅಪಾರವಾಗಿವೆ. ಇದರಂತೆ ಮೊಗಲರು, ನಿಜಾಮರು, ಬಹಮನಿ ಸುಲ್ತಾನರು ಆಡಳಿತ ನಡೆಸುವಾಗ ಪಾರಸಿ, ಉರ್ದು ಭಾಷೆಗಳ ಹಲವು ಶಬ್ದಗಳು ಕನ್ನಡ ಭಾಷೆಯಲ್ಲಿ ಸೇರಿಕೊಂಡವು. ಅರಬ್ಬಿ ದೇಶದವರು ಕರಾವಳಿ ಪ್ರದೇಶಕ್ಕೆ ವ್ಯಾಪಾರಕ್ಕೆ ಬಂದಾಗ ಆ ಭಾಷೆಯ ಪದಗಳು ಬಂದವು. ಇದರಂತೆ ಪೋರ್ಚುಗೀಸರು, ಫ್ರೆಂಚರು, ಇಂಗ್ಲಿಷರು ವ್ಯಾಪಾರಕ್ಕೆಂದು ಬಂದು ಬೀಡುಬಿಟ್ಟಾಗ ಆ ಭಾಷೆಯ ಪದಗಳೂ ಸೇರಿದವು. ಇಂದೂ ಕೂಡ ಅಂತರ್‌ಜಾಲ, ಮೊಬೈಲ್ ಮುಂತಾದ ವಿದ್ಯುನ್ಮಾನ ಬಳಕೆಯ ಪ್ರಭಾವದಿಂದ ಅನ್ಯದೇಶ್ಯಗಳು ಬಂದು ಸೇರುತ್ತಿವೆ. ಕೆಲವು ಅನ್ಯದೇಶ್ಯಗಳ ಮೂಲವನ್ನು ಗಮನಿಸಿ.

೧) **ಅರಬ್ಬಿ ಭಾಷೆಯಿಂದ ಬಂದವು:** ಅಮಲ್ದಾರ್, ಅರ್ಜಿ, ಅಹವಾಲು, ಆಖ್ಯೆರು, ಇಲಾಖೆ, ಐಬು, ಐಷಾರಾಮ, ಕಂದೀಲು, ಖರಾಬು, ಕಸುಬು, ಕಾಗದ, ಖದೀಮ, ಖಾಯಿಲೆ, ಖುಲಾಸೆ, ಖುಷಿ, ಗರಾಜು, ಗುಲಾಮ, ಜಪ್ತಿ, ಜಲ್ದಿ, ಜುಲುಮೆ, ಡೌಲು, ತಕರಾರು, ತಗಾದೆ, ತರಪೇತಿ, ತರ್ಜುಮೆ, ತಹಸೀಲ್ದಾರ, ತಾಕತ್ತು, ತಾರೀಪು, ತಾರೀಖು, ತಾಲೀಮು, ದಫ್ತರ್, ದವಾಖಾನೆ, ದಾಖಲು, ದುಕಾನ್, ನಾಲಾಯಕ್ಕು, ಪುರಸೊತ್ತು, ಬಾತ್ಮೀದಾರ, ಬಾಬು, ಬಿಲ್‌ಕುಲ್, ಬೇಷರತ್, ಮಂಜೂರು, ಮರ್ಜಿ, ಮಾಜಿ, ಮಾನ್ಸೂನ್, ಮುಗುಂ, ಮುತ್ಸದ್ಧಿ, ಮುದ್ದಾಂ, ಮುನ್ಸಿಫ್, ರಖಂ, ರಜಾ, ರಿಯಾಯ್ತಿ, ರೈತ, ರೋಫ್, ಲಕ್ವ, ಹಕೀಕತ್, ಹಜಾಮತಿ, ಹಮಾಲು, ಹಾಜರಾತಿ, ಹಿಕಮತಿ, ಹುಕುಮ್, ಹುಜೂರ್, ಹೈರಾಣ – ಇತ್ಯಾದಿ.

೨) **ಫಾರಸಿ ಭಾಷೆಯಿಂದ ಬಂದವು:** ಅವಾಜು, ಅಬ್ಕಾರಿ, ಐನಾತಿ, ಕಾರಭಾರ, ಕಿದ್ವಿ, ಕೊತ್ವಾಲ, ಖಜಾಂಚಿ, ಖಾದಿ, ಖುಷ್ಕಿ, ಖೋತ, ಗುಮಾಸ್ತ, ಜಬರ್ದಸ್ತು, ತಃಖ್ತೆ, ತಾಯಿತ, ದರ್ಬಾರು, ದಸ್ತಗಿರಿ, ದುಬಾರಿ, ದುಂಬಾಲು, ದುರ್ಬೀನು, ನಾಷ್ಟಾ, ಬರಖಾಸ್ತು, ಬರೋಬರಿ, ಬಾಜೂ, ಬೇಜಾನ್, ಮೈದಾನ, ಮಾಲ್ಕಿ, ರವಾನೆ, ರಾಜೀನಾಮೆ, ಹುನ್ನಾರ – ಇತ್ಯಾದಿ.

೩) **ಹಿಂದೂಸ್ಥಾನಿ ಭಾಷೆಯಿಂದ ಬಂದವು:** ಅಂಗನವಾಡಿ, ಅಚಾನಕ್, ಆಲೋಚನಾ, ಆಸಾಮಿ, ಗಾದಿ, ಚಕ್ಕರ್, ಚಪ್ರಾಸಿ, ಚಮಚ, ಜಂಜಾಟ, ಜುಜುಬಿ, ಡಾಂಬರು, ಡೋಂಗಿ, ದಂಧೆ, ಧೋತರ, ನಮೂನೆ, ಪೇಟೆ, ಭಕ್ಷೀಸು, ಬಚಾವ್, ಭರವಸೆ, ಮಾರಾಮಾರಿ, ಮುಜರಾಯಿ, ರಿವಾಜು, ರೋಟಿ, ಲಕೋಟೆ, ಲೂಟಿ, ಲೇವಡಿ, ಹಲಾಲ್‌ಟೋಪಿ – ಇತ್ಯಾದಿ.

೪) **ಮರಾಠಿ ಭಾಷೆಯಿಂದ ಬಂದವು:** ಅವಘಡ, ಆವಕ, ಆಸುಪಾಸು, ಕಛೇರಿ, ಕಿಚಾಯಿಸು, ಕಿತಾಪತಿ, ಕಿರಾಣಿ, ಖಾತೆ, ಖಾನಾವಳಿ, ಖಿಲಾಡಿ, ಚಳವಳಿ, ಗಡದ್ದು, ಠಾಕೂಠೀಕು, ಡುಮ್ಕಿ, ತರಾವರಿ, ಥೇಟ್, ದರೋಡೆ, ದೇಶಪಾಂಡೆ, ದೇಶಾವರಿ, ದಘೂತಿ, ನೋಂದಾಯಿಸು, ಪಡಪೋಷಿ, ಪುಢಾರಿ, ಪುರವಣಿ, ಫಟಿಂಗ, ಬಂಡುಕೋರ, ಬಡಾವಣೆ, ಬೋಣಿ, ಬಾತು, ಮನೂತಿ, ಮೂರಾಬಟ್ಟೆ, ಲಾವಣಿ – ಇತ್ಯಾದಿ.

೫) **ಲ್ಯಾಟಿನ್ ಭಾಷೆಯಿಂದ ಬಂದವು:** ಅಲಿಯಾಸ್, ಅಡ್ವೋಕೇಟ್, ಇಸ್ಪೀಟ್, ಕೋರಂ, ಲಾಂಡ್ರಿ, ಸೆಮಿಸ್ಟರ್, ಹಾರ್ಮೋನಿಯಂ – ಇತ್ಯಾದಿ.

೬) **ಫ್ರೆಂಚ್ ಭಾಷೆಯಿಂದ ಬಂದವು:** ಹಾಕಿ, ಗ್ಯಾರಂಟಿ, ಕರ್ಫ್ಯೂ – ಇತ್ಯಾದಿ.

೭) **ಪೋರ್ಚುಗೀಸ್ ಭಾಷೆಯಿಂದ ಬಂದವು:** ಸಾಬೂನು, ಮೇಜು, ಪಾದ್ರಿ – ಇತ್ಯಾದಿ.

ಹೀಗೆಯೇ ತುಳು, ಪರ್ಷಿಯನ್ ಭಾಷೆಯ ಪದಗಳಿವೆ. ಇಂಗ್ಲಿಷಿನಿಂದ ಬಂದ ಪದಗಳಂತೂ ಅಸಂಖ್ಯಾತ ವಾಗಿವೆ. ಹೆಚ್ಚಿನ ಅಭ್ಯಾಸಕ್ಕೆ ಪ್ರೊ. ಜಿ. ವೆಂಕಟಸುಬ್ಬಯ್ಯನವರ "ಎರವಲು ಪದಕೋಶ"ವನ್ನು ಗಮನಿಸಬಹುದು.

## : ಅಭ್ಯಾಸ ಭಾಗ :

**ಪದ್ಯಭಾಗದಲ್ಲಿ ಬಂದಿರುವ ಕೆಲವು ಅನ್ಯದೇಶ್ಯಗಳನ್ನು ಅಕಾರಾದಿಯಲ್ಲಿ ಬರೆಯಿರಿ:**

| | | |
|---|---|---|
| ೧) .................................. | ೯) .................................. | ೧೭) .................................. |
| ೨) .................................. | ೧೦) .................................. | ೧೮) .................................. |
| ೩) .................................. | ೧೧) .................................. | ೧೯) .................................. |
| ೪) .................................. | ೧೨) .................................. | ೨೦) .................................. |
| ೫) .................................. | ೧೩) .................................. | ೨೧) .................................. |
| ೬) .................................. | ೧೪) .................................. | ೨೨) .................................. |
| ೭) .................................. | ೧೫) .................................. | ೨೩) .................................. |
| ೮) .................................. | ೧೬) .................................. | ೨೪) .................................. |

---

**ಗದ್ಯ–ದೀರ್ಘಗದ್ಯ ಭಾಗದಲ್ಲಿ ಬಂದಿರುವ ಕೆಲವು ಅನ್ಯದೇಶ್ಯಗಳನ್ನು ಅಕಾರಾದಿಯಲ್ಲಿ ಬರೆಯಿರಿ:**

| | | |
|---|---|---|
| ೧) .................................. | ೯) .................................. | ೧೭) .................................. |
| ೨) .................................. | ೧೦) .................................. | ೧೮) .................................. |
| ೩) .................................. | ೧೧) .................................. | ೧೯) .................................. |
| ೪) .................................. | ೧೨) .................................. | ೨೦) .................................. |
| ೫) .................................. | ೧೩) .................................. | ೨೧) .................................. |
| ೬) .................................. | ೧೪) .................................. | ೨೨) .................................. |
| ೭) .................................. | ೧೫) .................................. | ೨೩) .................................. |
| ೮) .................................. | ೧೬) .................................. | ೨೪) .................................. |

## ಆ) ತತ್ಸಮ–ತದ್ಭವಗಳ ವಿಚಾರ

ಸಂಸ್ಕೃತ ಭಾಷೆಯಿಂದ ಕನ್ನಡಕ್ಕೆ ಬಂದು ಮೂಲರೂಪದಲ್ಲಿರುವ ಶಬ್ದಗಳನ್ನು ತತ್ಸಮಗಳೆಂದೂ, ರೂಪ ವ್ಯತ್ಯಾಸಗೊಂಡಿರುವ ಶಬ್ದಗಳನ್ನು ತದ್ಭವಗಳೆಂದೂ ಕರೆಯುತ್ತೇವೆ.

***ತತ್ಸಮಗಳು:*** ತತ್ = ಅದಕ್ಕೆ (ಸಂಸ್ಕೃತಕ್ಕೆ)
ಸಮ = ಸಮಾನವಾದುದು
ಇದನ್ನು ಸಮಸಂಸ್ಕೃತವೆಂದೂ ಕರೆಯುವರು.

*ಉದಾ:* ರಾಮ, ಭೀಮ, ಸೋಮ, ಸೂರ್ಯ, ಚಂದ್ರ, ರವಿ, ಗಿರಿ, ಲಿಪಿ, ಶೃತಿ, ಸ್ತ್ರೀ, ಕರ್ತೃ, ಶತ್ರು, ಕವಿ, ಕಾವ್ಯ, ಯತಿ, ಮತಿ, ರಿಪು, ಭುವನ, ಸಹೋದರ, ಭೂಮಿ, ಮಾತೃ, ಪಿತೃ, ನದಿ, ಆರ್ಯ, ರಾತ್ರಿ, ಶಾಸ್ತ್ರ, ಸಂಗಮ, ಸಮಾಗಮ, ದೇವಾಲಯ, ವೇದ, ಪುರಾಣ, ಅರಣ್ಯ, ಋಷಿ, ಮುನಿ, ಉಪನಿಷತ್, ವಿದ್ಯಾರ್ಥಿ, ವರ್ತಮಾನ, ವಿವಾಹ, ಲಗ್ನ, ಫಲ, ಅಕ್ಷರ, ಗ್ರಂಥ, ಅಧ್ಯಾಯ, ಲೇಖನ – ಇತ್ಯಾದಿ.

> ***ಸಂಸ್ಕೃತ ಭಾಷೆಯಲ್ಲಿರುವಂತೆಯೇ ಯಾವ ಬದಲಾವಣೆಯನ್ನೂ ಹೊಂದದೆ ಕನ್ನಡ ಭಾಷೆಯಲ್ಲಿ ಬಳಸುತ್ತಿರುವ ಶಬ್ದಗಳನ್ನು ತತ್ಸಮಗಳು ಎನ್ನುತ್ತೇವೆ.***

**ತದ್ಭವಗಳು:** ತತ್ = ಅದಕ್ಕೆ (ಸಂಸ್ಕೃತಕ್ಕೆ)
ಭವ = ಹುಟ್ಟಿದುದು.

> ***ಸಂಸ್ಕೃತ ಭಾಷೆಯ ಪದಗಳು ಕನ್ನಡದಲ್ಲಿ ಬಳಕೆಯಾಗುವಾಗ ಅಲ್ಪಸ್ವಲ್ಪ ಅಥವಾ ಪೂರ್ಣ ವ್ಯತ್ಯಾಸ ಹೊಂದಿರುವ ಶಬ್ದಗಳನ್ನು ತದ್ಭವಗಳೆನ್ನುತ್ತೇವೆ.***

ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಕನ್ನಡಕ್ಕೆ ಬಂದಿರುವ ಸಂಸ್ಕೃತ ಶಬ್ದಗಳು:

*ಉದಾ:*

| ***ಸಂಸ್ಕೃತ – ತದ್ಭವ*** | ***ಸಂಸ್ಕೃತ – ತದ್ಭವ*** |
|---|---|
| ಮಾಲಾ – ಮಾಲೆ | ಕ್ಷಮಾ – ಕ್ಷಮೆ |
| ಕಾವೇರೀ – ಕಾವೇರಿ | ಕರುಣಾ – ಕರುಣೆ |
| ಶಾಲಾ – ಶಾಲೆ | ಆಶಾ – ಆಶೆ, ಆಸೆ |
| ಭಿಕ್ಷಾ – ಭಿಕ್ಷೆ | ನಿದ್ರಾ – ನಿದ್ದೆ |
| ದಯಾ – ದಯೆ | ವಧ – ವಧೆ |
| ಬಾಲಾ – ಬಾಲೆ | ಜ್ವಾಲಾ – ಜ್ವಾಲೆ |
| ಸಂಸ್ಥಾ – ಸಂಸ್ಥೆ | ಲಕ್ಷ್ಮೀ – ಲಕ್ಷ್ಮಿ |
| ವೇಳಾ – ವೇಳೆ | ಗಂಗಾ – ಗಂಗೆ |

ಈ ಮೇಲಿನ ಉದಾಹರಣೆಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ:

೧. 'ಅ' – 'ಆ' ಕಾರಾಂತಗಳು 'ಎ' ಕಾರಾಂತಗಳಾಗಿವೆ (ಶಾಲಾ–ಶಾಲೆ, ವಧ–ವಧೆ)
'ಈ' ಕಾರಾಂತಗಳು 'ಇ' ಕಾರಾಂತಗಳಾಗಿವೆ (ಕಾವೇರೀ–ಕಾವೇರಿ, ಲಕ್ಷ್ಮೀ–ಲಕ್ಷ್ಮಿ)

ಹೀಗೆ ಸ್ವರ, ವ್ಯಂಜನ, ವಿಭಕ್ತಿ, ವಚನ, ಮಹಾಪ್ರಾಣ–ಅಲ್ಪಪ್ರಾಣ ಮುಂತಾದ ಬಗೆಯಲ್ಲಿ ತತ್ಸಮ–ತದ್ಭವಗಳು ರೂಪಾಂತರ ಪಡೆಯುತ್ತವೆ.

**ಪಠ್ಯಭಾಗದ ಕೆಲವು ತತ್ಸಮ–ತದ್ಭವಗಳನ್ನು ಗಮನಿಸಿರಿ:**

| *ತತ್ಸಮ – ತದ್ಭವ* | *ತತ್ಸಮ – ತದ್ಭವ* |
|---|---|
| ಯಶ – ಜಸ | ವೀರ – ಬೀರ |
| ಮುಖ – ಮೊಗ | ಪರೀಕ್ಷಿಸು – ಪರಿಕಿಸು |
| ಘೂಕ – ಗೂಗೆ | ಯೋಗಿ – ಜೋಗಿ |
| ಧರಾ – ಧರೆ | ಅಗ್ನಿ – ಅಗ್ಗಿ |
| ಆಕಾಶ – ಆಗಸ ... ಇತ್ಯಾದಿ. | |

**ಇವುಗಳಂತೆಯೇ ಪಠ್ಯಭಾಗದಲ್ಲಿ ಬಂದಿರುವ ತತ್ಸಮ–ತದ್ಭವಗಳನ್ನು 'ಅ'ಕಾರಾದಿಯಲ್ಲಿ ಪಟ್ಟಿಮಾಡಿರಿ. ತತ್ಸಮಗಳಿಗೆ ತದ್ಭವಗಳನ್ನೂ, ತದ್ಭವಗಳಿಗೆ ತತ್ಸಮಗಳನ್ನೂ ಬರೆಯುವ ಅಭ್ಯಾಸ ಮಾಡಿರಿ:**

| *ತತ್ಸಮಗಳು – ತದ್ಭವಗಳು* | *ತದ್ಭವಗಳು – ತತ್ಸಮಗಳು* |
|---|---|
| ೧. ........................................ | ೧. ........................................ |
| ೨. ........................................ | ೨. ........................................ |
| ೩. ........................................ | ೩. ........................................ |
| ೪. ........................................ | ೪. ........................................ |
| ೫. ........................................ | ೫. ........................................ |
| ೬. ........................................ | ೬. ........................................ |
| ೭. ........................................ | ೭. ........................................ |
| ೮. ........................................ | ೮. ........................................ |
| ೯. ........................................ | ೯. ........................................ |
| ೧೦. ........................................ | ೧೦. ........................................ |

೧೧. ........................................ ೧೧. ........................................

೧೨. ........................................ ೧೨. ........................................

೧೩. ........................................ ೧೩. ........................................

೧೪. ........................................ ೧೪. ........................................

೧೫. ........................................ ೧೫. ........................................

೧೬. ........................................ ೧೬. ........................................

೧೭. ........................................ ೧೭. ........................................

೧೮. ........................................ ೧೮. ........................................

೧೯. ........................................ ೧೯. ........................................

೨೦. ........................................ ೨೦. ........................................

೨೧. ........................................ ೨೧. ........................................

೨೨. ........................................ ೨೨. ........................................

೨೩. ........................................ ೨೩. ........................................

೨೪. ........................................ ೨೪. ........................................

೨೫. ........................................ ೨೫. ........................................

೨೬. ........................................ ೨೬. ........................................

೨೭. ........................................ ೨೭. ........................................

# ೫. ನುಡಿಗಟ್ಟುಗಳು

ನುಡಿಗಟ್ಟುಗಳು ಯಾವುದೇ ಭಾಷೆಗೆ ಕಸುವನ್ನು ತುಂಬಬಲ್ಲ ಸತ್ವವುಳ್ಳದ್ದು. ನಾವು ಮಾತನಾಡುವಾಗ ವಿಶೇಷ ಅರ್ಥಗಳನ್ನು ಸ್ಫುರಿಸುವ ಸಲುವಾಗಿಯೇ ನುಡಿಗಟ್ಟುಗಳನ್ನು ಆಶ್ರಯಿಸುತ್ತೇವೆ. ನುಡಿಗಟ್ಟುಗಳಿಂದಾಗಿ ನಾವು ಬಳಸುವ ಭಾಷೆಯ ಬಂಧ, ಸೊಗಸು ಹೆಚ್ಚಾಗುತ್ತದೆ. ವಿಶೇಷಾರ್ಥದ ಜೊತೆಗೆ ನಮ್ಮ ಮಾತಿನ ಅರ್ಥವ್ಯಾಪ್ತಿಯನ್ನು ವಿಸ್ತರಿಸುವ ಶಕ್ತಿ ನುಡಿಗಟ್ಟುಗಳಿಗಿವೆ. ಯಾವುದೇ ಜೀವಂತ ಭಾಷೆಗಳಲ್ಲೂ ನುಡಿಗಟ್ಟುಗಳು ಸಮೃದ್ಧವಾಗಿ ವ್ಯಾಪಿಸಿಕೊಂಡಿರುವುದನ್ನು ಗಮನಿಸಬಹುದು. ಈ ವಿಧದಲ್ಲಿ **“ವಿಶೇಷಾರ್ಥವನ್ನು ಕೊಡುವ, ಅರ್ಥವ್ಯಾಪ್ತಿಯನ್ನು ವಿಸ್ತರಿಸುವ, ವಿಶೇಷ ಬಗೆಯ ಪದ ಸಮುಚ್ಚಯಗಳನ್ನು ನುಡಿಗಟ್ಟುಗಳು ಅಥವಾ ಪಡೆನುಡಿಗಳು”** ಎಂದು ಕರೆಯಬಹುದು. ನಾಮಪ್ರಕೃತಿ–ಕ್ರಿಯಾವಿಶೇಷಣಗಳು ಸೇರಿ ಆಗುವ ಈ ನುಡಿಗಟ್ಟುಗಳು ಬಳಸುವ ಸಂದರ್ಭ–ಸನ್ನಿವೇಶಗಳಿಗೆ ಅನುಗುಣವಾಗಿ ವಿಶೇಷವಾದ ಅರ್ಥಗಳನ್ನು ಕೊಡುತ್ತವೆ.

ನುಡಿಗಟ್ಟುಗಳು ಮತ್ತು ಪಡೆನುಡಿಗಳು ಎರಡೂ ಒಂದೆಯೇ ಅಥವಾ ಬೇರೆಬೇರೆಯವೇ ಎಂಬ ಭಿನ್ನಾಭಿಪ್ರಾಯಗಳಿವೆ. ಕನ್ನಡ ರತ್ನಕೋಶ(ಪುಟ ೧೫೩)ದಲ್ಲಿ ನುಡಿಗಟ್ಟು = ವಿಶೇಷಾರ್ಥವುಳ್ಳ ಪದಪುಂಜ – ಎಂದು ಹೇಳಿದೆ. (ಪುಟ ೧೬೧ರಲ್ಲಿ)

ಪಡೆನುಡಿ = ಆಲಂಕಾರಿಕ ಅರ್ಥವನ್ನು ನೀಡುವ ನುಡಿಗಟ್ಟು – ಎನ್ನಲಾಗಿದೆ.

ಎರಡೂ ಭಿನ್ನವಲ್ಲ ಎಂಬರ್ಥವನ್ನು ಮೇಲಿನ ವಿವರಣೆಯಲ್ಲಿ ಕಾಣಬಹುದು.

ನುಡಿ + ಕಟ್ಟು = ನುಡಿಗಟ್ಟು = ನುಡಿಗಳ ಕಂತೆ.

ಪಡೆನುಡಿ > ನುಡಿಯ ಪಡೆ = ನುಡಿಗಳ ಸಮೂಹ – ಎರಡರ ಅರ್ಥವೂ ಅಭಿನ್ನವಾಗಿದೆ. ‘ಅವಳಿ ಪಡೆನುಡಿ ಕೋಶ’ದ ಸಂಪಾದಕರು ನುಡಿಗಟ್ಟು–ಪಡೆನುಡಿಗಳ ವಿಷಯವನ್ನು ಕುರಿತು “ಪಡೆನುಡಿ ಎಂಬುದು ನುಡಿಗಟ್ಟಿಗೆ ಸಮಾನಾರ್ಥಕವಾದುದು. ಎರಡು, ಮೂರು, ನಾಲ್ಕು ಅಥವಾ ಐದು ನುಡಿಗಳು ಒಟ್ಟುಗೂಡಿ ಒಂದು ನುಡಿಗಟ್ಟಾಗುತ್ತದೆ. ಇಂತಹ ನುಡಿಗಟ್ಟುಗಳಿಗೆ ಅನುಗುಣವಾಗಿ ಬರುವ ಲಾಕ್ಷಣಿಕ ಅಥವಾ ಆಲಂಕಾರಿಕ ಅರ್ಥಕೊಡುವ ಸಮಸ್ತಪದ–ಸಮುಚ್ಚಯಗಳನ್ನು ಪಡೆನುಡಿಗಳೆನ್ನಬಹುದು” ಎಂದಿದ್ದಾರೆ.

*ಉದಾಹರಣೆಗೆ:* ‘ಆಕಾಶ ಪಾತಾಳ ಒಂದು ಮಾಡು’ ಎಂದರೆ ಆಕಾಶ ಪಾತಾಳಗಳನ್ನು ಒಟ್ಟಿಗೆ ಸೇರಿಸು ಎಂಬುದು ಅರ್ಥವಲ್ಲ. ಅಸಾಧ್ಯವಾದ ಒಂದು ಕಾರ್ಯದ ಸೂಚ್ಯರ್ಥವಾಗಿ ‘ಶಕ್ತಿಮೀರಿ ಪ್ರಯತ್ನಿಸು’ ಎಂಬ ಆಲಂಕಾರಿಕ ಅರ್ಥವನ್ನು ಆ ಮಾತು ಬಿಂಬಿಸುತ್ತದೆ. ಹಲವು ಪದಗಳು ಒಟ್ಟು ಸೇರಿ ನುಡಿಗಟ್ಟುಗಳಾಗಿ ಲಾಕ್ಷಣಿಕ ಅಥವಾ ಆಲಂಕಾರಿಕ ಅರ್ಥಗಳನ್ನು ನೀಡುತ್ತವೆಯಾದರೂ ಕೆಲವು ವೇಳೆ ಒಂದೊಂದೇ ಪದವೂ ಆ ಕಾರ್ಯವನ್ನು ನಿರ್ವಹಿಸುತ್ತವೆ.

*ಉದಾಹರಣೆಗೆ:* ಗಾಂಧಿ = ನಿರಾಡಂಬರ ವ್ಯಕ್ತಿ (ಅವನೊಬ್ಬ ಗಾಂಧಿ ಕಣ್ರೀ.....)

ಗೂಳಿ = ಚೆನ್ನಾಗಿ ತಿಂದು ಕೊಬ್ಬಿರುವ ವ್ಯಕ್ತಿ (ಒಳ್ಳೇ ಗೂಳಿ ತರಹ ಇದ್ದಾನೆ)

ಛತ್ರಿ = ಕಿಲಾಡಿ (ನೀನು ಬಿಡು ಮಹಾ ಛತ್ರಿ)

ತೋಳ = ಹೊಟ್ಟೆಬಾಕ (ತೋಳದ ಹಾಗೆ ತಿನ್ನುವನು)

ನರಿ = ಕುಟಿಲವ್ಯಕ್ತಿ (ನೀನು ನರಿ ಇದ್ದ ಹಾಗೆ)

ಪರೀಕ್ಷೆಯಲ್ಲಿ ನುಡಿಗಟ್ಟುಗಳನ್ನು ನೀಡಿ ಅವುಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯುವಂತೆ ಕೇಳಲಾಗುವುದು ಸಾಮಾನ್ಯ. ಇಲ್ಲಿ ನುಡಿಗಟ್ಟುಗಳ ಅರ್ಥ ವಿಶೇಷತೆಯನ್ನು ಗ್ರಹಿಸುವುದು ಅತಿಮುಖ್ಯ. ನುಡಿಗಟ್ಟುಗಳು ಪ್ರಯೋಗಗೊಂಡಿರುವ ಸಂದರ್ಭಕ್ಕೆ ತಕ್ಕಂತೆ ಅರ್ಥಗಳಲ್ಲೂ ವ್ಯತ್ಯಾಸವುಂಟಾಗುವುದನ್ನು ಗಮನದಲ್ಲಿರಿಸಿಕೊಳ್ಳಬೇಕು.

ಉದಾಹರಣೆಗೆ: 'ತಲೆಬಾಗು' ಎಂಬುದಕ್ಕೆ ಶರಣಾಗು, ಒಪ್ಪು ಎಂಬ ಭಿನ್ನ ಅರ್ಥಗಳಿವೆ.

೧. ದೇವರಿಗೆ ತಲೆಬಾಗುತ್ತೇವೆ. (ಶರಣಾಗು)

೨. ಗುರುಗಳ ಮಾತಿಗೆ ತಲೆಬಾಗಿದೆವು. (ಒಪ್ಪಿಗೆ ಸೂಚಿಸು)

ಹೀಗೆ ಅವುಗಳ ಸಾಂದರ್ಭಿಕ ಅರ್ಥಗ್ರಹಿಸುವಂತೆಯೇ ಅರ್ಥಪೂರ್ಣವಾಗಿ ವಾಕ್ಯಗಳಲ್ಲಿ ಅವುಗಳನ್ನು ಬಳಸುವುದನ್ನು ರೂಢಿಸಿಕೊಳ್ಳಬೇಕು. ಪಠ್ಯಭಾಗದಲ್ಲಿರುವ ನುಡಿಗಟ್ಟುಗಳನ್ನು ಒಂದೆಡೆ ಕಲೆಹಾಕಿ, ಅವುಗಳೊಂದಿಗೆ ಹೆಚ್ಚು ಬಳಕೆಯಲ್ಲಿರುವಂತಹವನ್ನೂ ಪಟ್ಟಿಮಾಡಿರಿ. ನುಡಿಗಟ್ಟುಗಳೊಂದಿಗೆ ಆವರಣದಲ್ಲಿ ವಿಶೇಷಾರ್ಥಗಳನ್ನು ಬರೆದು, ಆನಂತರ ವಾಕ್ಯಗಳನ್ನು ಅರ್ಥಕ್ಕೆ ಊನಬಾರದಂತೆ ರಚಿಸುವುದು ಅಪೇಕ್ಷಣೀಯ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಕನ್ನಡ ರತ್ನಕೋಶ'ದ ಪರಿಷ್ಕೃತ ಆವೃತ್ತಿಯಲ್ಲಿ ದಿನಬಳಕೆಯಲ್ಲಿರುವ ಸರಿಸುಮಾರು ಐನೂರು ನುಡಿಗಟ್ಟುಗಳಿಗೆ ಅರ್ಥವನ್ನು ಸೂಚಿಸಲಾಗಿದೆ. ಆಸಕ್ತರು ಅದನ್ನು ಗಮನಿಸಬಹುದು (ಪುಟ ೨೮೦–೨೮೭). ಈ ಮುಂದಿನ ಉದಾಹರಣೆಗಳನ್ನು ಗಮನಿಸಿರಿ:

| *ನುಡಿಗಟ್ಟುಗಳು* | *ವಿಶೇಷಾರ್ಥಗಳು* | *ವಾಕ್ಯದಲ್ಲಿ ಬಳಸಬಹುದಾದ ಬಗೆ* |
|---|---|---|
| ೧. ಕಾಲುಕೀಳು | → ಪಲಾಯನ ಮಾಡು | → ಅಪಾಯವನ್ನು ಅರಿತು ನಾನು ಅಲ್ಲಿಂದ ಕಾಲುಕಿತ್ತೆನು. |
| ೨. ಕಣ್ಣುಕೆಂಪಗೆ ಮಾಡು | → ಕೋಪಿಸಿಕೋ | → ನಾನು ಓದದಿರುವುದನ್ನು ಕಂಡು ತಂದೆ ಕಣ್ಣು ಕೆಂಪಗೆ ಮಾಡಿದರು. |
| ೩. ಅನ್ನಕ್ಕೆ ಕಲ್ಲುಹಾಕು | → ಜೀವನಮಾರ್ಗ ಕೆಡಿಸು | → ಇನ್ನೊಬ್ಬರ ಅನ್ನಕ್ಕೆ ಕಲ್ಲುಹಾಕಬಾರದು. |
| ೪. ಎಂಜಲಿಗೆ ಕೈಯೊಡ್ಡು | → ಹಂಗಿಗೆ ಒಳಗಾಗು | → ಬೇರೆಯವರ ಎಂಜಲಿಗೆ ಕೈಯೊಡ್ಡಬೇಡ. |
| ೫. ಎರಡು ಬಗೆ | → ದ್ರೋಹವನ್ನು ಚಿಂತಿಸು | → ನಂಬಿದವರಿಗೆ ಎರಡು ಬಗೆಯಬಾರದು. |
| ೬. ರಾಮಬಾಣ | → ವಿಫಲವಾಗದ್ದು | → ಅಮೃತಾಂಜನವು ತಲೆನೋವಿಗೆ ರಾಮಬಾಣವಿದ್ದಂತೆ. |
| ೭. ಕೈಕೊಡು | → ಮೋಸಮಾಡು | → ಸರಿಯಾದ ಸಮಯ ನೋಡಿ ಗೆಳೆಯ ಕೈಕೊಟ್ಟನು. |
| ೮. ಜನ್ಮಜಾಲಾಡು | → ಚೆನ್ನಾಗಿ ಬಯ್ಯು | → ಅಂಕಪಟ್ಟಿ ನೋಡಿ ನಮ್ಮ ತಾಯಿ ನನ್ನ ಜನ್ಮ ಜಾಲಾಡಿದರು. |
| ೯. ಗಾಳಿಸುದ್ದಿ | → ಖಚಿತವಲ್ಲದ ವಾರ್ತೆ | → ಇತರರ ಬಗ್ಗೆ ಗಾಳಿಸುದ್ದಿ ಹರಡಬಾರದು. |
| ೧೦. ಟೋಪಿಹಾಕು | → ಮೋಸಮಾಡು | → ಮಾರ್ಕೆಟ್ಟಿನಲ್ಲಿ ಅವನಿಗೆ ಚೆನ್ನಾಗಿ ಟೋಪಿಹಾಕಿದರು. |

## ಕೆಲವು ಪ್ರಸಿದ್ಧ ನುಡಿಗಟ್ಟುಗಳನ್ನು ಗಮನಿಸಿ:

೧. ಅಂಗೈನೆಲ್ಲಿಕಾಯಿ (ಚೆನ್ನಾಗಿ ತಿಳಿದಿರು)
೨. ಅಗ್ರತಾಂಬೂಲ (ಮೊದಲ ಮರ್ಯಾದೆ)
೩. ಅಜ್ಜನಕಾಲದ್ದು (ಬಹಳ ಹಳತು)
೪. ಅಜ್ಜಿಕತೆ (ಕಟ್ಟುಕತೆ)
೫. ಅಟ್ಟಕ್ಕೇರಿಸು (ಹೊಗಳಿ ಉಬ್ಬಿಸು)
೬. ಇಂದ್ರ ಚಂದ್ರ ಅನ್ನು (ಅತಿಯಾಗಿ ಹೊಗಳು)
೭. ಉಕ್ಕಿನ ಕಡಲೆ (ಕಠಿಣವಾದ ಸಂಗತಿ)
೮. ಉಪ್ಪಿಲ್ಲ ಹುಳಿಯಿಲ್ಲ (ನೀರಸವಾದ)
೯. ಎಂಜಲು ಕೈಯಲ್ಲಿ ಕಾಗೆ ಓಡಿಸದವ (ಜಿಪುಣ)
೧೦. ಎತ್ತಿದವರ ಕೈಗೂಸು (ಸ್ವಂತ ಬುದ್ಧಿಯಿಲ್ಲದವ)
೧೧. ಎದೆತಟ್ಟಿಹೇಳು (ಧೈರ್ಯದಿಂದ ಹೇಳು)
೧೨. ಎಮ್ಮೆ ತಮ್ಮಣ್ಣ (ಮಂದಬುದ್ಧಿಯವನು)
೧೩. ಎಳ್ಳುನೀರುಬಿಡು (ಶಾಶ್ವತವಾಗಿ ಕೈಬಿಡು)
೧೪. ಒಡಕುಬಾಯಿ (ಗುಟ್ಟು ನಿಲ್ಲದ ಬಾಯಿ)
೧೫. ಹಿತ್ತಾಳೆಕಿವಿ (ಚಾಡಿ ಮಾತು ಕೇಳು)
೧೬. ಒಣಜಂಬ (ವ್ಯರ್ಥ ಅಹಂಕಾರ)
೧೭. ಕಟ್ಟುಕತೆ (ಸುಳ್ಳುಮಾತು)
೧೮. ಕಣ್ಣಿಗೆ ಮಣ್ಣೆರಚು (ಮೋಸಮಾಡು)
೧೯. ಕತ್ತಿಮಸೆ (ಹಗೆಸಾಧಿಸು)
೨೦. ಕಪಿಮುಷ್ಟಿ (ಬಿಗಿಹಿಡಿತ)
೨೧. ಕನ್ನಡಿಯೊಳಗಣ ಗಂಟು (ಅಲಭ್ಯವಾದುದು)
೨೨. ಕೈ ಬೆಚ್ಚಗೆ ಮಾಡು (ಲಂಚ ಕೊಡು)
೨೩. ಕೈಯೊಡ್ಡು (ಬೇಡು)
೨೪. ಗಂಟುಬೀಳು (ಸಂಬಂಧ ಬೆಳೆಸು)
೨೫. ಗತಿಕಾಣಿಸು (ಮುಗಿಸು)
೨೬. ಗಾಳಿಗೆ ತೂರಿಬಿಡು (ನಿರ್ಲಕ್ಷಿಸು)
೨೭. ಚಳ್ಳೆಹಣ್ಣು ತಿನ್ನಿಸು (ಮೋಸಮಾಡು)
೨೮. ಡುಂಕಿಹೊಡೆ (ಅನುತ್ತೀರ್ಣನಾಗು)
೨೯. ತಲೆದೂಗು (ಮೆಚ್ಚುಗೆ ಸೂಚಿಸು)
೩೦. ತಿಪ್ಪರಲಾಗಹಾಕು (ಶಕ್ತಿಮೀರಿ ಪ್ರಯತ್ನಿಸು)
೩೧. ದಾರಿದೀಪ (ಮಾರ್ಗದರ್ಶಿ)
೩೨. ನಾಲಿಗೆ ಬಿಗಿಹಿಡಿ (ಮಿತವಾಗಿ ಮಾತಾಡು)
೩೩. ಪುಕ್ಕಕತ್ತರಿಸು (ಹತೋಟಿಯಲ್ಲಿಡು)
೩೪. ಬಣ್ಣಬಯಲಾಗು (ರಹಸ್ಯ ಬದಲಾಗು)
೩೫. ಬೇರೂರು (ಬಲವಾಗಿ ನೆಲೆಗೊಳ್ಳು)
೩೬. ಮಲತಾಯಿಧೋರಣೆ (ಪಕ್ಷಪಾತ ಬುದ್ಧಿ)
೩೭. ಮೂಗುತೂರಿಸು (ಮಧ್ಯಪ್ರವೇಶಿಸು)
೩೮. ರೈಲುಬಿಡು (ಸುಳ್ಳುಹೇಳು)
೩೯. ಸಿಂಹಸ್ವಪ್ನ (ಭಯಗೊಳಿಸುವ ನೆನಪು)
೪೦. ಹುಡುಗಾಟಿಕೆ (ಬೇಜವಾಬ್ದಾರಿ)
೪೧. ಹೊಟ್ಟೆಗೆ ಹಾಕಿಕೋ (ಕ್ಷಮಿಸು)
೪೨. ಹೊಟ್ಟೆತಣ್ಣಗಿರು (ಸುಖ ಸಿಗು)
೪೩. ಹೊಟ್ಟೆಬಟ್ಟೆಕಟ್ಟು (ಮಿತವ್ಯಯಮಾಡು)
೪೪. ಹೊಟ್ಟೆಹೊರೆ (ಜೀವನಸಾಗಿಸು)

**ಪರೀಕ್ಷೆಯಲ್ಲಿ ಎರಡು ಅಂಕಗಳಿಗೆ ಎರಡು ನುಡಿಗಟ್ಟುಗಳನ್ನು ಕೊಟ್ಟು ಸ್ವಂತ ವಾಕ್ಯದಲ್ಲಿ ಪ್ರಯೋಗಿಸುವಂತೆ ಕೇಳಲಾಗುವುದು. ಆದ್ದರಿಂದ ಪಠ್ಯಭಾಗದಲ್ಲಿರುವ ನುಡಿಗಟ್ಟುಗಳನ್ನು ಸಂಗ್ರಹಿಸಿ, ವಾಕ್ಯದಲ್ಲಿ ಬಳಸಿ ಬರೆಯಿರಿ.**

೧. ದಾರಿದೀಪ : ...............................................................................

೨. ಕತ್ತಿಮಸೆ : ...............................................................................

೩. ಗಾಳಿಗೆ ತೂರು : ...............................................................................

೪. ಕೈಯೊಡ್ಡು : ...............................................................................

೫. ಅಜ್ಜನಕಾಲದ್ದು : ...............................................................................

೬. ಹಿತ್ತಾಳೆಕಿವಿ : ...............................................................................

೭. ಕಣ್ಣುಕೆಂಪಗೆ ಮಾಡು : ...............................................................................

೮. ಕಪಿಮುಷ್ಠಿ : ...............................................................................

೯. ರೈಲುಬಿಡು : ...............................................................................

೧೦. ಕೈಕೊಡು : ...............................................................................

೧೧. ಮುಖಊದಿಸು : ...............................................................................

೧೨. ಎಳ್ಳುನೀರು ಬಿಡು : ...............................................................................

೧೩. ಹುಡುಗಾಟಿಕೆ : ...............................................................................

೧೪. ಹೊಟ್ಟೆಹೊರೆ : ...............................................................................

೧೫. ಸಿಂಹಸ್ವಪ್ನ : ...............................................................................

೧೬. ತಲೆಬಾಗು : ...............................................................................

೧೭. ಚಳ್ಳೆಹಣ್ಣು ತಿನ್ನಿಸು : ...............................................................................

೧೮. ಗತಿಕಾಣಿಸು : ...............................................................................

೧೯. ಮೊರೆಹೋಗು : ...............................................................................

೨೦. ಕಾಲುಕೀಳು : ...............................................................................

೨೧. ಬೇರೂರು : ...............................................................................

೨೨. ಒಡಕುಬಾಯಿ : ...............................................................................

೨೩. ಕೈಬೆಚ್ಚಗೆ ಮಾಡು : ...............................................................................

***ನೆನಪಿಡಿ:*** ವಿಶೇಷಾರ್ಥವನ್ನು ಕೊಡುವ, ಅರ್ಥವ್ಯಾಪ್ತಿಯನ್ನು ವಿಸ್ತರಿಸುವ, ವಿಶೇಷ ಬಗೆಯ ಪದಸಮುಚ್ಚಯಗಳೇ ನುಡಿಗಟ್ಟುಗಳು.

# ೬. ದ್ವಿರುಕ್ತಿಗಳು

ನಾವು ದಿನನಿತ್ಯ ಬಳಸುವ ಪದಗಳಲ್ಲಿ ಅನೇಕ ದ್ವಿರುಕ್ತಿಗಳಿರುತ್ತವೆ. ಎರಡು ಬಾರಿ ಒಂದೇ ಪದವನ್ನು ಉಚ್ಚರಿಸುವುದನ್ನು ದ್ವಿರುಕ್ತಿಗಳೆನ್ನಬಹುದು. ಸರಸರ, ಫಳಫಳ, ಝುಳಝುಳ, ಢಣಢಣ – ಮುಂತಾದವು ದ್ವಿರುಕ್ತಿಗಳಂತೆ ತೋರುವುವಾದರೂ ಇವೆಲ್ಲವೂ ಅನುಕರಣಾವ್ಯಯಗಳು. ಬಹುಜನರಿಗೆ ಅನುಕರಣಾವ್ಯಯ ಮತ್ತು ದ್ವಿರುಕ್ತಿಗಳ ನಡುವಿನ ಅಂತರವೇ ತಿಳಿದಿರುವುದಿಲ್ಲ. ಒಂದರ ಸ್ಥಾನದಲ್ಲಿ ಮತ್ತೊಂದನ್ನು ಹೆಸರಿಸುತ್ತಿರುತ್ತೇವೆ. ಕೇಳಿದ ಯಾವುದೇ ಧ್ವನಿಯನ್ನು ಅನುಕರಿಸುವ ಶಬ್ದಗಳೇ ಅನುಕರಣಾವ್ಯಯಗಳು. ಉದಾ: ಚಟಚಟ, ಪಟಪಟ, ಧಗಧಗ, ಇತ್ಯಾದಿ. ಇವೆಲ್ಲವೂ ಎರಡೆರಡು ಬಾರಿ ಉಕ್ತಗೊಳ್ಳುತ್ತವಾದರೂ ಇವು ದ್ವಿರುಕ್ತಿಗಳಲ್ಲ.

**"ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೋ, ಒಂದು ವಾಕ್ಯವನ್ನೋ ಎರಡೆರಡು ಸಲ ಪ್ರಯೋಗ ಮಾಡುವುದಕ್ಕೆ ದ್ವಿರುಕ್ತಿಯೆನ್ನುವರು."**

*ಉದಾಹರಣೆ:* ೧. ಅವಳು ಬೇಗಬೇಗ ನಡೆದು ಬರುತ್ತಿದ್ದಳು.

೨. ಅವರ ಬಳಿ ದೊಡ್ಡದೊಡ್ಡ ಗ್ರಂಥಗಳಿದ್ದವು.

೩. ನೀನು ಓಡಿಓಡಿ ಬಂದಂತಿದೆ.

ಮೇಲಿನ ಉದಾಹರಣೆಗಳಲ್ಲಿ ಅಡಿಗೆರೆ ಎಳೆದಿರುವ ಪದಗಳೆಲ್ಲವನ್ನೂ ಎರಡೆರಡು ಬಾರಿ ಪ್ರಯೋಗಿಸಿರುವುದನ್ನು ಗಮನಿಸಬಹುದು. ದ್ವಿರುಕ್ತಿಗಳ ಪ್ರಯೋಗದಿಂದ ಭಾವನೆಗಳ ಅಭಿವ್ಯಕ್ತಿಗೆ ಪುಷ್ಟಿ ದೊರೆಯುತ್ತದೆ ಮತ್ತು ಕೇಳುಗರ ಮನಸ್ಸಿನ ಮೇಲೆ ಪರಿಣಾಮ ಉಂಟಾಗುತ್ತದೆ. ದ್ವಿರುಕ್ತಿಗಳನ್ನು ನಾವು ಬಳಸುವ ಸಂದರ್ಭಗಳನ್ನು ಗಮನಿಸಿ.

೧. ನಿಲ್ಲುನಿಲ್ಲು! ನಾನು ಬರುವವನಿದ್ದೇನೆ. (ಉತ್ಸಾಹ ತೋರುವಾಗ)

೨. ಹೆಚ್ಚು ಹೆಚ್ಚು ಜನ ಇದನ್ನು ನೋಡಿ ಮೆಚ್ಚುವರು. (ಅತಿಶಯಾರ್ಥದಲ್ಲಿ)

೩. ಅವನು ಮನೆಮನೆಯನ್ನು ತಿರುಗಿದನು. (ಪ್ರತಿಯೊಂದೂ ಎಂಬರ್ಥದಲ್ಲಿ)

೪. ಬನ್ನಿ ಬನ್ನಿ! ಕುಳಿತುಕೊಳ್ಳಿ. (ಸಂಭ್ರಮದಲ್ಲಿ)

೫. ಅಬ್ಬಬ್ಬಾ! ಎಂಥ ದೃಶ್ಯ (ಆಶ್ಚರ್ಯದಲ್ಲಿ)

೬. ಬೇಡ ಬೇಡ! ಸುಮ್ಮನಿರು. (ಆಕ್ಷೇಪಾರ್ಥದಲ್ಲಿ)

೭. ಅವರೆಲ್ಲಾ ನಕ್ಕೂನಕ್ಕೂ ಸುಸ್ತಾದರು. (ಹರ್ಷದಲ್ಲಿ)

೮. ಹೌದುಹೌದು! ನಾನು ಹೇಳಿದ್ದು ಇದನ್ನೇ. (ಸಮ್ಮತಿಯ ಅರ್ಥದಲ್ಲಿ)

೯. ಓಡುಓಡು! ಬೇಗಬೇಗ ತಾ. (ತ್ವರೆ ಅರ್ಥದಲ್ಲಿ)

೧೦. ಚಿಕ್ಕಚಿಕ್ಕ ಮಕ್ಕಳಿಗೆ ಮೊದಲು ಊಟ
ದೊಡ್ಡ ದೊಡ್ಡವರಿಗೆಲ್ಲಾ ಆಮೇಲೆ. (ಅನುಕ್ರಮಾರ್ಥದಲ್ಲಿ)

೧೧. ಚಿಕ್ಕಚಿಕ್ಕದು ತರಬೇಡ!
ದೊಡ್ಡದೊಡ್ಡ ಕಲ್ಲು ತಾ (ಪ್ರತ್ಯೇಕಾರ್ಥದಲ್ಲಿ)

ಹೀಗೆ ಇನ್ನೂ ಅನೇಕ ಅರ್ಥದಲ್ಲಿ ದ್ವಿರುಕ್ತಿಗಳನ್ನು ಉದಾಹರಿಸಬಹುದು. ಅಲ್ಲದೆ ದ್ವಿರುಕ್ತಿ ಬಳಕೆಯಾಗುವ ಕೆಲವು ವಿಶೇಷ ರೂಪಗಳನ್ನು ಗಮನಿಸಿ:

೧. ಮೊತ್ತಮೊದಲು = ಮೊದಲು + ಮೊದಲು

೨. ಕಟ್ಟಕಡೆಗೆ, ಕಡೆಕಡೆಗೆ = ಕಡೆಗೆ + ಕಡೆಗೆ

೩. ಕೊನೆಕೊನೆಗೆ = ಕೊನೆಗೆ + ಕೊನೆಗೆ

**ಇದೇ ರೀತಿಯಲ್ಲಿ ಈ ಕೆಳಗಿನ ದ್ವಿರುಕ್ತಿಗಳನ್ನು ಕೂಡಿಸಿ ಬರೆಯಲು ಪ್ರಯತ್ನಿಸಿ:**

| | |
|---|---|
| ೧. ಬಯಲು + ಬಯಲು = | |
| ೨. ನುರಿ + ನುರಿ = | |
| ೩. ಬಡಿ + ಬಡಿ = | |
| ೪. ತುದಿ + ತುದಿ = | |
| ೫. ಕೊನೆಗೆ + ಕೊನೆಗೆ = | |
| ೬. ಮಧ್ಯಾಹ್ನ + ಮಧ್ಯಾಹ್ನ = | |
| ೭. ಹಸಿರು + ಹಸಿರು = | |
| ೮. ಕುದಿ + ಕುದಿ = | |
| ೯. ಹೊಸದು + ಹೊಸದು = | |
| ೧೦. ಕೆಳಗೆ + ಕೆಳಗೆ = | |

**ಪರೀಕ್ಷೆಯಲ್ಲಿ ಎರಡು ಅಂಕಗಳಿಗೆ ದ್ವಿರುಕ್ತಿ ಅಥವಾ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಲು ಕೇಳಲಾಗುವುದು. ದ್ವಿರುಕ್ತಿಗಳನ್ನು ಅರ್ಥಪೂರ್ಣವಾಗಿ ಬಳಸಿ ವಾಕ್ಯಗಳನ್ನು ರಚಿಸುವುದನ್ನು ಅಭ್ಯಾಸ ಮಾಡಬೇಕು. ಈ ಕೆಳಕಂಡ ದ್ವಿರುಕ್ತಿಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ.**

| | |
|---|---|
| ೧. ಬೇಗಬೇಗ : | |
| ೨. ಮೆಲ್ಲಮೆಲ್ಲನೆ : | |
| ೩. ಓಡೋಡಿ : | |
| ೪. ನಡೆನಡೆದು : | |
| ೫. ಪರಿಪರಿಯಾಗಿ : | |
| ೬. ಹೌದುಹೌದು : | |
| ೭. ನೋಡುನೋಡು : | |
| ೮. ನಲಿನಲಿದು : | |
| ೯. ಕುಣಿಕುಣಿದು : | |
| ೧೦. ತುತ್ತತುದಿ : | |
| ೧೧. ಆಗಲಿಆಗಲಿ : | |
| ೧೨. ಬಿದ್ದೂಬಿದ್ದೂ : | |
| ೧೩. ನಡುನಡುವೆ : | |
| ೧೪. ಹಳೆಹಳೆಯ : | |
| ೧೫. ಬರೆಬರೆದು : | |

# ೭. ನಾಮಪದಗಳು – ಗುಣವಾಚಕಗಳು – ವಿಭಕ್ತಿ ಪ್ರತ್ಯಯಗಳು

ನಾವಾಡುವ ನುಡಿಯಲ್ಲಿರುವ ಪದಗಳನ್ನು ವ್ಯಾಕರಣದಲ್ಲಿ ಮುಖ್ಯವಾಗಿ ಮೂರು ಗುಂಪುಗಳನ್ನಾಗಿಸುತ್ತೇವೆ. ಅವುಗಳೆಂದರೆ ನಾಮಪದ, ಕ್ರಿಯಾಪದ ಮತ್ತು ಅವ್ಯಯ. ಹೆಸರನ್ನು ಸೂಚಿಸುವ ಪದವೆ ನಾಮಪದ; ಕ್ರಿಯೆಯನ್ನು ತಿಳಿಸುವ ಪದವೇ ಕ್ರಿಯಾಪದ; ಲಿಂಗ ವಚನ ವಿಭಕ್ತಿಗಳಿಗಾಗಿ ಬದಲಾವಣೆ ಹೊಂದದ ಪದಗಳಿಗೆ ಅವ್ಯಯ ಎನ್ನುವರು.

*ಉದಾ:* ಕನ್ನಡಿಗರು ಚೆನ್ನಾಗಿ ಅನ್ಯರನ್ನು ಆದರಿಸುವರು.

ಈ ವಾಕ್ಯದಲ್ಲಿ ಕನ್ನಡಿಗರು, ಅನ್ಯರನ್ನು – ನಾಮಪದಗಳು; ಆದರಿಸುವರು – ಕ್ರಿಯಾಪದ; ಚೆನ್ನಾಗಿ – ಅವ್ಯಯ.

ನಾಮ ಎಂದರೆ ಹೆಸರು. ವಸ್ತು, ವ್ಯಕ್ತಿ, ಸ್ಥಳ ಮತ್ತು ಭಾವಗಳನ್ನು ಹೆಸರಿಸುವ ಪದವೇ ನಾಮಪದ.

ನಾಮಪದದ ಮೂಲರೂಪವನ್ನೂ, ಕ್ರಿಯೆಯ ಅರ್ಥವನ್ನು ತಿಳಿಸದಿರುವ ಶಬ್ದಗಳನ್ನು ನಾಮಪ್ರಕೃತಿ ಎನ್ನುತ್ತಾರೆ. ಇವಕ್ಕೆ ಪ್ರಾತಿಪದಿಕಗಳು ಅಥವಾ ನಾಮವಾಚಕ ಎಂದೂ ಕರೆಯುವುದೂ ಉಂಟು. ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿ ನಾಮಪದಗಳೆಂದೆನಿಸಿವೆ.

ಸ್ವತಃ ಅರ್ಥವಿರದೆ ನಾಮಪ್ರಕೃತಿಗಳ ಮುಂದೆ ಸೇರಿ, ಬಗೆಬಗೆಯ ಅರ್ಥವನ್ನುಂಟುಮಾಡುವ ಉ, ಅನ್ನು, ಇಂದ, ಗೆ ಮೊದಲಾದವು ವಿಭಕ್ತಿ ಪ್ರತ್ಯಯಗಳೆನಿಸುವುವು. ನಾಮಪ್ರಕೃತಿಗಳಿಗೆ ಬೇರೆಬೇರೆ ಪ್ರತ್ಯಯಗಳು ಸೇರಿ ನಾಮಪದಗಳಾಗಿವೆ.

| *ನಾಮಪ್ರಕೃತಿ* | | *ನಾಮವಿಭಕ್ತಿ ಪ್ರತ್ಯಯ* | | *ನಾಮಪದ* |
|---|---|---|---|---|
| ಕಾವೇರಿ | + | ಉ | = | ಕಾವೇರಿಯು |
| ಜಲ | + | ಅನ್ನು | = | ಜಲವನ್ನು |
| ಜಾಣೆ | + | ಇಂದ | = | ಜಾಣೆಯಿಂದ |
| ಧೀರ | + | ಗೆ | = | ಧೀರನಿಗೆ |
| ರೈತ | + | ದೆಸೆಯಿಂದ | = | ರೈತರ ದೆಸೆಯಿಂದ |
| ಆಕಾಶ | + | ಅ | = | ಆಕಾಶದ |
| ನೆಲ | + | ಅಲ್ಲಿ | = | ನೆಲದಲ್ಲಿ |
| ಕರ್ನಾಟಕ | + | ಏ | = | ಕರ್ನಾಟಕವೇ |

ಇಲ್ಲಿ ಕಾವೇರಿ, ಜಲ, ಜಾಣೆ, ಧೀರ, ರೈತ, ಆಕಾಶ, ನೆಲ, ಕರ್ನಾಟಕ – ಇವೆಲ್ಲ ನಾಮಪ್ರಕೃತಿಗಳು; ಉ, ಅನ್ನು, ಇಂದ, ಗೆ, ದೆಸೆಯಿಂದ, ಅ, ಅಲ್ಲಿ, ಏ – ಇವೆಲ್ಲ ನಾಮವಿಭಕ್ತಿ ಪ್ರತ್ಯಯಗಳು; ಕಾವೇರಿಯು, ಜಲವನ್ನು, ಜಾಣೆಯಿಂದ, ಧೀರನಿಗೆ, ರೈತರ ದೆಸೆಯಿಂದ, ಆಕಾಶದ, ನೆಲದಲ್ಲಿ, ಕರ್ನಾಟಕವೇ – ಇವೆಲ್ಲ ನಾಮಪದಗಳು.

ನಾಮಪ್ರಕೃತಿಯಲ್ಲಿ ಮುಖ್ಯವಾಗಿ ಎರಡು ಬಗೆಯಿವೆ.

೧. ಸಹಜ ನಾಮಪ್ರಕೃತಿಗಳು
೨. ಸಾಧಿತ ನಾಮಪ್ರಕೃತಿಗಳು (ಸಮಾಸ, ಕೃದಂತ ಮತ್ತು ತದ್ಧಿತಾಂತಗಳು)

ಸಹಜ ನಾಮಪ್ರಕೃತಿಗಳಲ್ಲಿ ಮುಖ್ಯವಾಗಿ: (೧) ವಸ್ತುವಾಚಕಗಳು, (೨) ಗುಣವಾಚಕಗಳು, (೩) ಸಂಖ್ಯಾವಾಚಕಗಳು, (೪) ಸಂಖ್ಯೇಯವಾಚಕಗಳು, (೫) ಭಾವನಾಮಗಳು, (೬) ಪರಿಮಾಣವಾಚಕಗಳು, (೭) ಪ್ರಕಾರವಾಚಕಗಳು, (೮) ದಿಗ್ವಾಚಕಗಳು, (೯) ಸರ್ವನಾಮಗಳು ಎಂದು ಅನೇಕ ಗುಂಪುಗಳನ್ನೂ ಮಾಡಬಹುದು.

## ೧) ವಸ್ತುವಾಚಕಗಳು:

ವಸ್ತುಗಳ ಹೆಸರನ್ನು ಸೂಚಿಸುವ ಶಬ್ದಗಳೆಲ್ಲವೂ ವಸ್ತುವಾಚಕಗಳೆನಿಸಿವೆ. ವಸ್ತುವಾಚಕಗಳಲ್ಲಿ (೧) ರೂಢನಾಮ, (೨) ಅಂಕಿತನಾಮ, (೩) ಅನ್ವರ್ಥನಾಮ – ಎಂದು ಮೂರು ವಿಧಗಳಿವೆ.

೧) **ರೂಢನಾಮ:** ರೂಢಿಯಿಂದ ಬಂದ ಸಾಮಾನ್ಯ ವಾಚಕಗಳೆಲ್ಲ ರೂಢನಾಮಗಳೆನಿಸಿವೆ.
*ಉದಾ:* ಹುಡುಗಿ, ಗಂಡಸು, ಪ್ರಾಣಿ, ಗಿಡ, ಹೂ, ಹಣ್ಣು, ನಾಡು, ದೇಶ, ನದಿ, ಪರ್ವತ, ಮನುಷ್ಯ ಇತ್ಯಾದಿ.

೨) **ಅಂಕಿತನಾಮ:** ವ್ಯವಹಾರದ ಅನುಕೂಲಕ್ಕೆ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳಾಗಿವೆ.
*ಉದಾ:* ಗಿರಿಜಾ, ಶಂಕರ, ರಾಮ, ಸೀತೆ, ಹಿಮಾಲಯ, ಮಾವು, ಬೇವು, ಮೈಸೂರು, ಬೀದರ, ತೇಗ, ಗಂಧ, ಸಹ್ಯಾದ್ರಿ ಇತ್ಯಾದಿ.

೩) **ಅನ್ವರ್ಥನಾಮ:** ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲ ಅನ್ವರ್ಥನಾಮಗಳಾಗುತ್ತವೆ.
*ಉದಾ:* ಜಾಣೆ, ಧೀರ, ಸಾಧು, ಕುಳ್ಳ, ಕರಿಯ, ಕೆಂಪಿ, ಕುಂಟ, ಕುರುಡ, ಕಿವುಡ, ವಿದ್ವಾಂಸ, ಯೋಗಿ ಇತ್ಯಾದಿ.

## ೨) ಗುಣವಾಚಕಗಳು:

ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳಿಗೆ ಗುಣವಾಚಕಗಳೆಂದು ಕರೆಯುವರು. ಉದಾ: ಕರಿದು, ಬಿಳಿದು, ಒಳ್ಳೆಯ, ದೊಡ್ಡ, ಹಿರಿದು, ಎಳೆದು, ಕಪ್ಪು, ಸುಂದರ – ಮೊದಲಾದವುಗಳು. ಈ ವಿಶೇಷಣಗಳೆಲ್ಲ ಯಾವುದನ್ನು ಕುರಿತು ಹೇಳಿದೆಯೋ ಅವು ವಿಶೇಷ್ಯಗಳು.

| *ವಿಶೇಷಣ* | *ವಿಶೇಷ್ಯ* |
|---|---|
| ಸುಂದರ | ನಾಡು |
| ಒಳ್ಳೆಯ | ಹುಡುಗಿ |
| ಹಸಿರು | ಬೆಟ್ಟ |
| ದೊಡ್ಡ | ಹುಡುಗ |

### ೩) ಸಂಖ್ಯಾವಾಚಕಗಳು:

ಸಂಖ್ಯೆಯನ್ನೂ ಹೇಳುವ ಪದಗಳೆಲ್ಲ ಸಂಖ್ಯಾವಾಚಕಗಳು.

*ಉದಾ:* ಒಂದು, ಎರಡು, ಐದು, ಹತ್ತು, ನೂರು, ಸಾವಿರ, ಲಕ್ಷ – ಇತ್ಯಾದಿ.

### ೪) ಸಂಖ್ಯೇಯವಾಚಕಗಳು:

ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಪದಗಳೆಲ್ಲ ಸಂಖ್ಯೇಯವಾಚಕಗಳು.

*ಉದಾ:* ಒಂದನೆಯ, ಇಬ್ಬರು, ನಾಲ್ವರು, ಇಮ್ಮಡಿ, ಹತ್ತನೆಯ, ನೂರ್ಮಡಿ – ಇತ್ಯಾದಿ.

### ೫) ಭಾವನಾಮಗಳು:

ವಸ್ತುಗಳು ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಪದಗಳಿಗೆ ಭಾವನಾಮಗಳೆನ್ನುವರು.

*ಉದಾ:* ಕರಿದರ ಭಾವ = ಕಪ್ಪು; ಹಿರಿದರ ಭಾವ = ಹಿರಿದು; ನೋಡುವುದರ ಭಾವ = ನೋಟ; ಕೂಡುವುದರ ಭಾವ = ಕೂಟ – ಇತ್ಯಾದಿ.

### ೬) ಪರಿಮಾಣ ವಾಚಕಗಳು:

ವಸ್ತುಗಳ ಸಾಮಾನ್ಯ ಅಳತೆ, ಗಾತ್ರ, ಪರಿಮಾಣ – ಇತ್ಯಾದಿಗಳನ್ನು ಸೂಚಿಸುವ ಪದಗಳು ಪರಿಮಾಣವಾಚಕಗಳೆನಿಸುವುವು.

*ಉದಾ:* ಇನಿತು, ಎನಿತು, ಅಷ್ಟು, ಇಷ್ಟು, ಹಲವು, ಕೆಲವು, ಪಲವು – ಇತ್ಯಾದಿ.

### ೭) ಪ್ರಕಾರ ವಾಚಕಗಳು:

ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಪದಗಳೆಲ್ಲ ಪ್ರಕಾರವಾಚಕಗಳೆಂದು ಕರೆಯುವರು. ಇವು ಕೂಡ ಒಂದು ಬಗೆಯ ಗುಣವಾಚಕಗಳೇ ಆಗಿರುತ್ತವೆ.

*ಉದಾ:* ಅಂತಹ, ಇಂತಹ, ಎಂತಹ, ಅಂಥ, ಇಂಥ, ಎಂಥ – ಇತ್ಯಾದಿ.

### ೮) ದಿಗ್ವಾಚಕಗಳು:

ದಿಕ್ಕುಗಳು ಹೆಸರನ್ನು ಸೂಚಿಸುವ ಪದಗಳೆಲ್ಲ ದಿಗ್ವಾಚಕಗಳೆನ್ನಿಸಿವೆ.

*ಉದಾ:* ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಆಚೆ, ಈಚೆ, ಮೂಡಲು, ತೆಂಕಲು, ಬಡಗಲು, ಪಡುವಲು – ಇತ್ಯಾದಿ.

## ೯) ಸರ್ವನಾಮಗಳು:

ನಾಮಪದಗಳಿಗೆ ಬದಲಾಗಿ ಬಳಸುವ ಪದಗಳೆಲ್ಲ ಸರ್ವನಾಮಗಳೆನಿಸುವುವು.

*ಉದಾ:* ಅದು, ಇದು, ಯಾವುದು, ಎಲ್ಲ, ಏನು, ಅವನು, ಇವಳು, ತಾನು, ನೀವು, ಯಾವನು, ಆರ್, ಏನ್, ಆನ್ – ಇತ್ಯಾದಿ.

ಸರ್ವನಾಮಗಳಲ್ಲಿ (೧) ಪುರುಷಾರ್ಥಕ ಸರ್ವನಾಮ, (೨) ಪ್ರಶ್ನಾರ್ಥಕ ಸರ್ವನಾಮ, (೩) ಆತ್ಮಾರ್ಥಕ ಸರ್ವನಾಮ – ಎಂಬುದಾಗಿ ಮೂರು ಬಗೆಯಿವೆ.

೧) **ಪುರುಷಾರ್ಥಕ ಸರ್ವನಾಮ:** (ಅ) ನಾನು–ನಾವು ಇವು ಉತ್ತಮ ಪುರುಷ ಸರ್ವನಾಮಗಳು. (ಆ) ನೀನು–ನೀವು ಇವು ಮಧ್ಯಮ ಪುರುಷ ಸರ್ವನಾಮಗಳು. (ಇ) ಅವನು–ಅವರು, ಅವಳು–ಅವರು, ಅದು–ಅವು, ಇವನು–ಇವರು, ಇವಳು–ಇವರು, ಇದು–ಇವು – ಪ್ರಥಮಪುರುಷ ಸರ್ವನಾಮಗಳು.

೨) **ಪ್ರಶ್ನಾರ್ಥಕ ಸರ್ವನಾಮ:** ಯಾರು, ಯಾವುದು, ಏನು, ಏತರದು, ಆವುದು, ಏನ್ – ಇವು ಪ್ರಶ್ನೆಗೆ ಸಂಬಂಧಿಸಿದವು. ಇವುಗಳಿಗೆ ಪ್ರಶ್ನಾರ್ಥಕ ಸರ್ವನಾಮ ಎನ್ನುವರು.

೩) **ಆತ್ಮಾರ್ಥಕ ಸರ್ವನಾಮ:** ತನ್ನ, ತಮ್ಮ, ತನಗೆ, ತಮಗೆ, ತಾನು, ತಾವು – ಇವುಗಳನ್ನು ಆತ್ಮಾರ್ಥಕ ಸರ್ವನಾಮಗಳೆನ್ನುವರು.

---

**ಪರೀಕ್ಷೆಯಲ್ಲಿ ವಿಶೇಷವಾಗಿ ಗುಣವಾಚಕಗಳನ್ನು ಗುರುತಿಸಲು ತಿಳಿಸಲಾಗುವುದು. ಆದ್ದರಿಂದ ಪಠ್ಯಭಾಗದಲ್ಲಿ ಬಂದಿರುವ ಕೆಲವು ಪದಗಳನ್ನು ಈ ಮುಂದೆ ನೀಡಿದೆ. ಅವುಗಳ ಗುಣವಾಚಕಗಳನ್ನು ಗುರುತಿಸುವ ಅಭ್ಯಾಸ ಮಾಡಿರಿ:**

ಉದಾಹರಣೆ: ಒಳ್ಳೆಯ ಮನುಷ್ಯ – ಒಳ್ಳೆಯ ಎಂಬುದು ಗುಣವಾಚಕ.

| | | | |
|---|---|---|---|
| ೧. ವಕ್ತ್ರಪದ್ಮ | – .............................. | ೯. ಅಪ್ರತಿಮಲ್ಲ | – .............................. |
| ೨. ಪೊಲ್ಲವಾರ್ತೆ | – .............................. | ೧೦. ನಸುಮಿಸುಕು | – .............................. |
| ೩. ಮಂಗಳಲಿಂಗ | – .............................. | ೧೧. ಮರಿಗೂಗೆ | – .............................. |
| ೪. ಲಘುವರ್ತನ | – .............................. | ೧೨. ಕಡುಪಾಪ | – .............................. |
| ೫. ಘೋರಪಾತಕಿ | – .............................. | ೧೩. ಹೆಮ್ಮರ | – .............................. |
| ೬. ಘೋರತರ ವಿಷ | – .............................. | ೧೪. ದುರ್ಗಂಧ | – .............................. |
| ೭. ಕುಜನರು | – .............................. | ೧೫. ಬಿನ್ನಾಣದಮಾತು | – .............................. |
| ೮. ಕಲಿಭೀಮ | – .............................. | ೧೬. ದುರ್ಜನ | – .............................. |

೧೭. ಬಂಗಾರದ ಬಳೆ – ..............................

೧೮. ಸುಣ್ಣದಹರಳು – ..............................

೧೯. ಹಡೆದವ್ವ – ..............................

೨೦. ರಸಬಳ್ಳಿ – ..............................

೨೧. ಎಳನಗೆಯ – ..............................

೨೨. ಹುಸಿನಿದ್ದೆ – ..............................

೨೩. ತುಂಬಿಬಾಳು – ..............................

೨೪. ಅವಸರದಹೆಜ್ಜೆ – ..............................

೨೫. ಮಣಆಯಾಸ – ..............................

೨೬. ಮಂಕಾದ ಮಡದಿ – ..............................

೨೭. ಕೊರೆವ ಕೂಳು – ..............................

೨೮. ಹಾಸುಗಂಬಿ – ..............................

೨೯. ಬಲಿಷ್ಠ ಕೈಗಳು – ..............................

೩೦. ಕಣ್ಬೆಳಕು – ..............................

೩೧. ಗಟ್ಟಿಪಾದ – ..............................

೩೨. ಉರಿವಬತ್ತಿ – ..............................

೩೩. ಬೆಳಕಿನ ಬಿತ್ತ – ..............................

೩೪. ಎಡಗಣ್ಣು – ..............................

೩೫. ಹಿತವಚನ – ..............................

೩೬. ದೊಡ್ಡಗಂಟಲು – ..............................

೩೭. ಮುಗ್ಧಜೀವಿ – ..............................

೩೮. ಮಿಂಚಿನಂತಹ ವ್ಯಕ್ತಿ – ..............................

೩೯. ದಯಾಮೃತ್ಯು – ..............................

೪೦. ದೂರದೃಷ್ಟಿ – ..............................

೪೧. ಒಳನೋಟ – ..............................

೪೨. ಕಿರುಹಾದಿ – ..............................

೪೩. ಹಸಿರುಕಂಬಳಿ – ..............................

೪೪. ಸಣ್ಣಕುರುಡು – ..............................

೪೫. ಹಾಡುಹಕ್ಕಿ – ..............................

೪೬. ಶುದ್ಧನೀರು – ..............................

೪೭. ಕೆಳಹೊಟ್ಟೆ – ..............................

೪೮. ಸಣ್ಣಮಕ್ಕಳು – ..............................

೪೯. ಮಲತಾಯಿ – ..............................

೫೦. ದುರ್ದೈವ – ..............................

೫೧. ಶ್ರೇಷ್ಠ ವಿಜ್ಞಾನಿ – ..............................

೫೨. ಉಜ್ವಲ ಭವಿಷ್ಯ – ..............................

೫೩. ಅಪಸ್ವರ – ..............................

೫೪. ಪರದೇಶಿ – ..............................

೫೫. ಬೆಳ್ಳಿಲೋಟ – ..............................

೫೬. ಮರಿಮೀನು – ..............................

೫೭. ಕೆನೆಹಾಲು – ..............................

೫೮. ಸಮವಸ್ತ್ರ – ..............................

# ವಿಭಕ್ತಿ ಪ್ರತ್ಯಯಗಳು

ನಾಮಪ್ರಕೃತಿಗಳ ಜೊತೆ ಸೇರಿ ಪದದ ಅರ್ಥವನ್ನು ಆಯಾಯ ಸಂದರ್ಭಗಳಿಗನುಗುಣವಾಗಿ ಬದಲಾವಣೆ ಮಾಡುವ ಪ್ರತ್ಯಯಗಳಿಗೆ ನಾಮ ವಿಭಕ್ತಿ ಪ್ರತ್ಯಯಗಳೆಂದು ಕರೆಯಲಾಗಿದೆ. ಒಂದು ವಾಕ್ಯದಲ್ಲಿ ಬರುವ ಒಂದು ನಾಮಪದಕ್ಕೂ ಇನ್ನಿತರ ಪದಗಳಿಗೂ ಇರುವ ಸಂಬಂಧವನ್ನೂ ತಿಳಿಸುತ್ತವೆ. ಕ್ರಿಯಾಪದಕ್ಕೂ ವಾಕ್ಯದ ಇತರ ನಾಮಪದಗಳಿಗೂ ಸಂಬಂಧವನ್ನು ಕಲ್ಪಿಸುವ ನಾನಾ ಪ್ರಕಾರದ ವಿಭಕ್ತಿಗಳು ಸೂಚಿಸುವ ಅರ್ಥಕ್ಕೆ ಕಾರಕಾರ್ಥವೆನ್ನುವರು. ನಾಮ ವಿಭಕ್ತಿ ಪ್ರತ್ಯಯಗಳಲ್ಲಿ ಒಟ್ಟು ಎಂಟು ವಿಧಗಳನ್ನು ಗುರುತಿಸಲಾಗಿದೆ.

| ವಿಭಕ್ತಿಗಳು | ಕಾರಕಾರ್ಥಗಳು | ವಿಭಕ್ತಿ ಪ್ರತ್ಯಯ | | ಪ್ರಯೋಗ | |
|---|---|---|---|---|---|
| | | ಹೊಸಗನ್ನಡ | ಹಳಗನ್ನಡ | ಹೊಸಗನ್ನಡ | ಹಳಗನ್ನಡ |
| ಪ್ರಥಮಾ | ಕರ್ತ್ರರ್ಥ | ಉ | ಮ್ | ರಾಮನು | ರಾಮಮ್ |
| ದ್ವಿತೀಯಾ | ಕರ್ಮಾರ್ಥ | ಅನ್ನು | ಅಂ | ರಾಮನನ್ನು | ರಾಮನಂ |
| ತೃತೀಯಾ | ಕರಣಾರ್ಥ (ಸಾಧನಾರ್ಥ) | ಇಂದ | ಇಂ, ಇಂದಂ, ಇಂದೆ | ರಾಮನಿಂದ | ರಾಮನಿಂ ರಾಮನಿಂದಂ |
| ಚತುರ್ಥೀ | ಸಂಪ್ರದಾನ (ಕೊಡುವಿಕೆ) | ಗೆ, ಇಗೆ, ಕ್ಕೆ, ಅಕ್ಕೆ | ಗೆ, ಕೆ, ಕ್ಕೆ | ರಾಮನಿಗೆ | ರಾಮಂಗೆ |
| ಪಂಚಮೀ | ಅಪಾದಾನ (ಅಗಲಿಕೆ) | ದೆಸೆಯಿಂದ | ಅತ್ತಣಿಂ ಅತ್ತಣಿಂದಂ | ರಾಮನ ದೆಸೆಯಿಂದ | ರಾಮನತ್ತಣಿಂ ರಾಮನತ್ತಣಿಂದೆ |
| ಷಷ್ಠೀ | ಸಂಬಂಧ | ಅ | ಅ | ರಾಮನ | ರಾಮನ |
| ಸಪ್ತಮೀ | ಅಧಿಕರಣ | ಅಲ್ಲಿ, ಇಲ್ಲಿ | ಒಳ್ ಎ, ಒಳು | ರಾಮನಲ್ಲಿ | ರಾಮನೊಳ್ ರಾಮನೊಳು |
| ಸಂಬೋಧನಾ | ಅಭಿಮುಖೀಕರಣ (ಕರೆಯುವಿಕೆ) | ಆ, ಏ ಇರಾ, ಈ | ಆ, ಏ, ಇರಾ ಈ | ರಾಮಾ ರಾಮನೇ | ರಾಮಾ ರಾಮನೇ |

**ಪರೀಕ್ಷೆಯಲ್ಲಿ ಎರಡು ವಿಭಕ್ತಿ ಪ್ರತ್ಯಯಗಳನ್ನು ನೀಡಿ, ಅವುಗಳ ವಿಭಕ್ತಿಗಳ ಹೆಸರನ್ನು ಸೂಚಿಸಲು ಕೇಳಲಾಗುವುದು.**
**ಈ ಮುಂದಿನ ಪದಗಳಲ್ಲಿ ಬಳಕೆಯಾಗಿರುವ ವಿಭಕ್ತಿ ಪ್ರತ್ಯಯಗಳನ್ನು ಗಮನಿಸಿ, ವಿಭಕ್ತಿಗಳ ಹೆಸರನ್ನು ಬರೆಯಿರಿ:**

೧. ಕದಡಿದ : ..................... ವಿಭಕ್ತಿ     ೪. ಇವರಂ : ..................... ವಿಭಕ್ತಿ

೨. ಸಲಿಲಂ : ..................... ವಿಭಕ್ತಿ     ೫. ರಾಮನಿಂ : ..................... ವಿಭಕ್ತಿ

೩. ಧುರದೊಳ್ : ..................... ವಿಭಕ್ತಿ     ೬. ಅಂಧಕನು : ..................... ವಿಭಕ್ತಿ

೭. ಗುರುವಿಗೆ : ..................... ವಿಭಕ್ತಿ

೮. ಯಮಸುತಂಗೆ : ..................... ವಿಭಕ್ತಿ

೯. ಕಲಿಭೀಮನೇ : ..................... ವಿಭಕ್ತಿ

೧೦. ವಲ್ಲಭನ : ..................... ವಿಭಕ್ತಿ

೧೧. ಸಮತೆಯನ್ನು : ..................... ವಿಭಕ್ತಿ

೧೨. ಧರ್ಮಜನಿಗೆ : ..................... ವಿಭಕ್ತಿ

೧೩. ಬಲ್ಲವರಿಂದ : ..................... ವಿಭಕ್ತಿ

೧೪. ಮಂತ್ರಿಯಾಗು : ..................... ವಿಭಕ್ತಿ

೧೫. ವೈರಿಗೆ : ..................... ವಿಭಕ್ತಿ

೧೬. ಧರೆಯೊಳ್ : ..................... ವಿಭಕ್ತಿ

೧೭. ಪುರಂದರವಿಠಲನ : ..................... ವಿಭಕ್ತಿ

೧೮. ಕಟ್ಟಿಗೆಯ : ..................... ವಿಭಕ್ತಿ

೧೯. ಹರೆಯಕ್ಕೆ : ..................... ವಿಭಕ್ತಿ

೨೦. ಬಸ್‌ಸ್ಟಾಪಿನಲ್ಲಿ : ..................... ವಿಭಕ್ತಿ

೨೧. ಮನೆಗೆ : ..................... ವಿಭಕ್ತಿ

೨೨. ಅವನಿಗೆ : ..................... ವಿಭಕ್ತಿ

೨೩. ಮುದುಕಿಗೆ : ..................... ವಿಭಕ್ತಿ

೨೪. ಮೊಮ್ಮಗಳನ್ನು : ..................... ವಿಭಕ್ತಿ

೨೫. ಲಾವಾರಸದಲ್ಲಿ : ..................... ವಿಭಕ್ತಿ

೨೬. ಬಸಲಿಂಗನಿಗೆ : ..................... ವಿಭಕ್ತಿ

೨೭. ಕಣ್ಣಿನ ದೆಸೆಯಿಂದ : ..................... ವಿಭಕ್ತಿ

೨೮. ವಿಶ್ವಾಸದಿಂದ : ..................... ವಿಭಕ್ತಿ

೨೯. ಚಂದ್ರಪ್ಪನನ್ನು : ..................... ವಿಭಕ್ತಿ

೩೦. ತಿಮ್ಮಪ್ಪನವರಲ್ಲಿ : ..................... ವಿಭಕ್ತಿ

೩೧. ಅಭಿವೃದ್ಧಿಯ ದೆಸೆಯಿಂದ : ..................... ವಿಭಕ್ತಿ

೩೨. ಮುಖದಲ್ಲಿ : ..................... ವಿಭಕ್ತಿ

೩೩. ಗುಡಿಸಲಿನಿಂದ : ..................... ವಿಭಕ್ತಿ

೩೪. ಮಾರ್ಷನನ್ನು : ..................... ವಿಭಕ್ತಿ

೩೫. ಗಂಡಸರಲಿ : ..................... ವಿಭಕ್ತಿ

೩೬. ಅದೃಷ್ಟದಿಂದ : ..................... ವಿಭಕ್ತಿ

೩೭. ಕುದುಪನನ್ನು : ..................... ವಿಭಕ್ತಿ

೩೮. ಧಣಿಗಳಿಂದ : ..................... ವಿಭಕ್ತಿ

೩೯. ಪಿರಿಯವು : ..................... ವಿಭಕ್ತಿ

೪೦. ಗದ್ಯದೊಳ್ : ..................... ವಿಭಕ್ತಿ

೪೧. ತಂದೆಯ ದೆಸೆಯಿಂದ : ..................... ವಿಭಕ್ತಿ

೪೨. ರಾವಣನೇ : ..................... ವಿಭಕ್ತಿ

೪೩. ಅವಳಿಗೆ : ..................... ವಿಭಕ್ತಿ

# ೮. ಕ್ರಿಯಾಪದಗಳು – ಧಾತು – ಕಾಲಸೂಚಕಗಳು – ನಿಷೇಧಾರ್ಥಕ ರೂಪ

ಪೂರ್ಣಗೊಂಡ ಒಂದು ಕ್ರಿಯೆಯ ಅರ್ಥವನ್ನು ನೀಡುವ ಪದಗಳು ಕ್ರಿಯಾಪದಗಳೆನಿಸಿಕೊಳ್ಳುತ್ತವೆ. ಇವು ಕರ್ತೃವಿನ ಕ್ರಿಯೆಯನ್ನು ಹೇಳುವ ಪದಗಳಾಗಿವೆ. ಕ್ರಿಯಾಪದದ ಮೂಲ ರೂಪವೇ 'ಧಾತು' ಅಥವಾ 'ಕ್ರಿಯಾಪ್ರಕೃತಿ'.

ಧಾತುಗಳ ಮುಂದೆ ಕಾಲಸೂಚಕ ಪ್ರತ್ಯಯಗಳು ಹಾಗೂ ಕೊನೆಯಲ್ಲಿ ಆಖ್ಯಾತ ಪ್ರತ್ಯಯಗಳು ಸೇರಿ ಕ್ರಿಯಾಪದಗಳು ರೂಪುಗೊಳ್ಳುತ್ತವೆ.

*ಉದಾ:*

| *ಧಾತು* | *ಕಾಲಸೂಚಕ ಪ್ರತ್ಯಯ* | *ಆಖ್ಯಾತ ಪ್ರತ್ಯಯ* | *ಕ್ರಿಯಾಪದ* |
|---|---|---|---|
| ನೋಡು | ಉತ್ತ | ಆನೆ/ಆಳೆ | ನೋಡುತ್ತಾನೆ/ಳೆ |
| ನೋಡು | ದ | ಅನು/ಅಳು | ನೋಡಿದನು/ಳು |
| ನೋಡು | ವ | ಅನು/ಅಳು | ನೋಡುವನು/ಳು |
| ಓದು | ಉತ್ತ | ಆನೆ/ಆಳೆ | ಓದುತ್ತಾನೆ/ಳೆ |
| ಓದು | ಒ | ಅನು/ಅಳು | ಓದಿದನು/ಳು |
| ಓದು | ಏ | ಅನು/ಅಳು | ಓದುವನು/ಳು |

## ಧಾತುಗಳ ವಿಧಗಳು:

ಧಾತುಗಳಲ್ಲಿ (೧) ಮೂಲಧಾತು ಹಾಗೂ (೨) ಸಾಧಿತಧಾತು ಎಂಬೆರಡು ವಿಧಗಳಿವೆ.

### ಮೂಲಧಾತು:

ಯಾವುದೇ ಪ್ರತ್ಯಯವನ್ನು ಹೊಂದದೇ ತಮ್ಮ ಮೂಲರೂಪದಲ್ಲಿಯೇ ಪ್ರಯೋಗಿಸಲ್ಪಡುತ್ತಿದ್ದರೆ ಅಂತಹ ರೂಪಗಳಿಗೆ ಮೂಲಧಾತು ಅಥವಾ ಸಹಜಧಾತು ಎನ್ನುತ್ತಾರೆ. ಇವು ಆಯಾ ಭಾಷೆಯಲ್ಲಿ ಸಹಜವಾಗಿ ಇರುವಂತಹವುಗಳಾಗಿವೆ.

*ಉದಾ:* ನಡೆ, ಓಡು, ತೂಗು, ಹಿಗ್ಗು, ನಡುಗು, ಹಿಡಿ, ಕೊಡು, ಬೆಳಗು, ಹೊಗಳು, ಮಿಂಚು, ಹೊಳೆ, ಚಿಗುರು, ಸಾಕು, ಹರಡು, ತಿನ್ನು.

**ಸಾಧಿತಧಾತು:**

ಕೆಲವು ನಾಮಪ್ರಕೃತಿಗಳಿಗೆ, ಅನುಕರಣ, ಅವ್ಯಯಗಳಿಗೆ ಮತ್ತು ಎಲ್ಲ ಪ್ರೇರಣಾರ್ಥ ಪದಗಳಿಗೆ 'ಇಸು' ಎಂಬ ಪ್ರತ್ಯಯ ಸೇರಿದರೆ ಸಾಧಿತ ಧಾತುಗಳು ರೂಪಗೊಳ್ಳುತ್ತವೆ. ಇವುಗಳಿಗೆ 'ಪ್ರತ್ಯಯಾಂತ ಧಾತು' ಎಂದೂ ಕರೆಯುತ್ತಾರೆ.

೧) ನಾಮ ಪ್ರಕೃತಿಗಳಿಗೆ 'ಇಸು' ಪ್ರತ್ಯಯ ಸೇರಿದಾಗ ಸಾಧಿತ ಧಾತುಗಳು ಉಂಟಾಗುತ್ತವೆ.

(ಅ) ಕನ್ನಡ + ಇಸು = ಕನ್ನಡಿಸು; (ಆ) ಅಬ್ಬರ + ಇಸು = ಅಬ್ಬರಿಸು.

ಇದೇ ರೀತಿ, ರಕ್ಷಿಸು, ನಿರ್ಣಯಿಸು, ಪೂಜಿಸು, ಪ್ರಯತ್ನಿಸು, ಚಲಿಸು ಇತ್ಯಾದಿ.

೨) ಅನುಕರಣಾವ್ಯಯಗಳಿಗೆ 'ಇಸು' ಪ್ರತ್ಯಯ ಸೇರಿದಾಗ.

*ಉದಾ:* ಧಗಧಗ + ಇಸು = ಧಗಧಗಿಸು; ಘಮಘಮ + ಇಸು = ಘಮಘಮಿಸು.

೩) ಪ್ರೇರಣಾರ್ಥಕ ಶಬ್ದಗಳ ಮುಂದೆ 'ಇಸು' ಪ್ರತ್ಯಯ ಸೇರಿದಾಗ,

*ಉದಾ:* ಭಾವ + ಇಸು = ಭಾವಿಸು; ಮಲಗು + ಇಸು = ಮಲಗಿಸು;

ದುಃಖ + ಇಸು = ದುಃಖಿಸು; ಪ್ರಲಾಪ + ಇಸು = ಪ್ರಲಾಪಿಸು.

---

# ಕಾಲಸೂಚಕಗಳು

'ಕಾಲ' ಎಂದರೆ ಸಮಯ. ಕ್ರಿಯಾಪದಗಳು ಕಾಲಭೇದಗಳನ್ನು ತಿಳಿಸುತ್ತವೆ. ಇವು ವರ್ತಮಾನಕಾಲ, ಭೂತಕಾಲ ಮತ್ತು ಭವಿಷತ್‌ಕಾಲ ಎಂದು ಮೂರು ಬಗೆಯಾಗಿವೆ.

ಎಲ್ಲ ಧಾತುಗಳಿಗೂ ಆಖ್ಯಾತ ಪ್ರತ್ಯಯಗಳು ವರ್ತಮಾನ, ಭೂತ, ಭವಿಷ್ಯತ್ ಕಾಲಗಳಲ್ಲೂ; ವಿಧ್ಯರ್ಥ, ನಿಷೇಧಾರ್ಥ, ಸಂಭಾವನಾರ್ಥಗಳೆಂಬ ಮೂರು ಅರ್ಥಗಳಲ್ಲೂ ಸೇರಿ ಒಟ್ಟು ಆರು ಪ್ರಕಾರದ ಕ್ರಿಯಾಪದ ರೂಪಗಳು ಉಂಟಾಗುತ್ತವೆ.

**೧. ವರ್ತಮಾನ ಕಾಲ:**

ಈಗ ಪ್ರಸ್ತುತದಲ್ಲಿ ನಡೆಯುತ್ತಿರುವ ಕ್ರಿಯೆಯನ್ನು ಸೂಚಿಸುವ ಕಾಲಕ್ಕೆ ವರ್ತಮಾನ ಕಾಲ ಎನ್ನುವರು. ಧಾತುಗಳಿಗೆ ವರ್ತಮಾನ ಕಾಲದಲ್ಲಿ, ಧಾತು ಮತ್ತು ಆಖ್ಯಾತ ಪ್ರತ್ಯಯಗಳ ಮಧ್ಯದಲ್ಲಿ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಸೇರಿ ವರ್ತಮಾನ ಕಾಲ ಕ್ರಿಯಾಪದವೆನಿಸುತ್ತವೆ. ಈ ಕ್ರಿಯಾಪದಗಳು ಕರ್ತೃವಿನ ಪುರುಷ, ಲಿಂಗ ಮತ್ತು ವಚನಗಳನ್ನು ಆಧರಿಸಿಕೊಂಡಿರುತ್ತವೆ.

| ಪುರುಷ | ಧಾತು | ಕಾಲಸೂಚಕ ಪ್ರತ್ಯಯ | ಆಖ್ಯಾತ ಪ್ರತ್ಯಯ | | ಕ್ರಿಯಾಪದಗಳ ರೂಪ | |
|---|---|---|---|---|---|---|
| | | | ಏಕವಚನ | ಬಹುವಚನ | ಏಕವಚನ | ಬಹುವಚನ |
| ಪ್ರಥಮ (ಅವನು ಅವಳು ಅದು) | ಹೋಗು | ಉತ್ತ | ಆನೆ<br>ಆಳೆ<br>ಅದೆ | ಅರೆ<br>ಅವೆ | ಹೋಗುತ್ತಾನೆ<br>ಹೋಗುತ್ತಾಳೆ<br>ಹೋಗುತ್ತದೆ | ಹೋಗುತ್ತಾರೆ<br>ಹೋಗುತ್ತಾರೆ<br>ಹೋಗುತ್ತವೆ |
| ಮಧ್ಯಮ (ನೀನು) | ಹೋಗು | ಉತ್ತ | ಈಯೆ | ಈರಿ | ಹೋಗುತ್ತೀಯೆ | ಹೋಗುತ್ತೀರಿ |
| ಉತ್ತಮ (ನಾನು) | ಹೋಗು | ಉತ್ತ | ಏನೆ | ಏವೆ | ಹೋಗುತ್ತೇನೆ | ಹೋಗುತ್ತೇವೆ |

ವರ್ತಮಾನ ಕಾಲವನ್ನು ಸೂಚಿಸಲು 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಬರುವುದಾದರೂ ಕೆಲವೊಮ್ಮೆ ಎಂಟು, ಇದೆ, ಇವೆ ಎಂಬುದಾಗಿ ಬಳಕೆಯಾಗುತ್ತವೆ. ಇವು 'ಇರು' ಎಂಬ ಧಾತುವಿನ ಅರ್ಥದಲ್ಲಿ ವರ್ತಮಾನ ಕಾಲದ ಎಲ್ಲ ಕ್ರಿಯಾಪದಗಳ ರೂಪದಲ್ಲಿ ಬಳಸಲ್ಪಡುತ್ತವೆ.

*ಉದಾ:* ಹಕ್ಕಿಯು ಗೂಡಿನಲ್ಲಿ ಇದೆ. (ಇರುತ್ತದೆ)

ಹಕ್ಕಿಗಳು ಗೂಡಿನಲ್ಲಿ ಇವೆ. (ಇರುತ್ತವೆ)

## ೨. ಭೂತಕಾಲ:

ಈ ಹಿಂದೆ ಆಗಿಹೋದ ಕ್ರಿಯೆಯನ್ನು ಸೂಚಿಸುವ ಕಾಲಕ್ಕೆ ಭೂತಕಾಲವೆನ್ನುವರು. 'ದ' ಎಂಬ ಕಾಲಸೂಚಕ ಪ್ರತ್ಯಯವು ಎಲ್ಲ ಕಡೆಗೂ ಬರುತ್ತದೆ.

*ಉದಾ:* 'ಹೋಗು'

| ಪುರುಷ | ಧಾತು | ಕಾಲಸೂಚಕ ಪ್ರತ್ಯಯ | ಆಖ್ಯಾತ ಪ್ರತ್ಯಯ | | ಕ್ರಿಯಾಪದಗಳ ರೂಪ | |
|---|---|---|---|---|---|---|
| | | | ಏಕವಚನ | ಬಹುವಚನ | ಏಕವಚನ | ಬಹುವಚನ |
| ಪ್ರಥಮ (ಅವನು (ಅವಳು ಅದು) | ಹೋಗು<br>ಹೋಗು<br>ಹೋಗು | ದ<br>ದ<br>ದ | ಅನು<br>ಅಳು<br>ಇತು | ಅರು<br>ಅವು | ಅವನು ಹೋದನು<br>ಅವಳು ಹೋದಳು<br>ಅದು ಹೋಯಿತು | ಅವರು ಹೋದರು<br>ಅವು ಹೋದವು |
| ಮಧ್ಯಮ (ನೀನು) | ಹೋಗು | ದ | ಎ | ಇರಿ | ನೀನು ಹೋದೆ | ನೀವು ಹೋದಿರಿ |
| ಉತ್ತಮ (ನಾನು) | ಹೋಗು | ದ | ಎನು | ಎವು | ನಾನು ಹೋದೆನು | ನಾವು ಹೋದೆವು |

## ೩. ಭವಿಷತ್‌ಕಾಲ:

ಮುಂದೆ ನಡೆಯಲಿರುವ ಕ್ರಿಯೆಯನ್ನು ಸೂಚಿಸುವ ಕಾಲಕ್ಕೆ ಭವಿಷತ್‌ಕಾಲವೆನ್ನುವರು. ಸಾಮಾನ್ಯವಾಗಿ 'ವ' ಎಂಬ ಕಾಲಸೂಚಕ ಪ್ರತ್ಯಯ ಬರುತ್ತದೆ. ಕೆಲವೊಮ್ಮೆ 'ಎವ' ಎಂಬ ಪ್ರತ್ಯಯವೂ ಬರುವುದುಂಟು. [ಇ, ಎ ಕಾರಾಂತ ಧಾತುಗಳ ಮೇಲೆ ಬರುತ್ತದೆ]

*ಉದಾ:* 'ಹೋಗು'

| *ಪುರುಷ* | *ಧಾತು* | *ಕಾಲಸೂಚಕ ಪ್ರತ್ಯಯ* | *ಆಖ್ಯಾತ ಪ್ರತ್ಯಯ* | | *ಕ್ರಿಯಾಪದಗಳ ರೂಪ* | |
|---|---|---|---|---|---|---|
| | | | *ಏಕವಚನ* | *ಬಹುವಚನ* | *ಏಕವಚನ* | *ಬಹುವಚನ* |
| ಪ್ರಥಮ (ಅವನು | ಹೋಗು | ವ | ಅನು | ಅರು | ಅವನು ಹೋಗುವನು | ಅವರು ಹೋಗುವರು |
| (ಅವಳು | ಹೋಗು | | ಅಳು | | ಅವಳು ಹೋಗುವಳು | |
| ಅದು) | ಹೋಗು | | ಉದು | ಉವ | ಅದು ಹೋಗುವುದು | ಅವು ಹೋಗುವುವು |
| ಮಧ್ಯಮ (ನೀನು) | ಹೋಗು | ವ | ಎ | ಇರಿ | ನೀನು ಹೋಗುವೆ | ನೀವು ಹೋಗುವಿರಿ |
| ಉತ್ತಮ (ನಾನು) | ಹೋಗು | ವ | ಎನು | ಎವು | ನಾನು ಹೋಗುವೆನು | ನಾವು ಹೋಗುವೆವು |

## ಕ್ರಿಯಾಪದದ ಅರ್ಥರೂಪಗಳು:

ಪೂರ್ಣಕ್ರಿಯಾಪದಗಳು ಕನ್ನಡದಲ್ಲಿ ಕೆಲ ನಿರ್ದಿಷ್ಟವಾದ ಅರ್ಥಗಳಲ್ಲಿ ಬಳಸಲ್ಪಡುತ್ತಿದ್ದರೂ, ಪ್ರಮುಖವಾಗಿ ವಿಧ್ಯರ್ಥ, ಸಂಭಾವನಾರ್ಥ ಹಾಗೂ ನಿಷೇಧಾರ್ಥಗಳೆಂಬ ಮೂರು ರೀತಿಯಲ್ಲಿ ಬಳಸಲ್ಪಡುತ್ತವೆ. ಇವುಗಳಿಗೆ ಕಾಲಸೂಚಕ ಪ್ರತ್ಯಯಗಳು ಸೇರುವುದಿಲ್ಲವಾದುದರಿಂದ, ಇಲ್ಲಿ ಕಾಲಭೇದಗಳಿಲ್ಲ.

*ಉದಾ:* ೧) ವಿದ್ಯಾರ್ಥಿಗಳಿಂದ ನಮ್ಮ ಶಾಲೆಗೆ ಕೀರ್ತಿ **ಬರಲಿ**. (ವಿಧ್ಯರ್ಥ)

೨) ವಿದ್ಯಾರ್ಥಿಗಳಿಂದ ನಮ್ಮ ಶಾಲೆಗೆ ಕೀರ್ತಿ **ಬಂದೀತು**. (ಸಂಭವನಾರ್ಥ)

೩) ವಿದ್ಯಾರ್ಥಿಗಳಿಂದ ನಮ್ಮ ಶಾಲೆಗೆ ಕೀರ್ತಿ **ಬಾರದು**. (ನಿಷೇಧಾರ್ಥ)

ಮೇಲಿನ ಉದಾಹರಣೆಗಳಲ್ಲಿ **ಬರಲಿ, ಬಂದೀತು, ಬಾರದು** ಈ ಕ್ರಿಯಾಪದಗಳು **'ಬರು'** ಎಂಬ ಧಾತುವಿನಿಂದ ರೂಪುಗೊಂಡಿವೆ. ಮೊದಲ ವಾಕ್ಯದಲ್ಲಿ **ಬರಲಿ** ಎಂಬ ಕ್ರಿಯಾಪದವು, ಮನದ ಬಯಕೆಯನ್ನು ಸೂಚಿಸುವುದರಿಂದ ವಿಧ್ಯರ್ಥರೂಪದ ಕ್ರಿಯಾಪದವೆನಿಸುವುದು. ವಿಧಿ ಎಂದರೆ ಆಜ್ಞೆ, ಅಪ್ಪಣೆ, ಆಶೀರ್ವಾದ, ವಿನಂತಿ ಇತ್ಯಾದಿ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವ ಕ್ರಿಯಾಪದಗಳಿಗೆ ವಿಧ್ಯರ್ಥಕ ಕ್ರಿಯಾಪದಗಳೆನ್ನುತ್ತಾರೆ.

ಎರಡನೆಯ ವಾಕ್ಯದಲ್ಲಿ ಬಂದಿರುವ **'ಬಂದೀತು'** ಎಂಬ ಕ್ರಿಯಾಪದವು ಕ್ರಿಯೆ ನಡೆಯುವ ಸಂಭವವನ್ನು ಸೂಚಿಸುತ್ತದೆ. ಊಹೆ, ಸಂಶಯ, ತರ್ಕ ಇತ್ಯಾದಿ ಸಂಭವನೀಯತೆಯನ್ನು ಸೂಚಿಸುವ ಕ್ರಿಯಾಪದಗಳೆ ಸಂಭವನಾರ್ಥಕ ಕ್ರಿಯಾಪದಗಳೆನಿಸುತ್ತವೆ.

ಕೊನೆಯ ವಾಕ್ಯದಲ್ಲಿ ಬಂದಿರುವ **'ಬಾರದು'** ಎಂಬ ಕ್ರಿಯಾಪದವು ಕ್ರಿಯೆಯ ಕಾರ್ಯವು ನಡೆಯುವುದಿಲ್ಲ ಎಂಬರ್ಥವನ್ನು ಸೂಚಿಸುವುದರಿಂದ ಇದು ನಿಷೇಧಾರ್ಥಕ ಕ್ರಿಯಾಪದವೆನಿಸುತ್ತದೆ.

## ನಿಷೇಧ ಕ್ರಿಯಾರೂಪಗಳು:

ಕ್ರಿಯೆಯೊಂದು ನಡೆಯಲಿಲ್ಲ ಎಂಬ ಅರ್ಥವನ್ನು ಸೂಚಿಸುವ ಕ್ರಿಯಾಪದಗಳಿಗೆ ನಿಷೇಧಾರ್ಥಕ ಕ್ರಿಯಾಪದಗಳೆನ್ನುವರು.

ಏಕವಚನದಲ್ಲಿ **ಅನು, ಅಳು, ಅದು, ಎ, ಎನು,** ಎಂಬ ಆಖ್ಯಾತ ಪ್ರತ್ಯಯಗಳೂ; ಬಹುವಚನದಲ್ಲಿ **ಅರು, ಅರು, ಅವು, ಅರಿ, ಎವು** ಎಂಬ ಆಖ್ಯಾತ ಪ್ರತ್ಯಯಗಳೂ ಧಾತುಗಳ ಮೇಲೆ ಸೇರಿ ನಿಷೇಧಾರ್ಥಕ ಕ್ರಿಯಾಪದಗಳು ರೂಪುಗೊಳ್ಳುತ್ತವೆ. ಈ ಕ್ರಿಯಾಪದಗಳಿಗೆ ಕಾಲಸೂಚಕ ಪ್ರತ್ಯಯಗಳು ಸೇರುವುದಿಲ್ಲವಾದುದರಿಂದ ಇವುಗಳಿಗೆ ಕಾಲಭೇದಗಳು ಇರುವುದಿಲ್ಲ.

*ಉದಾ:* ಬರು.

| **ಪುರುಷ** | **ಧಾತು + ಆಖ್ಯಾತ ಪ್ರತ್ಯಯ ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
|---|---|---|---|---|
| ಪ್ರಥಮ ಪುರುಷ | ಬರು + ಅನು, | ಅರು | ಅವನು ಬಾರನು | ಅವರು ಬಾರರು |
| | ಬರು + ಅಳು, | ಅರು | ಅವಳು ಬಾರಳು | ಅವರು ಬಾರರು |
| | ಬರು + ಅದು, | ಅವು | ಅದು ಬಾರದು | ಅವು ಬಾರವು |
| ಮಧ್ಯಮ ಪುರುಷ | ಬರು + ಎ, | ಅರಿ | ನೀನು ಬಾರೆ | ನೀವು ಬಾರರಿ |
| ಉತ್ತಮ ಪುರುಷ | ಬರು + ಎನು, | ಎವು | ನಾನು ಬರೆನು | ನಾವು ಬರೆವು |

ಆದರೆ ಇತ್ತೀಚಿನ ದಿನಗಳಲ್ಲಿ, ಈ ನಿಷೇಧ ರೂಪಗಳ ಬದಲಾಗಿ **'ಇಲ್ಲ'** ಎಂಬ ಕ್ರಿಯಾರ್ಥಕ ಅವ್ಯಯವನ್ನು, ಕೃದಂತಕ್ಕೆ ಜೋಡಿಸಿ, ನಿಷೇಧ ರೂಪಗಳನ್ನು ಹೇಳುವ ಪರಿಪಾಠ ಹೆಚ್ಚುತ್ತಿದೆ. ಇದು ಎಲ್ಲಾ ಲಿಂಗ ಮತ್ತು ವಚನಗಳಲ್ಲಿ ಒಂದೇ ರೀತಿಯಾಗಿ ಬಳಕೆಯಾಗುತ್ತಿದೆ.

*ಉದಾ:*

ಅವನು<br>
ಅವಳು<br>
ಅದು<br>
ಅವರು } ಬರುವುದಿಲ್ಲ [ಬರನು, ಬಾರಳು, ಬಾರದು, ಬಾರರು, ಬಾರವು ಎಂಬರ್ಥದಲ್ಲಿ]

## ಅಭ್ಯಾಸ – ೧ : ಈ ಕ್ರಿಯಾಪದಗಳ 'ಧಾತು'ವನ್ನು ಗುರುತಿಸಿರಿ:

೧. ಓದಿದನು – ..............................
೨. ತಿಂದನು – ..............................
೩. ಬಂದವು – ..............................
೪. ನಿಂತರು – ..............................
೫. ಹಾಡುವಳು – ..............................
೬. ತೋರಿಸು – ..............................
೭. ಕುಡಿಸು – ..............................
೮. ನಲಿಯುತ್ತಾ – ..............................
೯. ಕಟ್ಟಿಸು – ..............................
೧೦. ಓಡುವರು – ..............................
೧೧. ಬೀಸುತ್ತಿತ್ತು – ..............................
೧೨. ಹೇಳಿದಾಗ – ..............................
೧೩. ನೋಡಿದನು – ..............................
೧೪. ಬರೆಯುವವಳು – ..............................
೧೫. ಕಲಿಯುವರು – ..............................
೧೬. ಹೋದರು – ..............................
೧೭. ಹೋಯಿತು – ..............................
೧೮. ಅಳುತ್ತಿತ್ತು – ..............................
೧೯. ಬಾರಿಸುವಳು – ..............................
೨೦. ನುಡಿಸುವಳು – ..............................
೨೧. ಕೇಳಿದರು – ..............................
೨೨. ಕೇಳುವರು – ..............................
೨೩. ಎದ್ದರು – ..............................
೨೪. ಮಾಡಿದಾಗ – ..............................
೨೫. ಬರೆಯುತ್ತಿದ್ದನು – ..............................
೨೬. ಬರುತ್ತಿದ್ದರು – ..............................

---

## ಅಭ್ಯಾಸ – ೨ : ಈ ಕೆಳಗಿನ ಕ್ರಿಯಾಪದಗಳ ಕಾಲವನ್ನು ಸೂಚಿಸಿರಿ:

೧. ಹೋದವು – ..............................
೨. ಬರುವವು – ..............................
೩. ಕುಣಿಯುತ್ತಿತ್ತು – ..............................
೪. ಓದಿದರು – ..............................
೫. ಓಡಿದರು – ..............................
೬. ಬಂದಿತು – ..............................
೭. ನೋಡಿದಳು – ..............................
೮. ಬರುತ್ತಿದ್ದರು – ..............................
೯. ನಿಂತರು – ..............................
೧೦. ಕರೆವರು – ..............................
೧೧. ನೋಡಿತು – ..............................
೧೨. ಹಾಡಿದಳು – ..............................
೧೩. ಕೇಳುತ್ತಾರೆ – ..............................
೧೪. ನಗುವರು – ..............................
೧೫. ತಿಂದನು – ..............................
೧೬. ಕಟ್ಟುವರು – ..............................
೧೭. ಹೋಯಿತು – ..............................
೧೮. ಹೋದರು – ..............................

| | | | | | |
|---|---|---|---|---|---|
| ೧೯. ಬರುತ್ತಾರೆ | – | ................................ | ೨೨. ಕುಣಿವರು | – | ................................ |
| ೨೦. ಕೇಳಿದನು | – | ................................ | ೨೩. ನಲಿಯುತ್ತಾರೆ | – | ................................ |
| ೨೧. ಬಂದಿತು | – | ................................ | ೨೪. ಬಂದರು | – | ................................ |

**ಅಭ್ಯಾಸ – ೩: ಇವುಗಳನ್ನು ನಿಷೇಧ ರೂಪದಲ್ಲಿ ಬರೆಯಿರಿ:**

| | | | | | |
|---|---|---|---|---|---|
| ೧. ಹೋಗುವನು | – | ................................ | ೧೪. ನೋಡುವುದು | – | ................................ |
| ೨. ಬರುವರು | – | ................................ | ೧೫. ಕರೆಯಿತು | – | ................................ |
| ೩. ನೋಡಿದಳು | – | ................................ | ೧೬. ಮರೆಯುವೆ | – | ................................ |
| ೪. ನೋಡುವರು | – | ................................ | ೧೭. ತಿನ್ನು | – | ................................ |
| ೫. ತರುವರು | – | ................................ | ೧೮. ಹೋಗುವುದು | – | ................................ |
| ೬. ಹಾಡುವನು | – | ................................ | ೧೯. ನೋಡುವಳು | – | ................................ |
| ೭. ಆಡಿದರು | – | ................................ | ೨೦. ತಿಂದಿತು | – | ................................ |
| ೮. ಆಡಿತು | – | ................................ | ೨೧. ಬರುತ್ತಾರೆ | – | ................................ |
| ೯. ಹೋಗುವಿರಿ | – | ................................ | ೨೨. ಮಾಡುವೆ | – | ................................ |
| ೧೦. ಕೇಳುವರು | – | ................................ | ೨೩. ಹೋಗುವಳು | – | ................................ |
| ೧೧. ತಿನ್ನುವಳು | – | ................................ | ೨೪. ನಿಲ್ಲುವುದು | – | ................................ |
| ೧೨. ಬರುವುದು | – | ................................ | ೨೫. ಕರೆಯುವರು | – | ................................ |
| ೧೩. ಹಾಡುವೆ | – | ................................ | ೨೬. ಬರೆವನು | – | ................................ |

## : ಪರಾಮರ್ಶನೆಗೆ :


೧. ಕನ್ನಡ ವ್ಯಾಕರಣ ಮತ್ತು ರಚನೆ : ಎನ್. ಗೋಪಾಲಕೃಷ್ಣ ಉಡುಪ

೨. ಕನ್ನಡ ಮೂಲ ವ್ಯಾಕರಣ : ಪಂಜೆ ಮಂಗೇಶ್ವರರಾವ್

೩. ಕನ್ನಡ ಮಧ್ಯಮ ವ್ಯಾಕರಣ : ತೀ.ನಂ. ಶ್ರೀಕಂಠಯ್ಯ

೪. ಹಳೆಗನ್ನಡ ನಿಘಂಟು : ಎನ್. ಬಸವಾರಾಧ್ಯ

೫. ಇಗೋ ಕನ್ನಡ, ಎರವಲು ಪದಕೋಶ : ಜಿ. ವೆಂಕಟಸುಬ್ಬಯ್ಯ

೬. ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ : ಡಿ.ಎನ್. ಶಂಕರಭಟ್ಟ

೭. ಕನ್ನಡ ವ್ಯಾಕರಣ : ಆರ್. ಗಣೇಶ

# ೯. ಪ್ರಬಂಧ ರಚನೆ

ಇಪ್ಪತ್ತನೆಯ ಶತಮಾನದಲ್ಲಿ ವೈವಿಧ್ಯಪೂರ್ಣವಾಗಿ ಬೆಳೆದ ಸಾಹಿತ್ಯಪ್ರಕಾರಗಳಲ್ಲಿ ಪ್ರಬಂಧ ಪ್ರಕಾರವೂ ಒಂದು. ಇದು ಇಂಗ್ಲಿಷಿನ ‘Essay’ ಎನ್ನುವ ಪ್ರಕಾರಕ್ಕೆ ಸಂವಾದಿಯಾಗಿ ಬಂದಿದೆ. ಪ್ರಬಂಧ ಒಂದು ಲೇಖನಕಲೆ. ಒಂದು ನಿರ್ದಿಷ್ಟ ವಿಷಯದ ಕುರಿತು ಆಕರ್ಷಕವಾಗಿ, ನಿಖರವಾಗಿ, ಬರೆದ ಗದ್ಯರಚನೆಗಳನ್ನು ಈ ಹೆಸರಿನಿಂದ ಕರೆಯಲಾಗಿದೆ.

## ಪ್ರಬಂಧದ ಲಕ್ಷಣ

ಖಚಿತವಾದ ವಿಷಯಜ್ಞಾನ, ನಿರೂಪಣೆಯಲ್ಲಿ ಸ್ಪಷ್ಟತೆ, ಆಕರ್ಷಕ ಶೈಲಿ ಇವೆಲ್ಲ ಇದ್ದಾಗ ಉತ್ತಮ ಪ್ರಬಂಧ ರೂಪುಗೊಳ್ಳುತ್ತದೆ. ಮೇಲಾಗಿ ಎಲ್ಲ ಅಂಶಗಳನ್ನು ತನ್ನದೇ ಆದ ದೃಷ್ಟಿಕೋನದಲ್ಲಿ ನೋಡುವ, ವಿಶ್ಲೇಷಿಸುವ ಗುಣ ಅಗತ್ಯ. ಪ್ರಬಂಧದ ಗುರಿ ವಿಷಯದ ಆಳ, ವಿಸ್ತಾರದ ಬಗ್ಗೆ ತಿಳುವಳಿಕೆ ನೀಡುವುದೇ ಆಗಿದೆ.

ವಿಷಯವನ್ನು ಕ್ರಮಬದ್ಧವಾಗಿ ಹೇಳುವುದು ಇಲ್ಲಿ ಮುಖ್ಯ. ಈ ಹಿನ್ನೆಲೆಯಲ್ಲಿ ನೋಡಿದಾಗ ಪ್ರಬಂಧದಲ್ಲಿ ಪೀಠಿಕೆ, ವಿಷಯ ಪ್ರತಿಪಾದನೆ, ಮತ್ತು ಮುಕ್ತಾಯ ಎಂಬ ಮೂರು ಹಂತಗಳಿರುವುದು ಅಗತ್ಯ. ಮೊದಲ ಹಂತದಲ್ಲಿ ವಿಷಯದ ಮಹತ್ತ್ವವನ್ನು ಸಂಕ್ಷಿಪ್ತವಾಗಿ ಒತ್ತಿ ಹೇಳುವ, ಎರಡನೆಯ ಹಂತದಲ್ಲಿ ಪೂರಕ ಸಾಮಗ್ರಿಗಳ ಮೂಲಕ ಅಂದರೆ ಸಾಕಷ್ಟು ಉದಾಹರಣೆ, ಅಭಿಪ್ರಾಯಗಳನ್ನು ತರ್ಕಬದ್ಧವಾಗಿ ಮಂಡಿಸುವ ಮೂಲಕ ವಿಷಯ ಪ್ರತಿಪಾದನೆ ಮಾಡುವ ಕೌಶಲ ಇರಬೇಕು. ಕೊನೆಗೆ ಪ್ರಬಂಧದ ಒಟ್ಟು ಸಾರವನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಗಾದೆಮಾತು, ಸೂಕ್ತಿ ಅಥವಾ ಪ್ರಶ್ನೆಗಳ ಮೂಲಕ ಮುಕ್ತಾಯಗೊಳಿಸುವ ಅರಿವು ಇರಬೇಕು.

ಆಳವಾದ ವಿಷಯಜ್ಞಾನ, ಹಿರಿಯರು, ಜ್ಞಾನಿಗಳು ಹೇಳಿರುವ ಸೂಕ್ತಿ, ಗಾದೆಮಾತು, ಪ್ರಸಿದ್ಧ ಕವಿಗಳ ಕವಿತೆಯ ಸಾಲುಗಳು ಮೊದಲಾದ ಅಂಶಗಳನ್ನು ಸಂದರ್ಭೋಚಿತವಾಗಿ ಬಳಸುವ ಕೌಶಲ, ವ್ಯಾಕರಣ ಶುದ್ಧತೆ, ವಿಷಯವನ್ನು ಸರಳವಾಗಿ ಮಂಡನೆ ಮಾಡಬಲ್ಲ ಬುದ್ಧಿವಂತಿಕೆ ಇವೆಲ್ಲ ಇದ್ದಾಗ ಪ್ರಬಂಧ ಹೆಚ್ಚು ಅರ್ಥಪೂರ್ಣ ವಾಗುತ್ತದೆ. ಪರೀಕ್ಷೆಯಲ್ಲಿ ೫ ಅಂಕಗಳಿಗೆ ಎರಡು ಪ್ರಬಂಧಗಳನ್ನು ಕೊಟ್ಟು ಒಂದನ್ನು ಬರೆಯಲು ಸೂಚಿಸಿರುತ್ತಾರೆ. ಮಾದರಿಗಾಗಿ ಎರಡು ಪ್ರಬಂಧಗಳನ್ನು ಇಲ್ಲಿ ನೀಡಿದೆ. ಮೊದಲ ಪ್ರಬಂಧದ ವಿಷಯವು ಅತಿಮುಖ್ಯ ಸಮಸ್ಯೆಯನ್ನು ಕುರಿತಾಗಿದೆ. ಈ ಕಾರಣದಿಂದ ವಿಸ್ತಾರವಾಗಿ ನೀಡಲಾಗಿದೆ. ಪರೀಕ್ಷೆಯಲ್ಲಿ ಒಂದು ಪುಟ ಅಥವಾ ಹದಿನೈದು ಇಪ್ಪತ್ತು ಸಾಲುಗಳಲ್ಲಿ ಬರೆದರೆ ಸಾಕು.

---

### *ಮಾದರಿ ಪ್ರಬಂಧ–೧*

### ವಿಷಯ: “ತ್ಯಾಜ್ಯ ವಸ್ತುಗಳ ನಿರ್ವಹಣೆಯ ಸಮಸ್ಯೆ”

ನಗರ ಪ್ರದೇಶಗಳಲ್ಲಿ ತ್ಯಾಜ್ಯವಸ್ತುಗಳ ನಿರ್ವಹಣೆಯು ಬಹುದೊಡ್ಡ ಸಮಸ್ಯೆಯಾಗಿದೆ. ನಾವು ‘ಕಸ’ ಎಂದು ಬಿಸಾಡುವ ಅನೇಕ ವಸ್ತುಗಳನ್ನು ಎಲ್ಲಿಗೆ ಕೊಂಡೊಯ್ಯಬೇಕು? ಏನು ಮಾಡಬೇಕೆಂಬುದೇ ಬಗೆಹರಿಯದ ಸಮಸ್ಯೆಯಾಗಿದೆ. ಕಸವಿಲೇವಾರಿ ತಡವಾದರೆ ಉಂಟಾಗುವ ಪರಿಸರ ಮಾಲಿನ್ಯ ಮತ್ತು ಸಾಂಕ್ರಾಮಿಕ ರೋಗಗಳ ಹಾವಳಿ ಉಂಟುಮಾಡುವ ಪರಿಣಾಮಗಳು ಘೋರತರವಾದುದು.

ನಗರ ಪ್ರದೇಶದ ಜನರು ತ್ಯಾಜ್ಯ ವಸ್ತುಗಳನ್ನು ನಿರ್ವಹಣೆ ಮಾಡುವುದೆಂದರೆ ರಾಶಿರಾಶಿಗೊಂಡ ಕಸವನ್ನು ಗ್ರಾಮಾಂತರ ಪ್ರದೇಶಗಳಿಗೆ ತೆಗೆದುಕೊಂಡು ಹೋಗಿ ತೆರೆದ ಬಯಲಿನಲ್ಲಿ ಸುರಿದು ಬರುವುದು ಎಂದುಕೊಂಡಿದ್ದಾರೆ.

ಯಾವ ಊರಿಗೆ ಹೋದರೂ ಅಲ್ಲಿ ನಮ್ಮನ್ನು ಮೊದಲು ಸ್ವಾಗತಿಸುವುದು ಕೊಳೆತು ನಾರುತ್ತಿರುವ ಕಸದ ರಾಶಿಗಳೇ. ಈ ಬಗ್ಗೆ ಜನರು ಎಚ್ಚೆತ್ತುಕೊಂಡು ಇದನ್ನು ನಿಯಂತ್ರಿಸಬೇಕಾಗಿದೆ. ಗ್ರಾಮಸ್ಥರು ಒಂದಾಗಿ ನಗರ ತ್ಯಾಜ್ಯ ನಿರ್ವಹಣೆಯ ರೀತಿಯನ್ನು ಪ್ರತಿಭಟಿಸುತ್ತಿರುವುದು ಒಂದು ಆಶಾದಾಯಕವಾದ ಬೆಳವಣಿಗೆಯಾಗಿದೆ. ನಗರ ಪ್ರದೇಶಗಳಲ್ಲೂ ಜಾಗೃತ ನಾಗರಿಕರು ಡೈಲಿ ಡಂಪ್ (Daily Dump)ನಂತಹ ಯೋಜನೆಗಳನ್ನು ಹುಟ್ಟುಹಾಕಿ, ತಮ್ಮದೇ ಆದ ರೀತಿಯ ಪ್ರಯತ್ನದಲ್ಲಿ ತೊಡಗಿರುವುದೂ ಕೂಡ ಉತ್ತಮ ಬೆಳವಣಿಗೆಯೇ ಸರಿ. ಆಳುವವರು–ಆಳಿಸಿಕೊಳ್ಳುವವರೆಂಬ ಭೇದಭಾವಗಳಿಲ್ಲದೆ ಭೂಮಿಯನ್ನು ಮೂಲಸ್ವರೂಪದಲ್ಲಿ ಉಳಿಸಿಕೊಳ್ಳಬೇಕೆಂಬ ಕಾಳಜಿಯುಳ್ಳವರೆಲ್ಲರೂ ಒಂದಾಗಿ ಕೈಜೋಡಿಸಬೇಕಾಗಿದೆ.

ಎಲ್ಲರಲ್ಲಿಯೂ ಉತ್ತಮ ತ್ಯಾಜ್ಯ ನಿರ್ವಹಣೆಯ ಅರಿವನ್ನು ಮೂಡಿಸುವಂತಹ ಕೆಲಸ ವಿಸ್ತೃತಗೊಳ್ಳಬೇಕು, ಇದು ಮೊದಲನೆಯ ಹೆಜ್ಜೆ. ಕಸವನ್ನು ಮೂಲದಲ್ಲಿಯೇ ವಿಂಗಡಿಸುವುದು, ಕಡಿಮೆ ಸಾಗಾಟ, ಉತ್ಕೃಷ್ಟಮಟ್ಟದ ಪರಿಷ್ಕರಣೆ – ಇವೆಲ್ಲವನ್ನೂ ಉತ್ತಮ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಸ್ವರೂಪ ಒಳಗೊಂಡಿರಬೇಕು. ಕೆಲವನ್ನು ಮುಂದಿನಂತೆ ಯೋಚಿಸಬಹುದು.

**ಮೂಲದಲ್ಲಿಯೇ ವಿಂಗಡಿಸುವುದು–ಸಂಗ್ರಹಿಸುವುದು:** ಕಸವು ಉತ್ಪಾದನೆಯಾಗುವಲ್ಲಿಯೇ ವಿವಿಧ ರೀತಿಯ ತ್ಯಾಜ್ಯಗಳನ್ನು ಪ್ರತ್ಯೇಕಿಸಿ ಸಂಗ್ರಹಿಸಿದರೆ, ಅವುಗಳನ್ನು ಮುಂದಿನ ನಿರ್ವಹಣೆಗೆ ಕೊಡುವುದು ಅತ್ಯಂತ ಮಹತ್ತ್ವದ–ಯೋಗ್ಯವಾದ ಹೆಜ್ಜೆ. ಹೀಗೆ ಮಾಡದೆ ಎಲ್ಲವನ್ನೂ ಕಲಸುಮೇಲೋಗರ ಮಾಡಿ ಎಸೆದರೆ, ಅವುಗಳನ್ನು ವಿಂಗಡನೆ ಮಾಡುವುದೇ ಕಷ್ಟದ ಕೆಲಸ. ಇಂದು ವಿಂಗಡನೆಗೊಳ್ಳದ ಮಿಶ್ರತ್ಯಾಜ್ಯಗಳು ಹೆಚ್ಚಾಗಿ ಪರಿಷ್ಕೃತಗೊಳ್ಳದೆ ಎಸೆಯಲ್ಪಡುತ್ತಿವೆ (landfill). ಇದರಿಂದ ಪರಿಸರಕ್ಕೆ ಊಹೆಗೆ ಮೀರಿದ ಹಾನಿ ಸಂಭವಿಸುತ್ತಿವೆ. ಇನ್ನು ಕೆಲವೆಡೆ ಮಿಶ್ರತ್ಯಾಜ್ಯ ರಾಶಿಯಿಂದ ಉಪಯುಕ್ತ/ಲಾಭದಾಯಕ ವಸ್ತುಗಳನ್ನು ಪ್ರತ್ಯೇಕಿಸಲು ಮುಗ್ಧಮಕ್ಕಳು ಆರೋಗ್ಯ–ಶಿಕ್ಷಣದ ಪರಿವೆಯಿಲ್ಲದೆ ಕಸದರಾಶಿಯ ನಡುವೆ ದುಡಿಯುತ್ತಿದ್ದಾರೆ. ಹೀಗಾಗದಂತೆ ತಡೆಯಬೇಕಾದರೆ ಪ್ರತಿಯೊಬ್ಬರೂ ಕಸವನ್ನು ವಿಂಗಡಿಸುವುದು ತಮ್ಮ ಜವಾಬ್ದಾರಿಯೆಂದು ಅರಿತು, ಕಾರ್ಯಪ್ರವೃತ್ತರಾಗಬೇಕು. ಘನತ್ಯಾಜ್ಯಗಳಲ್ಲಿ ಕಾಗದ, ಗಾಜು, ಲೋಹಗಳು, ಪ್ಲಾಸ್ಟಿಕ್, ಇತ್ಯಾದಿಗಳನ್ನು ಮೂಲದಲ್ಲಿಯೇ ವಿಂಗಡಿಸಬಹುದಲ್ಲವೇ?

**ತ್ಯಾಜ್ಯ ವಿಂಗಡನೆ ಎಂದರೇನೆಂಬುದನ್ನು ಮೊದಲು ತಿಳಿಯೋಣ:** ತ್ಯಾಜ್ಯ ವಸ್ತುಗಳನ್ನು ವಿಂಗಡಿಸುವಾಗ ಮೊದಲು ನಮಗಿರಬೇಕಾದ ತಿಳಿವಳಿಕೆಯೆಂದರೆ, ನಮ್ಮ ಮನೆಗಳಲ್ಲಿ ಉತ್ಪಾದನೆಗೊಳ್ಳುವ ತ್ಯಾಜ್ಯಗಳಲ್ಲಿ ಯಾವುದು ಸುಲಭವಾಗಿ ತಾನಾಗಿಯೇ ಮರಳಿ ಪ್ರಕೃತಿಯ ಪಂಚಭೂತಗಳಲ್ಲಿ ವಿಲೀನ (vio-degradable) ವಾಗುತ್ತವೆ? ಯಾವುದು ಆಗುವುದಿಲ್ಲ? ಎಂಬುದರ ತಿಳಿವಳಿಕೆ ಅತಿಮುಖ್ಯ. ವಿಷಕಾರಿಯಾಗುವಂಥದ್ದು–ಆಗದಿರುವಂಥದ್ದು, ಪರಿಷ್ಕರಿಸಿದಾಗ ಒಳಿತುಂಟಾಗುವಂಥದ್ದು–ಆಗದೆ ಇರುವಂಥದ್ದು ಈ ಬಗೆಯ ಅರಿವನ್ನು ಮೂಡಿಸುವ ಪ್ರಯತ್ನ ಮೊದಲಾಗಬೇಕು. ಹೀಗೆ ತ್ಯಾಜ್ಯಗಳನ್ನು ಹಲವು ರೀತಿಯಲ್ಲಿ ವಿಂಗಡಿಸುವುದನ್ನು ಮೊದಲು ಕಲಿಸಿದಲ್ಲಿ ಅವುಗಳ ನಿರ್ವಹಣೆಗೆ ತುಂಬಾ ಸಹಾಯವಾಗುತ್ತದೆ. ಘನತ್ಯಾಜ್ಯಗಳು, ಆಹಾರ ಮತ್ತಿತರ ಸಸ್ಯಮೂಲದ/ಪ್ರಾಣಿಮೂಲದ ತ್ಯಾಜ್ಯಗಳು, ರಾಸಾಯನಿಕಗಳನ್ನೊಳಗೊಂಡ ತ್ಯಾಜ್ಯಗಳು, ಇತರೆ ತ್ಯಾಜ್ಯಗಳು – ಇವೆಲ್ಲದರ ವಿಂಗಡಣೆಯ ಅರಿವು ಬಹಳ ಮುಖ್ಯ. ಹಳೇ ಲೋಹದ ವಸ್ತುಗಳು, ನ್ಯೂಸ್ ಪೇಪರ್‌ಗಳು, ಹಾಲಿನ ಪ್ಯಾಕೆಟ್, ಒಡೆದ ಗಾಜಿನ ಬಾಟಲ್ ಇತ್ಯಾದಿಗಳನ್ನು ಕಸದ ರಾಶಿಯಲ್ಲಿ ಸೇರಿಸದೆ ರದ್ದಿಯವರಿಗೆ ಮಾರುವುದು ಒಳ್ಳೆಯದು. ಇತ್ತೀಚೆಗೆ ಆಹಾರ ತ್ಯಾಜ್ಯ ಇತ್ಯಾದಿಗಳನ್ನೂ ಈ ವಿಭಾಗಕ್ಕೆ ಸೇರಿಸಿ, ತ್ಯಾಜ್ಯ ಆಹಾರಗಳಿಂದ ಶಕ್ತಿ, ಉತ್ತಮ ಗೊಬ್ಬರವನ್ನು ಪಡೆಯಲಾಗುತ್ತಿವೆ.

**ತ್ಯಾಜ್ಯವಸ್ತುಗಳ ಪರಿಷ್ಕರಣೆಯ ಅಗತ್ಯ:** ತ್ಯಾಜ್ಯವಸ್ತುಗಳನ್ನು ವಿಂಗಡಿಸುವುದು ಮೊದಲ ಹಂತವಾದರೆ, ಅದರಷ್ಟೇ ಮುಖ್ಯವಾದುದು ಉತ್ಕೃಷ್ಟಮಟ್ಟದ ಪರಿಷ್ಕರಣೆ. ಇದು ನಿರ್ವಹಣೆಯ ಬಹುಮುಖ್ಯ ಅಂಶವೂ ಹೌದು, ಉಳಿದುವೆಲ್ಲ

ಬೆಂಬಲಿಸುವ ಅಂಶಗಳು ಮಾತ್ರ (Supporting Factors). ಮರುಬಳಕೆಯಾಗಬಲ್ಲ ಪದಾರ್ಥಗಳನ್ನು ಪ್ರತ್ಯೇಕಗೊಳಿಸುವುದು, ಉಪಯೋಗಿಸುವುದು (Recycle), ಈ ಪ್ರಕ್ರಿಯೆಯಲ್ಲಿ ತ್ಯಾಜ್ಯದಲ್ಲಿ ಅಡಕವಾಗಿರುವ 'ಶಕ್ತಿ'ಯನ್ನು ಸಾಧ್ಯವಾದಷ್ಟು ಪಡೆಯುವುದು (ಉದಾ: ಇಂಧನವಾಗಿ ಉಪಯೋಗಿಸಲು ಸಾಧ್ಯವಿರುವ ದಹನ ಅನಿಲ), ಉಳಿದ ತ್ಯಾಜ್ಯವನ್ನು ಜಾಗರೂಕತೆಯಿಂದ ಸಂಸ್ಕರಿಸಿ ಯಾರಿಗೂ ಹಾನಿಕಾರಕವಲ್ಲದ ಪದಾರ್ಥಗಳನ್ನಾಗಿ ವಿಂಗಡಿಸುವುದು, ವಿಷಪದಾರ್ಥಗಳನ್ನು ಭೂಗತಗೊಳಿಸುವುದು – ಈ ಎಲ್ಲದರ ಬಗ್ಗೆ ಸಂಶೋಧನೆ ನಡೆಯಬೇಕು.

**ತ್ಯಾಜ್ಯ ಉತ್ಪಾದನೆಯನ್ನು ಕಡಿಮೆಮಾಡುವ ಜವಾಬ್ದಾರಿ:** ಇದರ ಬಗ್ಗೆ ನಾವೆಲ್ಲ ಗಂಭೀರವಾಗಿ ಯೋಚಿಸಬೇಕು. ಇದು ಸಮಸ್ಯೆಯನ್ನು ಅರ್ಧ ಕಡಿಮೆ ಮಾಡುತ್ತದೆ. ರೋಗವನ್ನು ಗುಣಪಡಿಸುವುದಕ್ಕಿಂತ ರೋಗ ಬರದಂತೆ ಎಚ್ಚರವಹಿಸುವುದು ಉತ್ತಮ. ತ್ಯಾಜ್ಯದ ಉತ್ಪಾದನೆಯನ್ನು ಕಡಿಮೆಮಾಡಿ, ಅದರ ವಿಲೇವಾರಿಯ ಬಗ್ಗೆ ನಿಶ್ಚಿಂತೆಯಿಂದ ಇರಬಹುದು. ಅಗತ್ಯ–ಆಸೆ–ದುರಾಶೆಗಳ ತುಲನೆ ಮಾಡಿ ಅನಗತ್ಯ ವಸ್ತುಗಳ ಬಳಕೆಯನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಬಹುದು. ಸಾಧ್ಯವಾದಷ್ಟೂ ಪರಿಸರ ಸ್ನೇಹಿಯಾದ ಉತ್ಪನ್ನಗಳನ್ನೇ ಬಳಸಬೇಕು. ಉತ್ಪಾದನೆ, ಸಾಗಾಟದ ದೃಷ್ಟಿಯಿಂದಲೂ ಪರಿಸರಸ್ನೇಹಿ ಉತ್ಪನ್ನಗಳಾಗಿರಬೇಕು. ಮರುಬಳಕೆಯ ಬಗ್ಗೆ ಯೋಚಿಸುವುದು, ಹಾಳಾದವನ್ನು ಎಸೆದು ಹೊಸದನ್ನು ತೆಗೆದುಕೊಳ್ಳುವ ಬದಲು, ರಿಪೇರಿ ಮಾಡಿಸಿ ಬಳಸುವುದು, ಬೇಡವಾದ ಉಪಯುಕ್ತ ವಸ್ತುಗಳನ್ನು ಇತರರಿಗೆ ಅಗತ್ಯವಿರುವವರಿಗೆ ಉಪಯೋಗಿಸಲು ಕೊಡುವುದು – ಎಷ್ಟೆಲ್ಲಾ ರೀತಿಯಲ್ಲಿ ತ್ಯಾಜ್ಯ ಉತ್ಪಾದನೆಯನ್ನು ಕಡಿಮೆಗೊಳಿಸಲು ಅವಕಾಶವಿದೆ. ಎಲ್ಲವನ್ನೂ ಸರ್ಕಾರವೇ ಸರಿಪಡಿಸಲೆಂದು ಯೋಚಿಸುವುದು ಸರಿಯಲ್ಲ. ನಮ್ಮ ಜವಾಬ್ದಾರಿಯನ್ನೂ ಅರಿತು ನಡೆಯುವುದು ಸರಿಯಾದ ದಾರಿ.

---

## *ಮಾದರಿ ಪ್ರಬಂಧ–೨*

## ವಿಷಯ: ಮಹಾತ್ಮರ ಜಯಂತಿ

ದೇಶದ, ಸಮಾಜದ, ಮಾನವಧರ್ಮದ ಒಳಿತಿಗಾಗಿ ಜೀವನವನ್ನು ಸಮರ್ಪಿಸಿಕೊಂಡ ವ್ಯಕ್ತಿಗಳೇ ಮಹಾಪುರುಷರು. ಇವರು ಹುಟ್ಟಿದ ದಿನವೇ ಜಯಂತಿ. ಈ ಮಹಾಪುರುಷರಿಗೆ ಗೌರವ ಸೂಚಿಸುವ ಸಲುವಾಗಿ ಅವರ ಜಯಂತಿಯನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸಲಾಗುತ್ತದೆ. ಇದು ಹೆಚ್ಚು ಮಹತ್ವ ಪಡೆದಿರುವುದು ನಮ್ಮ ದೇಶದಲ್ಲಿ.

ಮಹಾಪುರುಷರ ಜಯಂತಿಯ ಉದ್ದೇಶ ಆ ವ್ಯಕ್ತಿಗಳನ್ನು ಕೇವಲ ಸ್ಮರಿಸುವುದು, ಗೌರವಿಸುವುದು ಅಲ್ಲ. ಬದಲಾಗಿ ಅವರ ಜೀವನ ಸಾಧನೆ, ಆದರ್ಶಗಳನ್ನು ಸಮಾಜಕ್ಕೆ ಪರಿಚಯಿಸುವುದು. ಆ ಮೂಲಕ ತಲೆಮಾರಿನಿಂದ ತಲೆಮಾರಿಗೆ ಅವರು ಹೇಳಿದ ಮೌಲ್ಯಗಳನ್ನು ದಾಟಿಸುವುದೇ ಆಗಿದೆ. ಇದು ಉಂಟುಮಾಡಬಲ್ಲ ಪ್ರೇರಣೆ, ಪರಿಣಾಮಗಳನ್ನು ಗಮನಿಸಿ ಮಹಾಪುರುಷರ ಜಯಂತಿಗೆ ದೇಶ ಮಹತ್ತ್ವ ನೀಡಿದೆ. ಸಭೆಗಳ ಮೂಲಕ, ಭಾಷಣಗಳ ಮೂಲಕ, ಭಜನೆಗಳ ಮೂಲಕ, ಸ್ಪರ್ಧೆಗಳ ಮೂಲಕ, ಸಮಾಜ ಸೇವಾ ಕಾರ್ಯಕ್ರಮಗಳ ಮೂಲಕ ಇಂಥ ಕಾರ್ಯಕ್ರಮಗಳನ್ನು ಆಚರಿಸುವ ಸಂಪ್ರದಾಯ ಬೆಳೆದು ಬಂದಿದೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ವಾಲ್ಮೀಕಿ, ಬುದ್ಧ, ಮಹಾವೀರ, ಬಸವ, ಕನಕ, ವಿವೇಕಾನಂದ, ಅಂಬೇಡ್ಕರ್, ಗಾಂಧಿ ಮೊದಲಾದ ಮಹಾಪುರುಷರ ಜಯಂತಿಯನ್ನು ಸಂಭ್ರಮದಿಂದ ಆಚರಿಸಿಕೊಂಡು ಬರುತ್ತಿದ್ದೇವೆ.

ಕಾಲ ಬದಲಾಗಿದೆ. ಸಮಾಜ ಬದಲಾಗಿದೆ. ವ್ಯಕ್ತಿ ಬದಲಾಗಿದ್ದಾನೆ. ಆತ್ಮೀಯತೆ ಔಪಚಾರಿಕವಾಗುತ್ತಿದೆ. ಮಾನವೀಯ ಸಂಬಂಧಗಳು ವ್ಯಾವಹಾರಿಕವಾಗುತ್ತಿದೆ. ಸರಕು ಸಂಸ್ಕೃತಿಯ ಈ ಕಾಲದಲ್ಲಿ ಮನುಷ್ಯನೇ ವ್ಯಾಪಾರದ ವಸ್ತುವಾಗುತ್ತಿರುವ ಭೀಕರ ಸನ್ನಿವೇಶ ಈಗ ಕಾಣುತ್ತಿದ್ದೇವೆ. ಆಚರಣೆಗಳ ಲಾಭ–ನಷ್ಟವೇ ಮುಖ್ಯವಾಗುತ್ತಿರುವ ಈ ಕಾಲಘಟ್ಟದಲ್ಲಿ ಆಚರಣೆಗಳು ಅರ್ಥ ಕಳೆದುಕೊಳ್ಳುತ್ತಿವೆ. ಕಾಟಾಚಾರದ ಆಚರಣೆಗೆ ಸೀಮಿತವಾಗಿಬಿಟ್ಟಿದೆ. ಇದರಿಂದಾಗಿ ಮಹಾಪುರುಷರ ವ್ಯಕ್ತಿತ್ವ ಜನರ ಮನಸ್ಸಿನಿಂದ ಕಣ್ಮರೆಯಾಗುವ ದುರಂತ ಸನ್ನಿವೇಶ ನಿರ್ಮಾಣವಾಗಿದೆ.

ಹಾಗಾಗಿ ಮಹಾಪುರುಷರ ಜಯಂತಿ ಅರ್ಥಪೂರ್ಣವಾಗಬೇಕಾದರೆ ನಮ್ಮ ಧೋರಣೆ ಬದಲಾಗಬೇಕು. ಅವರ ಜೀವನ ಮತ್ತು ಆದರ್ಶ ನಮಗೆ ಮಾದರಿಯಾಗಬೇಕು. ಅವರು ಹೇಳಿದ ಮೌಲ್ಯಗಳು ನಮ್ಮ ಜೀವನದ ಭಾಗವಾಗಬೇಕು. ನಮ್ಮ ನಡೆ–ನುಡಿಯ ನಡುವಿರುವ ಅಂತರ ಹೋಗಿ ಶುದ್ಧವ್ಯಕ್ತಿತ್ವ ರೂಪುಗೊಂಡಾಗ ಮಾತ್ರ ಆಚರಣೆಗೆ ಅರ್ಥ ಬರುತ್ತದೆ. ತೋರಿಕೆಗಾಗಿ ಮಾಡುವ ಆಚರಣೆ ನಿಷ್ಪ್ರಯೋಜಕ ಎಂಬ ಶರಣರ ಮಾತು ಎಚ್ಚರದ ವಾಣಿಯಾಗಿ ನಮ್ಮ ಜತೆಗಿರಬೇಕು.

---

**ಪ್ರಬಂಧ ರಚನೆಗೆ ಗಮನಿಸಬಹುದಾದ ಕೆಲವು ವಿಷಯಗಳು:**

೧. ಮತದಾನದ ಹಕ್ಕನ್ನು ಚಲಾಯಿಸುವ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯ.
೨. ತ್ಯಾಜ್ಯ ವಸ್ತುಗಳ ಮರುಬಳಕೆಯ ಅಗತ್ಯ.
೩. ನಗರ ನೈರ್ಮಲ್ಯ ಕಾಪಾಡುವಲ್ಲಿ ನಾಗರಿಕರ ಪಾತ್ರ.
೪. ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸುವ ಮಾರ್ಗಗಳು.
೫. ಸ್ತ್ರೀ ಭ್ರೂಣಹತ್ಯೆಯಿಂದ ಎದುರಾಗುವ ಸಮಸ್ಯೆಗಳು.
೬. ಸಮಾನ ಶಿಕ್ಷಣದ ಅವಶ್ಯಕತೆ.
೭. ಕೃಷಿ ಸಂಸ್ಕೃತಿಯನ್ನು ಉಳಿಸಿ–ಬೆಳೆಸುವ ಅಗತ್ಯ.
೮. ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸುವಲ್ಲಿ ಯುವಜನರ ಪಾತ್ರ.
೯. ಮೂಢನಂಬಿಕೆಗಳು.
೧೦. ರಾಷ್ಟ್ರೀಯ ಸೇವಾ ಯೋಜನೆಯ ಮಹತ್ತ್ವ.
೧೧. ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಮಹತ್ತ್ವ.
೧೨. ಐತಿಹಾಸಿಕ ಸ್ಥಳಗಳ ಸಂರಕ್ಷಣೆ.
೧೩. ಜೈವಿಕ ಇಂಧನದ ಮಹತ್ತ್ವ.
೧೪. ಭಾರತದ ಬಾಹ್ಯಾಕಾಶ ಕ್ಷೇತ್ರದ ಸಾಧನೆ.
೧೫. ಕ್ರೀಡೆ ಮತ್ತು ನಮ್ಮ ಆರೋಗ್ಯ.
೧೬. ಪುಸ್ತಕಗಳ ಮಹತ್ತ್ವ.
೧೭. ವಿದೇಶಿ ವ್ಯಾಮೋಹ ಮತ್ತು ಪ್ರತಿಭಾ ಪಲಾಯನ.
೧೮. ಹೆಚ್ಚುತ್ತಿರುವ ವೃದ್ಧಾಶ್ರಮಗಳು.
೧೯. ರಕ್ತದಾನ ಮತ್ತು ನೇತ್ರದಾನಗಳ ಮಹತ್ತ್ವ.
೨೦. ನನ್ನ ಬಾಲ್ಯದ ಸ್ಮೃತಿಗಳು.
೨೧. ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ.
೨೨. ಮಣ್ಣು–ಅಂತರ್ಜಲ ಸಂಗೋಪನೆ.
೨೩. ಕೆರೆ ಮತ್ತು ನದಿಗಳ ನೈರ್ಮಲ್ಯೀಕರಣ.
೨೪. ಗುಡ್ಡಗಾಡು ಬಂಜರು ಬೇಸಾಯ.
೨೫. ಸಾಂಸ್ಕೃತಿಕ ಚಟುವಟಿಕೆಗಳ ಮಹತ್ತ್ವ.

**ಮೇಲ್ಕಂಡ ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಕ್ಕೆ ಪ್ರಬಂಧಗಳನ್ನು ರಚಿಸುವ ಅಭ್ಯಾಸ ಮಾಡಿರಿ.**

---

ಅಭ್ಯಾಸ ಪ್ರಬಂಧ ೧: ವಿಷಯ: ..........................................................................................................

ಅಭ್ಯಾಸ ಪ್ರಬಂಧ ೨: ವಿಷಯ: ..................................................................................................

# ೧೦. ಪತ್ರಲೇಖನ

ಪರೀಕ್ಷೆಯಲ್ಲಿ ೪ ಅಂಕಗಳಿಗೆ ಪತ್ರಲೇಖನಕ್ಕೆ ಸಂಬಂಧಿಸಿದ ಪ್ರಶ್ನೆ ಇರುತ್ತದೆ. ಒಂದು ವ್ಯಾವಹಾರಿಕ ಪತ್ರವನ್ನೂ, ಇನ್ನೊಂದು ವೈಯಕ್ತಿಕ ಪತ್ರವನ್ನೂ ನೀಡಿ – ಎರಡರಲ್ಲಿ ಯಾವುದಾದರೂ ಒಂದು ಪತ್ರ ರಚಿಸುವಂತೆ ಕೇಳಲಾಗುವುದು. ಸುಲಭವಾಗಿ ಅಂಕಗಳಿಸಲು ಸಾಧ್ಯವಾಗುವ ಪ್ರಶ್ನೆಯಿದು. ಆದರೆ ಪತ್ರಬರೆಯುವ ಹವ್ಯಾಸವೇ ದೂರವಾಗುವ ಕಾಲದಲ್ಲಿ ನಾವಿದ್ದೇವೆ. ಪತ್ರ ರಚನೆಗೆ ಸುದೀರ್ಘವಾದ ಇತಿಹಾಸವಿದೆ. ಇದೊಂದು ಅತಿ ಪ್ರಾಚೀನವಾದ ಲೇಖನಕಲೆ. 'ಮೇಘ ಸಂದೇಶ' ಎಂಬ ಕೃತಿಯಲ್ಲಿ ವಿರಹಿಯಾದ ಯಕ್ಷ ತನ್ನ ಮನದನ್ನೆಗೆ ಮೇಘಗಳ ಮೂಲಕ ಸಂದೇಶವನ್ನು ಕಳಿಸುತ್ತಾನೆ. 'ಅಭಿಜ್ಞಾನ ಶಾಕುಂತಲ'ದಲ್ಲಿ ಶಕುಂತಲೆ ತಾವರೆಯ ಎಲೆಗಳ ಮೇಲೆ ಪತ್ರ ಬರೆದು ತನ್ನ ಮನದ ಅಳಲನ್ನು ತಿಳಿಸುವ ಪ್ರಯತ್ನ ಮಾಡುತ್ತಾಳೆ. ನಳ–ದಮಯಂತಿಯರು ಸಂದೇಶವಾಹಕವಾಗಿ ಹಂಸವನ್ನು ಬಳಸಿದರೆ ('ಹಂಸ' ಎಂಬುದರ ತದ್ಭವ ರೂಪವೇ 'ಅಂಚೆ' ಎಂದಾಗಿದೆ), ನಂತರ ಪಾರಿವಾಳ, ಕುದುರೆ ಮುಂತಾದವು ಸಂದೇಶವಾಹಕಗಳಾದವು. ಬ್ರಿಟಿಷರ ಆಡಳಿತಾವಧಿಯಲ್ಲಿ ಅಂಚೆ ಇಲಾಖೆ ಆರಂಭಗೊಂಡು ಜನಸಾಮಾನ್ಯರೂ ಅಲ್ಪವೆಚ್ಚದಲ್ಲಿ ಪತ್ರ ವ್ಯವಹಾರ ನಡೆಸಲು ಸಾಧ್ಯವಾಯಿತು. ಇಂದು ಅಂಚೆಯೊಂದಿಗೆ ಖಾಸಗಿಯವರ ಕೊರಿಯರ್ ಸಂಸ್ಥೆಗಳೂ ಈ ಸೇವೆಯನ್ನು ಒದಗಿಸುತ್ತಿವೆ.

ದೂರವಾಣಿ, ಮೊಬೈಲ್ ಫೋನ್, ಪೇಜರ್, ಕಂಪ್ಯೂಟರ್‌ಗಳು ಬಂದು ಪತ್ರ ವ್ಯವಹಾರವನ್ನು ಬದಿಗೊತ್ತಿದವು. ಜಗತ್ತಿನ ಯಾವುದೇ ಮೂಲೆಯಲ್ಲಿರುವವರನ್ನು ಎಸ್‌ಎಂಎಸ್, ಇ–ಮೈಲ್, ವಾಟ್ಸಾಪ್‌ಗಳ ಮೂಲಕ ಕ್ಷಣಮಾತ್ರದಲ್ಲಿ ಸಂಪರ್ಕಿಸುವ ಸಾಧ್ಯತೆ ಈಗ ಹೆಚ್ಚಾಗಿದೆ. ಈ ಆಧುನಿಕ ಸೌಲಭ್ಯಗಳು ಪತ್ರ ಬರೆಯುವವರ ಸಂಖ್ಯೆಯನ್ನು ಕ್ಷೀಣಗೊಳಿಸಿವೆ. ಕೈ ಬರಹದ ಪತ್ರಗಳಿಗೆ ಅದರದ್ದೇ ಆದ ವೈಶಿಷ್ಟ್ಯವಿದೆ. ಆತ್ಮೀಯರ, ಹಿರಿಯರ, ಪ್ರಸಿದ್ಧ ವ್ಯಕ್ತಿಗಳ ಪತ್ರವನ್ನು ಮತ್ತೆಮತ್ತೆ ಓದಿದಾಗ ಸಿಗುವ ಆನಂದವೇ ಬೇರೆ. ಬರವಣಿಗೆಯಲ್ಲಿ ನಾವು ಹೆಚ್ಚು ಪ್ರಾಮಾಣಿಕವಾಗಿ ತೆರೆದುಕೊಳ್ಳಲು ಸಾಧ್ಯವಾಗುವಂತೆ, ಇತರ ಮಾಧ್ಯಮಗಳಿಂದಾಗದು. ಆದ್ದರಿಂದ ಪತ್ರ ಸಂಸ್ಕೃತಿಯನ್ನು ಉಳಿಸಿ–ಬೆಳೆಸುವುದು ಅಗತ್ಯ.

ವ್ಯಾವಹಾರಿಕ ಪತ್ರವಾಗಲಿ, ವೈಯಕ್ತಿಕ ಪತ್ರವಾಗಲಿ ಪತ್ರದ ಪ್ರಾರಂಭ, ಸಂಬೋಧನಾ ವಿಷಯ ವಿವರಣೆ, ಅಂತ್ಯ – ಈ ಅಂಶಗಳಲ್ಲಿನ ವ್ಯತ್ಯಾಸವನ್ನು ಅರಿತುಕೊಳ್ಳಬೇಕು.

೧. **ಪತ್ರದ ಪ್ರಾರಂಭ** : ಪತ್ರದ ಪ್ರಾರಂಭದಲ್ಲಿ ಬರೆಯುತ್ತಿರುವ ದಿನಾಂಕ ಮತ್ತು ವಿಳಾಸಗಳನ್ನು ಬರೆಯಬೇಕು. ದಿನಾಂಕವನ್ನು ಬಲಭಾಗದ ಮೇಲ್ತುದಿಯಲ್ಲಿ ಬರೆಯುವ ಕ್ರಮವಿದೆಯಾದರೂ ಈಗೀಗ ವ್ಯಾವಹಾರಿಕ ಪತ್ರಗಳಲ್ಲಿ ದಿನಾಂಕ ಮತ್ತು ವಿಳಾಸಗಳನ್ನು ಎಡಭಾಗದಲ್ಲಿಯೇ ಬರೆಯುವ ಕ್ರಮ ರೂಢಿಗೊಳ್ಳುತ್ತಿದೆ. ವಿಳಾಸಗಳಲ್ಲಿ ಯಾರಿಗೆ? ಯಾರಿಂದ? ಎಂಬವುಗಳನ್ನು ಬರೆಯುವಾಗ ಗೆ, ಇಂದ ಮುಂತಾದವನ್ನು ಬಳಸಲಾಗುತ್ತಿದೆ. ವಿಭಕ್ತಿ ಪ್ರತ್ಯಯಗಳನ್ನು ಕಲಿಯುವಾಗ ನಾವು ವಿಭಕ್ತಿ ಪ್ರತ್ಯಯಗಳು ಸ್ವತಂತ್ರವಾಗಿ ಅರ್ಥವುಳ್ಳವಲ್ಲ ಎಂಬುದನ್ನು ಗಮನಿಸಿರುತ್ತೇವೆ. ಹಾಗಿದ್ದಲ್ಲಿ 'ಗೆ' ಎಂಬ ಚತುರ್ಥೀ ವಿಭಕ್ತಿ ಪ್ರತ್ಯಯವನ್ನೂ 'ಇಂದ' ಎಂಬ ತೃತೀಯಾ ವಿಭಕ್ತಿ ಪ್ರತ್ಯಯವನ್ನೂ ಇಲ್ಲಿ ಬಳಸುವುದೇಕೆ? ಈ ಗೊಂದಲವನ್ನು ನಿವಾರಿಸಿಕೊಳ್ಳಲು 'ಗೆ' ಎಂಬುದರ ಬದಲಿಗೆ 'ಇವರಿಗೆ' ಎಂಬುದನ್ನು ಹೊರವಿಳಾಸಕ್ಕೂ, 'ಇಂದ' ಎಂಬುದರ ಬದಲಿಗೆ 'ಇವರಿಂದ' ಎಂಬುದನ್ನು ಒಳ ವಿಳಾಸಕ್ಕೂ ಬಳಸಿ ಬರೆಯುವುದು ಅರ್ಥಪೂರ್ಣ. ಒಳ–ಸ್ವ ವಿಳಾಸ ಬರೆಯುವಾಗ ವೈಯಕ್ತಿಕ ಪತ್ರದಲ್ಲಿ ದಿನಾಂಕದ ಕೆಳಗೂ, ಹೊರ ವಿಳಾಸವನ್ನು ಪತ್ರದ ಕೊನೆಗೆ ಎಡಭಾಗದಲ್ಲೂ

ಬರೆಯುವ ಕ್ರಮವಿದೆ. ಹೆಸರು, ಮನೆಸಂಖ್ಯೆ, ಬೀದಿ, ತಿರುವು, ಬಡಾವಣೆ, ಊರು, ಜಿಲ್ಲೆ, ಪಿನ್‌ಕೋಡ್ ಇತ್ಯಾದಿಗಳನ್ನು ಒಳಗೊಂಡ ವಿಳಾಸಗಳು ಪತ್ರ ರವಾನಿಸುವವರಿಗೆ ವೇದ್ಯವಾಗುವಂತಿರುವುದು ಅವಶ್ಯಕ.

೨. **ಸಂಬೋಧನೆ :** ವೈಯಕ್ತಿಕ ಪತ್ರದಲ್ಲಾದರೆ ವ್ಯಾವಹಾರಿಕ ಪತ್ರದಲ್ಲಿ ಬರೆಯುವಂತೆ 'ಮಾನ್ಯರೆ', 'ವಿಷಯ' ಮುಂತಾದವುಗಳನ್ನು ಬರೆಯುವುದು ಅನಗತ್ಯ. ವೈಯಕ್ತಿಕ ಪತ್ರದಲ್ಲಿ ಹಿರಿಯರಿಗೆ, ತಂದೆ–ತಾಯಿಯರಿಗೆ, ಸಮ ವಯಸ್ಕರಿಗೆ, ಕಿರಿಯರಿಗೆ ಬರೆಯುವಾಗ ಬಳಸುವ ಸಂಬೋಧನೆಯ ಬಗ್ಗೆ ಎಚ್ಚರವಹಿಸಬೇಕು. ವ್ಯಾವಹಾರಿಕ ಪತ್ರದಲ್ಲಿಯೂ ವ್ಯವಹಾರಕ್ಕೆ ಭಂಗವೊದಗದ ಗೌರವಪೂರ್ವಕ ಸಂಬೋಧನೆ ಇರಬೇಕು. ವ್ಯಾವಹಾರಿಕ ಪತ್ರದಲ್ಲಿ ವಿಷಯವನ್ನು ಆದಷ್ಟು ಸರಳ–ಸಂಕ್ಷೇಪವಾಗಿ ಕಾಣಿಸುವ ಪ್ರಯತ್ನ ಮಾಡಬೇಕು.

೩. **ವಿಷಯ ವಿವರಣೆ :** ಇದು ಪತ್ರದ ಅತಿ ಮುಖ್ಯಭಾಗ, ಪತ್ರದ ಒಡಲೆಂದೂ ಇದನ್ನು ಕರೆಯುವರು. ಪತ್ರ ಬರೆಯುತ್ತಿರುವ ಉದ್ದೇಶ, ಏನಾಗಿದೆ, ಏನು ಬೇಕು ಇತ್ಯಾದಿ ವಿವರಗಳನ್ನು ಸ್ಪಷ್ಟವಾಗಿ ಅರ್ಥವಾಗುವಂತೆ ಬರೆಯಬೇಕು. ಪತ್ರವನ್ನು ಓದುವವರಿಗೆ ಬರೆದವರ ಮನದ ಅಭಿಪ್ರಾಯ ಸರಿಯಾಗಿ ತಿಳಿಯುವಂತಿರಬೇಕು. ವಾಕ್ಯಗಳಲ್ಲಿ ಗೊಂದಲಕ್ಕೆ ಅವಕಾಶವಿರಬಾರದು.

೪. **ಪತ್ರದ ಅಂತ್ಯ :** ವಿಷಯ ವಿವರಣೆಯಾದ ಮೇಲೆ ಪತ್ರದ ಮುಕ್ತಾಯದಲ್ಲೂ ಸಂಬೋಧನೆಯಂತೆಯೇ ಗೌರವಪೂರ್ವಕವಾದ ಒಕ್ಕಣೆಗಳಿರಬೇಕು. ಪತ್ರದ ಕೊನೆಯಲ್ಲಿ ಸಹಿ ಇರಬೇಕು.

ಅಂಕಗಳನ್ನು ದಿನಾಂಕ, ವಿಳಾಸ, ಪತ್ರದ ಒಡಲು, ಪತ್ರಾಂತ್ಯ ಎಲ್ಲ ಭಾಗಗಳಿಗೂ ಹಂಚಲಾಗಿರುತ್ತದೆ. ವಿಳಾಸದಲ್ಲಿ ಹೆಸರನ್ನು ಬರೆಯಬೇಕೋ ಬೇಡವೋ ಎಂಬ ಗೊಂದಲಗಳಿರುತ್ತವೆ. ನಿಜವಾದ ಹೆಸರನ್ನು ಬರೆಯಬಾರದೆಂದಾದಲ್ಲಿ ಅದನ್ನು ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಿರುತ್ತಾರೆ. ಈ ಬಗ್ಗೆ ಅನಗತ್ಯ ಗೊಂದಲ ಕೂಡದು. x.y.z. ಅಥವಾ ಅ.ಬ.ಕ. ಎಂಬ ಅಂಕಿತದ ಬದಲಿಗೆ ಯಾವುದೋ ಒಂದು ಹೆಸರನ್ನು ಬರೆಯುವುದು ಸೂಕ್ತ.

---

**ಮಾದರಿಗಾಗಿ ಒಂದೆರಡು ಪತ್ರಗಳನ್ನು ಈ ಮುಂದೆ ನೀಡಿದೆ. ಇದು ಮಾದರಿ ಪತ್ರ ಮಾತ್ರ. ಅಧ್ಯಾಪಕರ ನೆರವಿನಿಂದ ಈ ಮೇಲಿನ ಎಲ್ಲ ಅಂಶಗಳನ್ನೂ ಒಳಗೊಂಡ ಪತ್ರ ರಚನೆಯನ್ನು ಅಭ್ಯಾಸ ಮಾಡಿರಿ.**

## *ವ್ಯಾವಹಾರಿಕ ಪತ್ರದ ಮಾದರಿ – ೧*

**೧. ವಿದ್ಯುಚ್ಛಕ್ತಿಯ ಸಮರ್ಪಕ ಸರಬರಾಜನ್ನು ಕೋರಿ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಬರೆದ ಪತ್ರ.**

ದಿನಾಂಕ: ನವೆಂಬರ್ ೧೯, ೨೦೧೪.

*ಇವರಿಂದ:*
ಶ್ರೀ ಅಮನ್ ಶ್ರೀವತ್ಸ ಎಂ.ಎಸ್.
ತಂದೆ: ಎಂ.ಡಿ. ಸುದರ್ಶನ್
ಮಿಂಚೇರಿ, ಆಣೂರು–ಅಂಚೆ
ತಾ॥ ಆಲ್ದೂರು, ಜಿ॥ ಚಿಕ್ಕಮಗಳೂರು.

*ಇವರಿಗೆ:*
ಕಾರ್ಯನಿರ್ವಾಹಕ ಅಭಿಯಂತರರು,
ವಿದ್ಯುತ್ ಸರಬರಾಜು ನಿಗಮ ನಿಯಮಿತ,
ಚಿಕ್ಕಮಗಳೂರು ೫೭೭ ೧೦೧.

ಮಾನ್ಯರೆ,

ವಿಷಯ: ಅಸಮರ್ಪಕ ವಿದ್ಯುತ್ ವ್ಯವಸ್ಥೆಯನ್ನು ಕುರಿತು.

ಈ ಮೇಲ್ಕಂಡ ವಿಷಯವನ್ನು ಕುರಿತು, ಕೆಲವು ದಿನಗಳಿಂದ ಮೇಲ್ಕಾಣಿಸಿದ ವಿಳಾಸದ ನಮ್ಮ ಊರಿನಲ್ಲಿ ವಿದ್ಯುತ್ ಪೂರೈಕೆಯು ಸಮಂಜಸವಾಗಿಲ್ಲ. ಪದೇ ಪದೇ ವಿದ್ಯುತ್ ಕಡಿತ, ವೋಲ್ಟೇಜಿನ ಏರಿಳಿತಗಳಿಂದಾಗಿ ಗೃಹಕೃತ್ಯಗಳಿಗೆ, ವ್ಯಾಸಂಗಕ್ಕೆ ತೀವ್ರ ಅಡಚಣೆಯುಂಟಾಗಿದೆ. ಈ ಅವ್ಯವಸ್ಥೆಯನ್ನು ಪರಿಹರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,
ಸಹಿ/–
(ಅಮನ್ ಶ್ರೀವತ್ಸ ಎಂ.ಎಸ್.)

---

## *ವ್ಯಾವಹಾರಿಕ ಪತ್ರದ ಮಾದರಿ – ೨*

**೨. ಪುಸ್ತಕಗಳನ್ನು ಅಂಚೆಯ ಮೂಲಕ ಕಳುಹಿಸುವಂತೆ ಪುಸ್ತಕಾಲಯಕ್ಕೆ ಬರೆದ ಪತ್ರ.**

ದಿನಾಂಕ: ಏಪ್ರಿಲ್ ೨೫, ೨೦೧೪.

*ಇವರಿಂದ:*
ಎಸ್.ವಿ. ಸುಧಾಂಶು
ಮ.ನಂ. ೨೮, 'ಬೆಳದಿಂಗಳು'
ಥಣಿಸಂದ್ರ, ಶಿವರಾಮಕಾರಂತ ನಗರ–ಅಂಚೆ,
ಬೆಂಗಳೂರು – ೫೬೦ ೦೭೭.

*ಇವರಿಗೆ:*
ವ್ಯವಸ್ಥಾಪಕರು
ಅಂಕಿತ ಪ್ರಕಾಶನ ಮತ್ತು ಪುಸ್ತಕ ಮಳಿಗೆ,
ಗಾಂಧೀಬಜಾರ್, ಬಸವನಗುಡಿ,
ಬೆಂಗಳೂರು – ೫೬೦ ೦೦೪.

ಮಾನ್ಯರೆ,

ವಿಷಯ: ಅಂಚೆಯ ಮೂಲಕ ಪುಸ್ತಕಗಳನ್ನು ಪಡೆಯುವ ಬಗ್ಗೆ.

ತಮ್ಮಲ್ಲಿ ಈ ಕೆಳಕಂಡ ಪುಸ್ತಕಗಳಿದ್ದಲ್ಲಿ ಅವುಗಳ ಒಂದೊಂದು ಪ್ರತಿಯನ್ನು ಮೇಲಿರುವ ನನ್ನ ವಿಳಾಸಕ್ಕೆ ವಿ.ಪಿ.ಪಿ. ಮೂಲಕ ಕಳುಹಿಸಿಕೊಟ್ಟಲ್ಲಿ, ನಾನು ಅವುಗಳ ಹಣವನ್ನು ಸಲ್ಲಿಸಿ ಪಡೆದುಕೊಳ್ಳುತ್ತೇನೆ.

| | *ಪುಸ್ತಕಗಳು* | *ಲೇಖಕರು* |
|---|---|---|
| ೧. | ಕರ್ವಾಲೋ (ಕಾದಂಬರಿ) | ಕೆ.ಪಿ. ಪೂರ್ಣಚಂದ್ರ ತೇಜಸ್ವಿ |
| ೨. | ವಚನಭಾರತ | ಎ.ಆರ್. ಕೃಷ್ಣಶಾಸ್ತ್ರಿ |
| ೩. | ಇಗೋ ಕನ್ನಡ (ನಿಘಂಟು) | ಜಿ. ವೆಂಕಟಸುಬ್ಬಯ್ಯ |
| ೪. | ಕನ್ನಡ ಮಧ್ಯಮ ವ್ಯಾಕರಣ | ತೀ.ನಂ. ಶ್ರೀಕಂಠಯ್ಯ |
| ೫. | ಶಕುಂತಲೋಪಾಖ್ಯಾನ (ಕವಿತೆಗಳು) | ಎಂ.ಆರ್. ಕಮಲ |
| ೬. | ಭಾವಸಿರಿ (ಕವಿತೆಗಳು) | ಸರ್ವೇಶ್ ಬಂಟಹಳ್ಳಿ |
| ೭. | ಆಕಾಶಮಲ್ಲಿಗೆಯ ಘಮ (ಕಥೆಗಳು) | ಎಲ್.ಜಿ. ಮೀರಾ |

ತಮ್ಮ ಉತ್ತರದ ನಿರೀಕ್ಷೆಯಲ್ಲಿರುವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/–
(ಎಸ್.ವಿ. ಸುಧಾಂಶು)

---

## *ವೈಯಕ್ತಿಕ ಪತ್ರದ ಮಾದರಿ – ೧*

**೧. ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಗೆಳೆಯ/ಗೆಳತಿಯನ್ನು ಆಹ್ವಾನಿಸಿ ಬರೆದ ಪತ್ರ.**

ದಿನಾಂಕ: ಜನವರಿ ೧, ೨೦೧೪.

ಸುವರ್ಣ ಕಂಬಿ
ದ್ವಿತೀಯ ಪಿಯುಸಿ
ಗ.ಸ.ಜ.ಗಿ. ಪ.ಪೂ. ಕಾಲೇಜು
ಹುಲಕೋಟಿ – ೫೮೨ ೨೦೫
ತಾ–ಜಿ: ಗದಗ.

ಪ್ರೀತಿಯ ಗೆಳತಿ ಸವಿತಾಗೆ,

ನಿನ್ನ ಗೆಳತಿಯಾದ ಸುವರ್ಣ ಮಾಡುವ ವಂದನೆಗಳು. ನಾನು ಇಲ್ಲಿ ನನ್ನ ಅಭ್ಯಾಸದೊಂದಿಗೆ ಆರಾಮದಿಂದ ಇರುವೆನು. ನೀನೂ ಕೂಡಾ ಆರಾಮ ಇರುವಿ ಎಂದು ಭಾವಿಸಿರುವೆನು ಮತ್ತು ನಿನಗೂ ಗೆಳತಿಯರಿಗೂ ಹೊಸ ವರ್ಷದ ಶುಭಾಶಯಗಳು.

ಈಗ ಪತ್ರ ಬರೆಯಲು ಕಾರಣವೇನೆಂದರೆ ನಮ್ಮ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನವು ಬರುವ ದಿನಾಂಕ ೧೨.೧.೨೦೧೪ರಂದು ನಡೆಯಲಿದೆ. ಅಂದು ಬೆಳಗ್ಗೆ ೧೦ ಗಂಟೆಗೆ ದ್ವಿತೀಯ ಪಿಯುಸಿಯ ವಿದ್ಯಾರ್ಥಿಗಳಾದ ನಮಗೆ ಬೀಳ್ಕೊಡುಗೆ ಸಮಾರಂಭವಿದೆ. ನಂತರ ಮಧ್ಯಾಹ್ನ ೨.೩೦ಕ್ಕೆ ವಾರ್ಷಿಕ ಸ್ನೇಹ ಸಮ್ಮೇಳನ ನಡೆಯಲಿದೆ. ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನ ವಿತರಣೆ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಖ್ಯಾತ ಕವಿ ಶ್ರೀ ಚೆನ್ನವೀರ ಕಣವಿಯವರು ಆಗಮಿಸಲಿದ್ದಾರೆ. ನಂತರ ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾನೂ ಭಾಗವಹಿಸಿರುವೆ. ನಮ್ಮ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ನೀನು ತಪ್ಪದೇ ಬರಬೇಕೆಂದು ವಿನಂತಿಸುವೆನು.

ವಂದನೆಗಳೊಂದಿಗೆ,

ಇಂತಿ ನಿನ್ನ ಗೆಳತಿ
ಸುವರ್ಣ

*ಇವರಿಗೆ:*
ಸವಿತಾ ಬಂಗಾರಿ
ತಂದೆ: ಶ್ರೀ ಚೆನ್ನಮಲ್ಲಿಕಾರ್ಜುನ
೩ನೇ ತಿರುವು,
ಬಸವನಗರ, ಬಿಜಾಪುರ.

---

## ವ್ಯಾವಹಾರಿಕ ಪತ್ರಕ್ಕೆ ಸಾಮಾನ್ಯವಾಗಿ ಕೇಳುವ ವಿಷಯಗಳು:

೧. ವರ್ಗಾವಣೆ ಪತ್ರ, ಅಂಕಪಟ್ಟಿ ಕೋರಿ ಪ್ರಾಚಾರ್ಯರಿಗೆ ಬರೆವ ಪತ್ರ.

೨. ರಜೆ ಕೋರಿ ಪ್ರಾಚಾರ್ಯರಿಗೆ/ತರಗತಿ ಉಪನ್ಯಾಸಕರಿಗೆ ಬರೆವ ಪತ್ರ.

೩. ಬ್ಯಾಂಕಿನಲ್ಲಿ ಖಾತೆ ತೆರೆಯಲು ವ್ಯವಸ್ಥಾಪಕರಿಗೆ ಬರೆವ ಪತ್ರ.

೪. ಶೈಕ್ಷಣಿಕ ಸಾಲ ಸೌಲಭ್ಯ ಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಬರೆವ ಪತ್ರ.

೫. ಗ್ರಂಥಾಲಯವನ್ನು ಆರಂಭಿಸಲು ಕೋರಿ ಮುಖ್ಯ ಗ್ರಂಥಪಾಲಕರಿಗೆ ಬರೆವ ಪತ್ರ.

೬. ರಸ್ತೆ ದುರಸ್ಥಿ, ಸೂಕ್ತ ಬಸ್ ಸಂಪರ್ಕ ವ್ಯವಸ್ಥೆ, ಸಮರ್ಪಕ ವಿದ್ಯುತ್ ಪೂರೈಕೆ, ಇತ್ಯಾದಿಗಳಿಗಾಗಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಬರೆಯುವ ಪತ್ರ.

೭. ಪುಸ್ತಕಗಳನ್ನು ಅಂಚೆ ಮೂಲಕ ತರಿಸಿಕೊಳ್ಳಲು ಪುಸ್ತಕಾಲಯಗಳಿಗೆ ಬರೆವ ಪತ್ರ.

೮. ಜಿಲ್ಲಾಧಿಕಾರಿಗೆ/ಪತ್ರಿಕಾ ಸಂಪಾದಕರುಗಳಿಗೆ ಬರೆವ ಪತ್ರ.

೯. ಸೂಕ್ತ ಹುದ್ದೆಗಾಗಿ ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸುವ ಅರ್ಜಿ.

೧೦. ಬಸ್‌ಪಾಸ್/ಗುರುತಿನ ಪತ್ರ, ವಿದ್ಯಾರ್ಥಿವೇತನಗಳಿಗಾಗಿ ಬರೆವ ಪತ್ರ.

**ವೈಯಕ್ತಿಕ ಪತ್ರಕ್ಕೆ ಸಾಮಾನ್ಯವಾಗಿ ಕೇಳಲಾಗುವ ವಿಷಯಗಳು:**

೧. ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ಕೋರಿ ತಂದೆ/ತಾಯಿ/ಪೋಷಕರಿಗೆ ಬರೆವ ಪತ್ರ.

೨. ಪರೀಕ್ಷಾ ಸಿದ್ಧತೆಯನ್ನು ತಿಳಿಸಿ ಪೋಷಕರಿಗೆ/ಗೆಳೆಯರಿಗೆ ಬರೆವ ಪತ್ರ.

೩. ಮೆಚ್ಚಿದ ಪುಸ್ತಕ/ವ್ಯಕ್ತಿಗಳನ್ನು ಕುರಿತು ಸ್ನೇಹಿತರಿಗೆ ಬರೆವ ಪತ್ರ.

೪. ಕಾಲೇಜಿನ ವಾರ್ಷಿಕೋತ್ಸವಾ/ಕ್ರೀಡಾ ಚಟುವಟಿಕೆಗಳನ್ನು ವಿವರಿಸಿ ಸ್ನೇಹಿತರಿಗೆ/ಸಂಬಂಧಿಕರಿಗೆ ಬರೆವ ಪತ್ರ.

೫. ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ/ನಾಡಹಬ್ಬಗಳ ವಿವರ ನೀಡುವ ಪತ್ರ.

೬. ತಾವು ಮಾಡಿದ ಪ್ರವಾಸಾನುಭವವನ್ನು ಗೆಳೆಯರಿಗೆ ವಿವರಿಸುವ ಪತ್ರ.

೭. ನಿಮ್ಮೂರಿನಲ್ಲಿ ನಡೆಯುವ ಜಾತ್ರೆ, ಸಮ್ಮೇಳನಗಳಿಗೆ ಇಷ್ಟಮಿತ್ರರನ್ನು ಆಹ್ವಾನಿಸಿ ಬರೆವ ಪತ್ರ.

[**ಸೂಚನೆ:** ಈ ಮೇಲೆ ಸೂಚಿಸಿರುವ ವಿಷಯಗಳೊಂದಿಗೆ ಇನ್ನಾವುದೇ ಪ್ರಚಲಿತ/ಸಾಂದರ್ಭಿಕ ಸಂಗತಿಗಳನ್ನಾಧರಿಸಿದ ಪತ್ರಲೇಖನವನ್ನೂ ಸೂಚಿಸಬಹುದು.]

---

**ಪತ್ರ ಬರೆಯುವಾಗ ಯಾರಿಗೆ ಯಾವ ಸಂಬೋಧನೆ ಬಳಸಬಹುದೆಂಬುದನ್ನು ಅಧ್ಯಾಪಕರನ್ನು ಕೇಳಿ ತಿಳಿಯಿರಿ ಮತ್ತು ಇಲ್ಲಿ ಬರೆಯಿರಿ:**

೧. ತಂದೆಗೆ : ........................................

೨. ತಾಯಿಗೆ : ........................................

೩. ಹಿರಿಯರಿಗೆ : ........................................

೪. ಕಿರಿಯರಿಗೆ : ........................................

೫. ಗೆಳೆಯ/ಗೆಳತಿಯರಿಗೆ : ........................................

೬. ಅಣ್ಣನಿಗೆ : ........................................

೭. ಅಕ್ಕನಿಗೆ : ........................................

೮. ಅಧಿಕಾರಿಗಳಿಗೆ : ........................................

೯. ಇತರೆ ವ್ಯಾವಹಾರಿಕ ಪತ್ರಗಳಲ್ಲಿ : ........................................

# ೧೧. ಗಾದೆಮಾತಿನ ವಿಸ್ತರಣೆ

ಜನಪದ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಂತೆ ಗಾದೆಯೂ ಒಂದು ವಿಶಿಷ್ಟ ಕಲಾ ವರ್ಗಕ್ಕೆ ಸೇರಿದ ಪ್ರಕಾರ. ಉಳಿದೆಲ್ಲ ಜನಪದ ಪ್ರಕಾರಗಳಿಗಿಂತಲೂ ಹೆಚ್ಚು ಜನಪ್ರಿಯತೆಯಲ್ಲೂ ಜನಬಳಕೆಯಲ್ಲೂ ಸೇರಿಹೋಗಿರುವಂತಹದ್ದು. ಗಾದೆಗಳು ಜನರ ಅನುಭವದ ಸಾಂದ್ರತೆಗೆ, ವಸ್ತು ವೈವಿಧ್ಯತೆಗೆ, ಸಂಸ್ಕೃತಿ ಸಂಪನ್ನತೆಗೆ, ವಿಚಾರ ವೈಭವಕ್ಕೆ ಸಾಕ್ಷಿಯಾಗಿವೆ. ಗಾದೆಗಳು ನಮ್ಮ ಬದುಕನ್ನು ಆವರಿಸಿ ಪ್ರಭಾವಿಸಿರುವುದು ಮಾತ್ರವಲ್ಲದೆ ನಮ್ಮ ಭಾಷೆಗೆ ಶಕ್ತಿಯನ್ನೂ ಸಂಪನ್ನತೆಯನ್ನೂ ತಂದುಕೊಟ್ಟಿವೆ. ಗಾದೆಗಳಿಲ್ಲದ ನಮ್ಮ ಬದುಕನ್ನಾಗಲೀ ಭಾಷೆಯನ್ನಾಗಲೀ ಕಲ್ಪಿಸಿಕೊಳ್ಳುವುದೇ ಕಷ್ಟಸಾಧ್ಯ. ಊಟಕ್ಕೆ ಉಪ್ಪಿನಕಾಯಿ ವ್ಯಂಜಕವಾದರೆ, ಮಾತಿಗೆ ಗಾದೆ ವ್ಯಂಜಕವಾಗುತ್ತದೆ. ಕೆಲವರು ಮಾತನಾಡುವಾಗ ಪುಂಖಾನುಪುಂಖವಾಗಿ ಗಾದೆಗಳ ಬಾಣಬಿಡುತ್ತಾ ತಮ್ಮ ಮಾತಿನ ಸೊಗಸನ್ನು ಹೆಚ್ಚಿಸಿದರೆ, ಗಾದೆಗಳನ್ನು ಸಮಯಕ್ಕೆ ಸರಿಯಾಗಿ ಬಳಸುವ ಶಕ್ತಿಯಿಲ್ಲದವರು 'ಅದೇನೋ ಗಾದೆ ಹೇಳ್ತಾರಲ್ಲ ಹಂಗಾಯ್ತು' ಎನ್ನುವುದರ ಮೂಲಕ ಗಾದೆಯಿಲ್ಲದೆ ಸಮರ್ಥವಾಗಿ ಹೇಳಬೇಕಾದ್ದನ್ನು ಹೇಳಲು ಸಾಧ್ಯವಿಲ್ಲ ಎಂಬುದನ್ನೇ ದೃಢಪಡಿಸುತ್ತಾರೆ. ಕಿರಿದರಲ್ಲಿ ಹಿರಿದಾದ ಅರ್ಥ ತುಂಬಿದ ಗಾದೆಗಳು ಸರ್ವಾದರಣೀಯವಾಗಿ ಕಾಣಿಸಿಕೊಳ್ಳುತ್ತವೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಗಾದೆಮಾತನ್ನು ಗಾದೆಗಳಿಗೇ ಅನ್ವಯಿಸಬಹುದು. ಗಾದೆಗಳು ನಮ್ಮ ಭಾಷೆಯ ಅವಿಭಾಜ್ಯ ಶಕ್ತಿಯಾಗಿರುವುದರಿಂದಲೇ ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯವನ್ನು ಪರೀಕ್ಷಿಸಲು ರಚನಾ ವಿಭಾಗದಲ್ಲಿ ಗಾದೆಯನ್ನು ವಿಸ್ತರಿಸಿ ಬರೆಯುವ ಪ್ರಶ್ನೆಯನ್ನು ಅಳವಡಿಸಲಾಗಿರುತ್ತದೆ. ಇದೊಂದು ಸದಾಶಯವುಳ್ಳ ಪರೀಕ್ಷೆ.

ಪರೀಕ್ಷೆಯಲ್ಲಿ ನಾಲ್ಕು ಅಂಕಗಳ ಪ್ರಶ್ನೆಗೆ ಎರಡು ಗಾದೆಗಳನ್ನು ಕೊಟ್ಟು ಅವುಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯುವಂತೆ ಕೇಳಲಾಗುವುದು. ಮೊದಲಿಗೆ ನೀವು ಆಯ್ದುಕೊಂಡ ಗಾದೆಯ ಅರ್ಥವನ್ನು ಗ್ರಹಿಸಬೇಕು. ಸಾಮಾನ್ಯವಾಗಿ ಗಾದೆಗಳು ಮಿತವಾದ ಶಬ್ದಗಳಲ್ಲಿ ಅಗಾಧ ಅರ್ಥವನ್ನು ಅಭಿವ್ಯಕ್ತಿಸಿರುತ್ತವೆ. ಸಂಕ್ಷಿಪ್ತವಾಗಿದ್ದರೂ ವಿವೇಕಪೂರ್ಣವಾದ, ತೀಕ್ಷ್ಣವಾದ ವಿಚಾರವನ್ನು ಒಳಗೊಂಡಿರುತ್ತವೆ. ಗಾದೆಯ ಅರ್ಥ ಹೊಳೆಯದಿದ್ದರೆ ಅವುಗಳನ್ನು ವಿಸ್ತರಿಸುವುದು ಅಸಾಧ್ಯ. ಆದ್ದರಿಂದ ಗಾದೆಯನ್ನು ಅರ್ಥಮಾಡಿಕೊಳ್ಳುವುದು ಮೊದಲ ಹಂತ. ಆನಂತರ ಸಾಂದರ್ಭಿಕ ಘಟನೆಗಳನ್ನೋ, ಕಥೆಯನ್ನೋ, ಸ್ವಾನುಭವದ ಸಂಗತಿಗಳನ್ನೋ ಹದವಾಗಿ ಬೆರೆಸಿ ಗಾದೆಯನ್ನು ವಿಸ್ತರಿಸುತ್ತಾ ಹೋಗಬಹುದು. ಉದಾಹರಣೆಗೆ : "ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ?" ಎಂಬ ಜನಪ್ರಿಯವಾದ ಗಾದೆಯನ್ನೇ ಗಮನಿಸಿ. "ಚಿಕ್ಕಂದಿನಲ್ಲಿ ಒಳ್ಳೆಯ ಗುಣಗಳನ್ನು ಕಲಿಯದವರು, ದೊಡ್ಡವರಾದ ಮೇಲೂ ಕಲಿಯರು" ಎಂಬ ಅರ್ಥವನ್ನು ಹೇಳುತ್ತಿದೆ. ಈ ಗಾದೆಯನ್ನು ಎರಡು ವಿಭಾಗಗಳಲ್ಲಿ ವಿಸ್ತರಿಸಲು ಅವಕಾಶವಿದೆ:

೧. ಗಿಡ–ಮರಕ್ಕೆ ಸಂಬಂಧಿಸಿದಂತೆ

೨. ವ್ಯಕ್ತಿಗೆ ಸಂಬಂಧಿಸಿದಂತೆ.

೧. ಗಿಡ ಚಿಕ್ಕದಾಗಿರುವಾಗಲೇ ಮರವಾದಾಗ ಅದು ಹೇಗೆ ಬೆಳೆಯಬೇಕೆಂಬುದನ್ನು ಯೋಚಿಸಿ ಬೇಕಾದ ಕಡೆ ಭಾಗಿಸಿ ಬೆಳೆಸಬೇಕು. ಬೇಕಾದ ಹಾಗೆ ಬೆಳೆಯಲು ಬಿಟ್ಟು ಅದು ದೊಡ್ಡ ಮರವಾದ ಮೇಲೆ, ಅದರ ಬೇರಿನಿಂದ ಮನೆಯ ಅಡಿಪಾಯ ಬಿರುಕು ಬಿಡುತ್ತಿದೆಯೆಂದೋ ಅದರ ರೆಂಬೆಕೊಂಬೆಗಳಿಂದ ಗಾಳಿ–ಬೆಳಕಿಗೆ ಅಡಚಣೆಯೆಂದೋ, ಇನ್ನಾವುದೇ ಬಗೆಯ ಅಪಾಯವಿದೆಯೆಂದೋ ಬಾಗಿಸಲು ಹೊರಟರೆ ಬಾಗುವುದಿಲ್ಲ. ಬಲಪ್ರಯೋಗ ಮಾಡಿದರೆ ಮುರಿದು ಬೀಳಬಹುದಷ್ಟೇ. ಆದ್ದರಿಂದ ಗಿಡವಾಗಿರುವಾಗಲೇ ಬಾಗಿಸಬೇಕು. ಗಿಡದಲ್ಲೇ ಬಾಗದಿರುವುದು ಮರವಾದಾಗ ಬಾಗಲಾರದು.

೨. ಮಗು ಚಿಕ್ಕದಿರುವಾಗಲೇ ಸದ್ಗುಣಗಳನ್ನು ಧಾರೆಯೆರೆದು ನ್ಯಾಯ, ನೀತಿ, ಸತ್ಯ ಮುಂತಾದ ಮೌಲ್ಯಗಳಿಂದ ಸಂಪನ್ನವಾಗಿ ಬೆಳೆಸಬೇಕು. ಸ್ವೇಚ್ಛೆಯಾಗಿ ಬೆಳೆಯಲು ಬಿಟ್ಟರೆ ಸಮಾಜಘಾತುಕ ಶಕ್ತಿಯಾಗಿ ಪರಿವರ್ತಿತನಾಗಬಹುದು. ಆಗ ತಿದ್ದಲು ಹೊರಟರೆ ಕೇಳುವುದಿಲ್ಲ.

ಆದ್ದರಿಂದ ಗಿಡವನ್ನು–ಮಗುವನ್ನು ಎಳವೆಯಿಂದಲೇ ಸರಿದಾರಿಯಲ್ಲಿ ಬೆಳೆಸಬೇಕೆಂಬ ಈ ಮೇಲಿನ ಗಾದೆಮಾತಿನ ಅರ್ಥವನ್ನು ಮನದಟ್ಟು ಮಾಡಿಕೊಳ್ಳಬೇಕು. ಇದು ಕೇವಲ ವಿಸ್ತರಣೆಯ ಒಂದು ಮಾದರಿ ಮಾತ್ರ. ನಿಮ್ಮ ಉಪನ್ಯಾಸಕರ ನೆರವಿನಿಂದ ಇನ್ನಷ್ಟು ಉತ್ತಮವಾಗಿ ವಿಸ್ತರಿಸಲು ಅಭ್ಯಾಸ ಮಾಡಿಕೊಳ್ಳುವುದು ಅವಶ್ಯಕ. ಇನ್ನೂ ಒಂದೆರಡು ಮಾದರಿಗಳನ್ನು ಕೆಳಗೆಕೊಟ್ಟಿದೆ. ಅವುಗಳಂತೆಯೇ ಸೂಚಿಸಿರುವ ಗಾದೆಗಳನ್ನು ವಿಸ್ತರಿಸಲು ಅಭ್ಯಾಸಮಾಡಿರಿ.

*ಮಾದರಿ – ೧*

## ಗಾದೆ : ಹಾಸಿಗೆ ಇದ್ದಷ್ಟು ಕಾಲು ಚಾಚು

ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ಗಾದೆ, 'ಮಿತಿಯನ್ನು ಅರಿತು ಬಾಳು' ಎಂಬ ಉಪದೇಶವನ್ನು ನೀಡುತ್ತದೆ. 'ಆಸೆಯೇ ದುಃಖಕ್ಕೆ ಕಾರಣ' ಎನ್ನುವ ಮಾತೂ 'ಆಸೆಯೇ ಪ್ರಗತಿಗೆ ಮೂಲ' ಎನ್ನುವ ಮಾತೂ ನಾವು ಕೇಳಿದ್ದೇವೆ. ಇವೆರಡೂ ಪರಸ್ಪರ ವಿರುದ್ಧವಾಗಿ ಕಂಡರೂ, ಈ ಎರಡನ್ನೂ ಹೊಂದಿಸಿ, "ಆಸೆಯಿರಬೇಕು, ಆಸೆಗೆ ಮಿತಿಯಿರಬೇಕು" ಎಂದು ಹೇಳಬಹುದು. ಯಾವುದೇ ಕೆಲಸಕ್ಕೆ ಕೈ ಹಾಕಬೇಕಾದರೂ ನಮ್ಮ ಶಕ್ತಿ ಸಾಮರ್ಥ್ಯ, ಸೌಕರ್ಯಗಳನ್ನು ಗಮನಿಸಬೇಕು. ಶಕ್ತಿ ಮೀರಿ ಕೈ ಚಾಚುವುದಕ್ಕೆ ಹೋದರೆ ಅಥವಾ ಹಾಸಿಗೆಯನ್ನು ಮೀರಿ ಕಾಲು ಚಾಚಿದರೆ ಅಪಾಯ, ತೊಂದರೆ ತಪ್ಪಿದ್ದಲ್ಲ.

ಒಬ್ಬ ಬಡವ ತನ್ನ ಹೊಲ, ಗದ್ದೆ, ಮನೆ ಎಲ್ಲವನ್ನೂ ಮಾರಿ ಸಂಭ್ರಮದಿಂದ ತನ್ನ ಮಗಳ ಮದುವೆ ಮಾಡಲು ಸಿದ್ಧನಿದ್ದ. ಅವನ ಹಿತೈಷಿಯೊಬ್ಬನು "ಹೀಗೆಲ್ಲಾ ಮಾಡಬೇಡ, ಇದ್ದಬದ್ದುದನ್ನೆಲ್ಲಾ ಮಾರಿ, ಮದುವೆ ಮಾಡಬೇಡ; ನಿನ್ನ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೇ ಖರ್ಚುಮಾಡು. ಶಕ್ತಿಮೀರಿ ಖರ್ಚುಬೇಡ; ಹಾಸಿಗೆ ಇದ್ದಷ್ಟು ಕಾಲು ಚಾಚು" ಎಂದು ಹಿತನುಡಿದನು. ಹಾಗೆಯೇ ನಡೆದ ಬಡವ ಮುಂದೆ ಜೀವನದಲ್ಲಿ ಕಷ್ಟಪಡಲಿಲ್ಲ. ಈ ಮಾತು ಎಲ್ಲರಿಗೂ ಅನ್ವಯಿಸುವುದು.

### ಮಾದರಿ – ೨

**ಗಾದೆ : ಕೂತು ಉಂಡರೆ, ಕುಡಿಕೆ ಹೊನ್ನು ಸಾಲದು.**

ಸೋಮಾರಿಗಳಾಗಿರುವುದೇ ದಾರಿದ್ರ್ಯಕ್ಕೆ ಅವಕಾಶ ಮಾಡಿಕೊಟ್ಟಂತೆ; ಆಲಸ್ಯವೇ ಬಡತನಕ್ಕೆ ಕಾರಣ ಎನ್ನುವುದನ್ನು 'ಕೂತು ಉಂಡರೆ, ಕುಡಿಕೆ ಹೊನ್ನು ಸಾಲದು' ಗಾದೆ ಸಮರ್ಥಿಸುತ್ತದೆ.

ಹಿರಿಯರು ಮಾಡಿಟ್ಟ ಆಸ್ತಿ ಇದೆ, ಹಣವಿದೆ ಎಂದು ಯಾವ ಕೆಲಸವನ್ನೂ ಮಾಡದೆ ಸುಖೋಪಭೋಗ ದಲ್ಲಿ ತೊಡಗಿದರೆ ಆಸ್ತಿ, ಹಣ ಬಹಳ ಬೇಗ ಕರಗಿ ಹೋಗುತ್ತದೆ. ಹಣವನ್ನು ಹಾಳು ಮಾಡಲು ಹಲವು ಮಾರ್ಗಗಳಿವೆ. ಹಾಗೆ ಹಾಳು ಮಾಡುವವನಿಗೆ ದಾರಿತಪ್ಪಿಸಲು ಸಿಹಿಗೆ ನೊಣಗಳು ಮುತ್ತುವಂತೆ ಹಲವರು ಸ್ನೇಹಿತರಾಗುತ್ತಾರೆ. ಅವನೊಂದಿಗೆ ಅವರೂ ಸುಖಿಸುತ್ತಾರೆ. ವೆಚ್ಚಮಾಡಲು ಅವನಲ್ಲಿ ಕಾಸಿಲ್ಲದಂತಾದಾಗ ಅವರೆಲ್ಲರೂ ಕಣ್ಮರೆಯಾಗುತ್ತಾರೆ. ಸಿರಿವಂತ ಭಿಕಾರಿಯಾಗಿರುತ್ತಾನೆ. ಹಣವು 'ಹತ್ತು ನಿನ್ನಿಂದ – ಮತ್ತೆ ನನ್ನಿಂದ' – ಎನ್ನುವುದಂತೆ. ಕಣಕಣದಂತೆ ವಿದ್ಯೆಯನ್ನೂ ಹಣವನ್ನೂ ಕ್ಷಣಕ್ಷಣವೂ ಗಳಿಸಬೇಕೆಂದು ಸುಭಾಷಿತದಲ್ಲಿದೆ. ಕೂಡಿಟ್ಟ ಹೊನ್ನನ್ನು ಕರಗಿಸುವ ಬದಲು ಅದಕ್ಕೆ ಮತ್ತಷ್ಟನ್ನು ಸೇರಿಸಲು ಪ್ರಯತ್ನಿಸಬೇಕು. ಸೋಮಾರಿಯಾಗದೇ ದುಡಿಮೆಯ ಯಾವುದಾದರೂ ಒಂದು ದಾರಿಯನ್ನು ಕಂಡುಕೊಳ್ಳಬೇಕು. ಆ ಮೂಲಕ ಸ್ವಹಿತ–ಪರಹಿತ ಹಾಗೂ ದೇಶದ ಹಿತವನ್ನು ಕಾಣಬೇಕು ಎಂದು ಈ ಗಾದೆಯು ಎಚ್ಚರಿಸುತ್ತದೆ.

**ಈ ಗಾದೆ ಮಾತುಗಳನ್ನು ವಿಸ್ತರಿಸುವ ಅಭ್ಯಾಸ ಮಾಡಿರಿ :**

### ಅಭ್ಯಾಸ – ೧

**ಗಾದೆ ೧ : ದೇಶ ಸುತ್ತಬೇಕು, ಕೋಶ ಓದಬೇಕು.**

## ಅಭ್ಯಾಸ – ೨

**ಗಾದೆ ೨ : ತಾಳಿದವನು ಬಾಳಿಯಾನು.**

## ಅಭ್ಯಾಸ – ೩

**ಗಾದೆ ೩ : ಹಣಕ್ಕಿಂತ ಗುಣ ಮುಖ್ಯ.**

## ಅಭ್ಯಾಸ – ೪

**ಗಾದೆ ೪ : ಕೋಣನಿಗೆ ದೊಣ್ಣೆ ಪೆಟ್ಟು, ಜಾಣನಿಗೆ ಮಾತಿನ ಪೆಟ್ಟು.**

**ಅಭ್ಯಾಸಕ್ಕಾಗಿ ಗಾದೆಗಳು:**

೧. ಅಜ್ಜಿ ಇಲ್ಲದ ಮನೆ, ಮಜ್ಜಿಗೆ ಇಲ್ಲದ ಊಟ.
೨. ಅಡಕೆಗೆ ಹೋದ ಮಾನ, ಆನೆ ಕೊಟ್ಟರೂ ಬಾರದು.
೩. ಆಲದ ಮರಕ್ಕೊಂದು ಅಂದ, ಬೇಲದ ಮರಕ್ಕೊಂದು ಚೆಂದ.
೪. ಆಳಾಗಿ ದುಡಿ, ಅರಸಾಗಿ ಉಣ್ಣು.
೫. ಬೆಳೆಯುವ ಸಿರಿ ಮೊಳಕೆಯಲ್ಲಿ.
೬. ಕೂತು ಉಂಡರೆ, ಕುಡಿಕೆ ಹೊನ್ನು ಸಾಲದು.
೭. ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು.
೮. ಹಾಸಿಗೆ ಇದ್ದಷ್ಟು ಕಾಲು ಚಾಚು.
೯. ದೇಶ ಸುತ್ತಬೇಕು, ಕೋಶ ಓದಬೇಕು.
೧೦. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು.
೧೧. ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ.
೧೨. ಆಕಳು ಕಪ್ಪಾದರೆ ಹಾಲು ಕಪ್ಪೆ?
೧೩. ಹಣಕ್ಕಿಂತ ಗುಣ ಮುಖ್ಯ.
೧೪. ಉತ್ಸಾಹವೇ ಯೌವನ, ಚಿಂತೆಯೇ ಮುಪ್ಪು.

೧೫. ಪಟ್ಟ ಆಳುವ ದೊರೆಗಿಂತ ಕೊಟ್ಟ ಕುಟ್ಟುವ ತಾಯಿ ಲೇಸು.
೧೬. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ.
೧೭. ಕೋಣನಿಗೆ ದೊಣ್ಣೆ ಪೆಟ್ಟು, ಜಾಣನಿಗೆ ಮಾತಿನ ಪೆಟ್ಟು.
೧೮. ಹಣ್ಣಿಗೆ ತುಪ್ಪದ ಆಸೆ, ಹಾಲಿಗೆ ಸಕ್ಕರೆ ಆಸೆ.
೧೯. ಹಡಗಿನ ವ್ಯಾಪಾರ, ಉಪ್ಪಿಗೆ ಬರ.
೨೦. ಸಜ್ಜನರ ದುಃಖ, ದುರ್ಜನರ ಸಿರಿ ಶಾಶ್ವತವಲ್ಲ.
೨೧. ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು.
೨೨. ಅಪಾಯ ಬಂದಾಗ ಉಪಾಯದಿಂದ ಗೆಲ್ಲಬೇಕು.
೨೩. ಆಪತ್ತಿಗಾದವನೆ ನೆಂಟ, ತಾಪತ್ರೆಗೆ ಬಂದವನೇ ಬಂಟ.
೨೪. ಊರು ಉಪಕಾರವರಿಯದು, ಹೆಣ ಶೃಂಗಾರವರಿಯದು.
೨೫. ತಾಳಿದವನು ಬಾಳಿಯಾನು.
೨೬. ದುಷ್ಟರನ್ನು ಕಂಡರೆ ದೂರವಿರು.
೨೭. ಬುದ್ಧಿವಂತ ಬರೀತಾನೆ, ವಿವೇಕಿ ಅರಿತಾನೆ.

---

## ಹೆಚ್ಚಿನ ಓದಿಗೆ ಸಹಾಯಕ ಸಾಮಗ್ರಿ :


೧. ನಮ್ಮ ಗಾದೆಗಳು – ಡಾ. ರಾಗೌ. ಡಿವಿಕೆ ಮೂರ್ತಿ ಪ್ರಕಾಶಕರು : ಮೈಸೂರು – ೪.
೨. ಕಿಟ್ಟೆಲ್ ಕೋಶದ ಗಾದೆಗಳು – ಡಾ. ರಾಗೌ
೩. ಪುರುಷನ ಪುಣ್ಯ ನಾರೀ ಭಾಗ್ಯ – ಡಾ. ಪಿ.ಕೆ. ರಾಜಶೇಖರ್ ಪ್ರ: ಹೊನ್ನಾರು ಜನಪದ ಗಾಯಕರು, ವಿಜಯನಗರ, ಮೈಸೂರು.
೪. ಗ್ರಾಮ ಜೀವನದಲ್ಲಿ ಗಾದೆಗಳು – ಜೀ.ಶಂ.ಪ.
೫. ಹೆಣ್ಮಕ್ಕಳ ಗಾದೆಗಳು – ಮಧುರಚೆನ್ನ
೬. ನಮ್ಮ ಸುತ್ತಿನ ಗಾದೆಗಳು – ಡಾ. ಸುಧಾಕರ
೭. ನೆನಪಿಗೆ ಬಂದ ಗಾದೆಗಳು – ಎಸ್.ವಿ. ಪರಮೇಶ್ವರಭಟ್ಟ
೮. ಉತ್ತರಕರ್ನಾಟಕದ ಗಾದೆಗಳು – ಎಂ.ಎಸ್. ಲಠ್ಠೆ ಮತ್ತು ಬಿ.ಬಿ. ಹೆಂಡಿ
೯. ಹೊನ್ನಬಿತ್ತೇವು ಹೊಲಕೆಲ್ಲ – ಎಚ್.ಎಂ. ರಾಮಾರಾಧ್ಯ
೧೦. ಕನ್ನಡ ಗಾದೆಗಳ ಸಮೀಕ್ಷೆ – ನಂ. ತಪಸ್ವೀಕುಮಾರ್
೧೧. ಕನ್ನಡ ಗಾದೆಗಳ ಕೋಶ – ಸಂ: ಟಿ.ವಿ. ವೆಂಕಟರಮಣಯ್ಯ.

# ೧೨. ಅನುಬಂಧ

# ಲೇಖನ ಚಿಹ್ನೆಗಳು

ಆಡುವ ಭಾಷೆಯಲ್ಲಿ ಧ್ವನಿಯ ಏರಿಳಿತ, ಆಂಗಿಕ ಅಭಿನಯ, ಮುಖದಲ್ಲಿ ಭಾವನೆಗಳ ಬದಲಾವಣೆ ಮೊದಲಾದವುಗಳಿಂದ ಮಾತುಗಳ ಅರ್ಥ ಸ್ಪಷ್ಟವಾಗುತ್ತದೆ. ಬರವಣಿಗೆಯಲ್ಲಿ, ಗ್ರಾಂಥಿಕ ಭಾಷೆಯಲ್ಲಿ ಈ ಭಾವನೆಗಳನ್ನು, ಅರ್ಥವನ್ನು ಸ್ಪಷ್ಟಪಡಿಸಲು ಕೆಲವು ಚಿಹ್ನೆಗಳನ್ನು ಉಪಯೋಗಿಸಬೇಕಾಗುತ್ತದೆ. ಇಂತಹ ಚಿಹ್ನೆಗಳನ್ನು ಲೇಖನ ಚಿಹ್ನೆಗಳು ಎನ್ನುತ್ತಾರೆ.

ಲೇಖನ ಚಿಹ್ನೆಗಳನ್ನು ಈ ಕೆಳಕಂಡಂತೆ ವಿಭಾಗಿಸಬಹುದು:

೧. ವಿರಾಮಗಳು : (ಅ) ಪೂರ್ಣವಿರಾಮ, (ಆ) ಅಲ್ಪವಿರಾಮ, (ಇ) ಅರ್ಧವಿರಾಮ; (ಈ) ವಿವರಣ ವಿರಾಮ, (ಉ) ಅಪೂರ್ಣವಿರಾಮ.

೨. ಸೂಚಕಗಳು : (ಅ) ಪ್ರಶ್ನಸೂಚಕ (ಪ್ರಶ್ನಾರ್ಥಕ), (ಆ) ಭಾವಸೂಚಕ (ಭಾವಾರ್ಥಕ).

೩. ಉದ್ಧರಣಗಳು : (ಅ) ಒಂಟಿ ಉದ್ಧರಣ, (ಆ) ಜೋಡಿ ಉದ್ಧರಣ.

೪. ಗೆರೆಗಳು : (ಅ) ಕಿರುಗೆರೆ, (ಆ) ಉದ್ದಗೆರೆ, (ಇ) ಲಂಬಗೆರೆ, (ಈ) ಓರೆಗೆರೆ, (ಉ) ಅಡಿಗೆರೆ.

೫. ಆವರಣ(ಕಂಸ)ಗಳು : (ಅ) ದುಂಡಾವರಣ, (ಆ) ಚೌಕಾವರಣ.

೬. ಇತರ ಚಿಹ್ನೆಗಳು : (ಅ) ನಕ್ಷತ್ರ ಚಿಹ್ನೆ, (ಆ) ಪುನರಾವರ್ತನ ಚಿಹ್ನೆ, (ಇ) ಅಧಿಕ ಚಿಹ್ನೆ, (ಈ) ಸಮಾನಾರ್ಥಕ ಚಿಹ್ನೆ.

## ೧. ವಿರಾಮಗಳು :

**ಅ) ಪೂರ್ಣವಿರಾಮ (.)** : ಇದನ್ನು ಈ ಸಂದರ್ಭಗಳಲ್ಲಿ ಬಳಸುತ್ತಾರೆ:

೧) ಒಂದು ವಾಕ್ಯವು ಪೂರ್ಣವಾದಾಗ,

*ಉದಾ:* ಪಾಂಡವರು ಅರಣ್ಯವಾಸಕ್ಕೆ ಹೋದರು.

೨) ಹಲವು ವಿವರಗಳನ್ನು ಒಂದೊಂದಾಗಿ ಪಟ್ಟಿ ಮಾಡುವಾಗ ಅಂಕಿ, ಅಕ್ಷರದ ನಂತರ,

*ಉದಾ:* ೧. ಅ.

೩) ಒಂದೇ ಶೀರ್ಷಿಕೆಯ ಅಡಿಯಲ್ಲಿ ಹಲವಾರು ವಿಭಾಗಗಳು ಹಾಗೂ ಉಪವಿಭಾಗಗಳನ್ನು ಸೂಚಿಸಬೇಕಾದಲ್ಲಿ,

*ಉದಾ:* ಅ.

೧. (೧)

೪) ಲೇಖನಗಳಲ್ಲಿ, ಗ್ರಂಥಗಳಲ್ಲಿ, ಅಧ್ಯಾಯ, ಉಪಅಧ್ಯಾಯ, ಕಂಡಿಕೆ(ವಾಕ್ಯಬೃಂದ)ಗಳ ಸಂಚಿಕೆಯನ್ನು ಸೂಚಿಸುವಾಗ ಸಂಖ್ಯೆಯ ನಂತರ,

*ಉದಾ:* ೫.೧, ೫.೨.೪

೫) ಸಂಕ್ಷೇಪಗಳಲ್ಲಿ ಪ್ರತಿ ಸಂಕ್ಷಿಪ್ತಾಕ್ಷರಗಳ ನಂತರ,

*ಉದಾ:* ವಿ.ಸೂ. ಕೆ.ಇ.ಬಿ.

೬) ದೀರ್ಘವಾದ ವಾಕ್ಯದಲ್ಲಿ ಹಲವಾರು ವಿವರಗಳು ಒಂದೇ ವಾಕ್ಯದ ಭಾಗಗಳಾಗಿ ಮುಂದುವರಿಯುವಂತಿದ್ದರೆ, ಅವುಗಳ ಕೊನೆಯಲ್ಲಿ ಅಲ್ಪವಿರಾಮವನ್ನು ಬಳಸಿ, ಕೊನೆಯ ವಿವರದ ನಂತರ,

*ಉದಾ:* ಆಧುನಿಕ ಫ್ಯಾಶನ್ ಆಭರಣಗಳ ಕಚ್ಚಾ ಸಾಮಗ್ರಿಗಳೆಂದರೆ ವಿವಿಧ ಬಗೆಯ ಮಣಿಗಳು, ಮುತ್ತುಗಳು, ತೊಗಲು ಹಾಗೂ ಸೆಣಬು.

೭) ಉದ್ಧರಿತ ವಾಕ್ಯದ ಕೊನೆಯಲ್ಲಿ ಪೂರ್ಣ ವಿರಾಮವನ್ನು ಬಳಸಿ, ಅನಂತರ

*ಉದಾ:* ಆಕೆ ಹೇಳಿದಳು, "ಬೇಡಮ್ಮ, ನೀನು ರಾಜಕಾರಣಿಯಾಗಬೇಡ."

೮) ಒಂಟಿ ಉದ್ಧರಣ ಚಿಹ್ನೆಯೊಳಗಿನ ವಾಕ್ಯ ಪೂರ್ಣವಾಕ್ಯವಾಗಿದ್ದರೆ, ಆ ವಾಕ್ಯದ ಕೊನೆಯಲ್ಲಿ,

*ಉದಾ:* ಅಪಾರ ಅವರದೇ ಕಥೆ 'ಮೇಷ್ಟರ ಸೈಕಲ್ಲಿನ ಬೇಬಿ ಸೀಟು'.

೯) ಛಾಯಾಚಿತ್ರ, ಕೋಷ್ಟಕ ಮೊದಲಾದವುಗಳ ಶೀರ್ಷಿಕೆಗಳು ಪೂರ್ಣವಾಕ್ಯಗಳಾಗಿದ್ದರೆ ವಾಕ್ಯದ ಕೊನೆಯಲ್ಲಿ,

*ಉದಾ:* ಕಸ್ತೂರ್ಬಾ ಮನೆಯ ಮುಂದಿನ ಓಣಿ.

೧೦) ಆವರಣದೊಳಗೆ ಅಳವಡಿಸಿರುವ ವಾಕ್ಯ ಪೂರ್ಣವಾಕ್ಯವಾಗಿದ್ದಲ್ಲಿ, ವಾಕ್ಯದ ಕೊನೆಯಲ್ಲಿ ಪೂರ್ಣ ವಿರಾಮ ಚಿಹ್ನೆಯನ್ನು ಬಳಸಿ, ಅನಂತರ

*ಉದಾ:* ಹೇಮಚಂದ್ರನು ಪ್ರಸಿದ್ಧ ಲಾಕ್ಷಣಿಕರ ಅಭಿಪ್ರಾಯಗಳನ್ನು ಅನುಸರಿಸಿರುವುದಷ್ಟೇ ಅಲ್ಲದೆ ಅವರ ಗ್ರಂಥಗಳಿಂದ ಭಾಗಭಾಗಗಳನ್ನೇ ಎತ್ತಿ ಸೇರಿಸಿಕೊಂಡಿದ್ದಾನೆ. (ಎಷ್ಟೋ ವೇಳೆ ಇವು ಇಂತಹವರ ವಾಕ್ಯವೆಂದೂ ನಿರ್ದೇಶಿಸುವುದಿಲ್ಲ.)

೧೧) ವಾಕ್ಯವೊಂದರ ನಡುವೆ ಆವರಣದೊಳಗೆ ಇನ್ನೊಂದು ಪೂರ್ಣವಾಕ್ಯವನ್ನು ಬಳಸಿದಾಗ, ಆವರಣದೊಳಗಿನ ವಾಕ್ಯ ಮುಗಿದ ನಂತರ,

*ಉದಾ:* ಬಿ.ಎಂ.ಶ್ರೀ. ಅವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರೂ ಕನ್ನಡ ಭಾಷೆಯ ಏಳ್ಗೆಗಾಗಿ (ಅವರನ್ನು ಕನ್ನಡದ ಕಣ್ವರೆಂದು ಕರೆಯಲಾಗುತ್ತಿತ್ತು.) ಅನವರತ ದುಡಿದರು.

೧೨) ಆವರಣದೊಳಗಿನ ವಾಕ್ಯವು ಮೂಲವಾಕ್ಯದ ಒಂದು ಭಾಗಕ್ಕೆ ವಿವರಣೆ ನೀಡುವಂತಿದ್ದರೆ ಆವರಣ ಚಿಹ್ನೆಯನ್ನು ಹಾಕಿದ ನಂತರ,

*ಉದಾ:* ನೂರಾರು ವರ್ಷಗಳ ಹಿಂದೆ ಯಾತ್ರಿಕರು ಕಾಲ್ನಡಿಗೆಯಲ್ಲೇ (ಆಗ ರೈಲು, ಬಸ್ಸು ಮೊದಲಾದ ವಾಹನಗಳಿರಲಿಲ್ಲ.) ಯಾತ್ರೆ ಮಾಡುತ್ತಿದ್ದರು.

೧೩) ಹಲವು ವಿವರಗಳನ್ನು ಪಟ್ಟಿ ಮಾಡುವಾಗ ಅವು ಒಟ್ಟಾಗಿ ಸೇರಿ ಒಂದು ಪೂರ್ಣ ವಾಕ್ಯವಾಗು ವಂತಿದ್ದು ಪ್ರತಿಯೊಂದು ವಿವರವು ಸ್ವತಂತ್ರ ವಾಕ್ಯವಾಗಿದ್ದರೆ ಕೊನೆಯ ವಿವರದ ನಂತರ,

*ಉದಾ:* ಈ ರೀತಿಯ ಕೆಲಸಗಳಿಗೆ ಅರ್ಜಿ ಹಾಕುವವರು

ಅ. ಹಿಂದುಳಿದ ವರ್ಗದವರು

ಆ. ಮಹಿಳೆಯರು

ಇ. ಅಲ್ಪಸಂಖ್ಯಾತರು

ಈ. ಪರಿಶಿಷ್ಟ ಜನಾಂಗದವರು.

೧೪) ಉದ್ಧರಣ ಚಿಹ್ನೆಯೊಳಗಿನ ವಾಕ್ಯವು ಮೂಲವಾಕ್ಯದಲ್ಲಿ ಸೇರಿಕೊಂಡಿದ್ದರೆ ಆ ವಾಕ್ಯದ ನಂತರ.

*ಉದಾ:* ಮಹಾಕವಿ ಮಿಲ್ಟನ್ ಎಂದಿನಂತೆ ಒಂದು ಮುಂಜಾನೆ ಗಾಳಿಸೇವನೆಗೆಂದು ಹೊರಟಾಗ ಅವರ ಪತ್ನಿ, "ನೀವು ಪ್ರತಿದಿನವೂ ಮುಂಜಾನೆ ತಿರುಗಾಟಕ್ಕೆ ಹೋಗುತ್ತೀರಿ. ಆದರೆ ಇದರಿಂದ ನೀವು ಯಾವ ಪ್ರಯೋಜನ ಪಡೆಯುತ್ತೀರಿ ಎಂಬುದು ನನಗೆ ಅರಿವಾಗುವುದಿಲ್ಲ. ಈಗಂತೂ ನಿಮಗೆ ಯಾವುದೂ ಸರಿಯಾಗಿ ಕಾಣಿಸುವುದಿಲ್ಲ" ಎಂದು ಗೊಣಗಿದರು.

**ಆ) ಅಲ್ಪವಿರಾಮ (,)**

೧) ವಾಕ್ಯಗಳಲ್ಲಿ ಅರ್ಥಸ್ಪಷ್ಟತೆಗಾಗಿ, ದೀರ್ಘವಾಕ್ಯಗಳಲ್ಲಿ ಅರ್ಥಸಂದಿಗ್ಧತೆಯನ್ನು ಹೋಗಲಾಡಿಸಲು

೨) ಒಂದು ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚು ವಿಶೇಷಣಗಳನ್ನು ಒಟ್ಟಾಗಿ ಬಳಸಿದಾಗ ಪ್ರತಿ ವಿಶೇಷಣದ ನಂತರ

*ಉದಾ:* ಶ್ರೀರಾಮನು ಶೂರನೂ, ಉದಾರಿಯೂ, ಪ್ರಜಾರಕ್ಷಕನೂ, ಧರ್ಮಾತ್ಮನೂ ಆಗಿದ್ದನು.

೩) ಒಂದು ವಾಕ್ಯದಲ್ಲಿ ಒಂದೇ ಕ್ರಿಯೆಗೆ ಸಂಬಂಧಪಟ್ಟಂತೆ ಹಲವು ನಾಮಪದಗಳು ಬಳಕೆಯಾಗಿದ್ದರೆ ಪ್ರತಿ ನಾಮಪದದ ನಂತರ

*ಉದಾ:* ಆಗ ನಮ್ಮ ಮನೆಗೆ ದಿನವೂ ಅನಕೃ, ಬೀಚಿ, ತರಾಸು, ವೀರಕೇಸರಿ ಸೀತಾರಾಮಶಾಸ್ತ್ರಿ, ದೇವುಡು, ಕಣಗಾಲ್ ಪ್ರಭಾಕರಶಾಸ್ತ್ರಿ ಇಂಥ ದಿಗ್ಗಜರು ಬರುತ್ತಿದ್ದರು.

೪) ದೀರ್ಘವಾಕ್ಯಗಳಲ್ಲಿ ಅರ್ಥಪೂರ್ಣ ವಾಕ್ಯಾಂಶಗಳ ನಂತರ

*ಉದಾ:* ವಿದ್ಯಾಭ್ಯಾಸದ ಒಂದು ಹಂತವನ್ನು ತಲುಪಿದ ಅನಂತರ, ಉದ್ಯೋಗಿಯಾಗಿ ಕರ್ನಾಟಕದ ಉಡುಪಿಯಲ್ಲಿ ಸೇರಿಕೊಂಡು, ಕೆಲಸಮಯ ಕಳೆದಾಗ ಉಪನ್ಯಾಸಕನಾಗಿ ನನ್ನ ವೃತ್ತಿಜೀವನವನ್ನು ತಮಿಳುನಾಡಿನ ಮಧುರೆಯಲ್ಲಿ ಆರಂಭಿಸಿ, ಮುಂದೆ ಎರಡೂವರೆ ದಶಕಗಳ ಕಾಲ ಅಲ್ಲೇ ಕಳೆದೆ.

೫) ಸಂಯುಕ್ತ ವಾಕ್ಯದಲ್ಲಿ ಪ್ರತಿ ವಾಕ್ಯಾಂಶದ ನಂತರ

*ಉದಾ:* ಮಾನವನ ಆಂತರಿಕ ಕುಂದುಕೊರತೆಗಳನ್ನು ತೊಡೆದುಹಾಕಲು, ಯಾವುದಾದರೊಂದು ಆದರ್ಶದ ಮೇಲೆ ಜನರನ್ನು ಸಂಘಟಿಸಲು, ಅನೇಕ ಪ್ರವಾದಿಗಳು ಧಾರ್ಮಿಕ ಸಂವಿಧಾನ ಗಳನ್ನು ಕೊಡುವರು.

೬) ಒಂದೇ ವಾಕ್ಯದಲ್ಲಿ ಹಲವಾರು ಕ್ರಿಯೆಗಳು ಒಂದರ ನಂತರ ಒಂದು ನಡೆಯುವುದಾದರೆ ಪ್ರತಿಯೊಂದು ಕ್ರಿಯೆಯ ನಂತರ

*ಉದಾ:* ಮುಂದೆ ಬಲಕ್ಕೆ ತಿರುಗಿ, ನಾಲ್ಕು ಹೆಜ್ಜೆ ಹೋಗಿ, ಪುನಃ ಎಡಕ್ಕೆ ಹತ್ತು ಹೆಜ್ಜೆ ಹೋದರೆ ನೀವು ಮೈದಾನ ತಲುಪುತ್ತೀರಿ.

೭) ಒಂದೇ ವಾಕ್ಯದಲ್ಲಿ ಜೋರಾಗಿ, ನಿಧಾನವಾಗಿ, ಮೆಲ್ಲಗೆ ಮುಂತಾದ ಕ್ರಿಯಾವಿಶೇಷಣಗಳನ್ನು ಬಳಸಿದಾಗ ಪ್ರತಿಯೊಂದು ಕ್ರಿಯಾವಿಶೇಷಣದ ನಂತರ

*ಉದಾ:* ಉತ್ತರ ಕೊಡದವರೆಲ್ಲ ದಡ್ಡರಲ್ಲ, ಉದ್ಧಟರೂ ಅಲ್ಲ.

೮) ದೀರ್ಘವಾಕ್ಯಗಳಲ್ಲಿ ಕೆಲವು ಸಲ 'ಹಾಗೂ', 'ಮತ್ತು' ಮುಂತಾದ ಸಂಬಂಧಸೂಚಕ ಅವ್ಯಯಗಳ ಬಳಕೆಯಿಂದ ಸೃಷ್ಟಿಸಿದ ಪದಪುಂಜ ಮತ್ತು ವಾಕ್ಯಾಂಶಗಳ ನಂತರ

*ಉದಾ:* ಗುಂಡಪ್ಪ ಮತ್ತು ಗುಂಡಮ್ಮ ರಾತ್ರಿಯ ರೈಲಿಗೆ, ಕೆಂಪಮ್ಮ ಮತ್ತು ಕೆಂಪಣ್ಣ, ಬೆಳಗಿನ ಬಸ್ಸಿಗೆ ಹೊರಡಲಿ.

೯) ದೀರ್ಘವಾಕ್ಯದಲ್ಲಿ ಒಂದೇ ವಿಭಕ್ತಿ ಪ್ರತ್ಯಯವು ಅಕ್ಕಪಕ್ಕದ ಪದಗಳಲ್ಲಿ ಬಳಕೆಯಾಗಿದ್ದರೆ, ಅವುಗಳ ಪ್ರತ್ಯೇಕತೆಯನ್ನು ತೋರಿಸಲು

*ಉದಾ:* ರೈತನ ಶ್ರಮದಿಂದಾಗಿ ದೇಶಕ್ಕೆ, ಜನರಿಗೆ, ಆಹಾರ ದೊರೆಯುತ್ತದೆ.

೧೦) ವಾಕ್ಯದಲ್ಲಿ ಅರ್ಥ ಸಂದಿಗ್ಧತೆಯನ್ನು ನಿವಾರಿಸಲು

*ಉದಾ:* ಮನಸ್ಸಿಟ್ಟು ಪಾಠವನ್ನು ಕೇಳುವ ವಿದ್ಯಾರ್ಥಿಗಳು, ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯನ್ನು ಪಡೆಯುತ್ತಾರೆ.

೧೧) ಸಂಬೋಧನೆಯಾದ ಮೇಲೆ
*ಉದಾ:* ಸಭಿಕರೇ, ತಾಳ್ಮೆಯಿಂದಿರಿ.

೧೨) ಒಂದೇ ಸಂದರ್ಭದಲ್ಲಿ ಹಲವರನ್ನು ಸಂಬೋಧಿಸುವಾಗ ಪ್ರತಿಸಂಬೋಧನೆಯ ನಂತರ
*ಉದಾ:* ಅಧ್ಯಕ್ಷರೇ, ಮಹನೀಯರೇ, ಮಹಿಳೆಯರೇ, ಮುಖ್ಯೋಪಾಧ್ಯಾಯರೇ, ಅಧ್ಯಾಪಕರೇ, ವಿದ್ಯಾರ್ಥಿಗಳೇ, .....

೧೩) ವಾಕ್ಯದಲ್ಲಿ ಹಲವು ಸಂಕ್ಷೇಪಗಳನ್ನು ಬಳಸಿದಾಗ, ಪ್ರತಿ ಸಂಕ್ಷೇಪವಾದ ಮೇಲೆ ಬರುವ ಪೂರ್ಣ ವಿರಾಮದ ನಂತರ
*ಉದಾ:* ಎಂ.ಎ., ಎಂ.ಎಸ್., ಓದಿದವರು ಅರ್ಜಿ ಹಾಕಬಹುದು.

೧೪) ಹಲವು ಸಂಕ್ಷೇಪಗಳು ಸರಣಿಯಲ್ಲಿ ಬಳಕೆಗೊಂಡಾಗ ಪ್ರತಿಯೊಂದರ ನಂತರ ಬರುವ ಪೂರ್ಣ ವಿರಾಮದ ನಂತರ.
*ಉದಾ:* ಎಂ.ಎ., ಪಿಎಚ್.ಡಿ., ಡಿಪ್–ಇನ್–ಎಪಿ.

**ಇ) ಅರ್ಧವಿರಾಮ (;)**

೧) ಇದನ್ನು ಅರ್ಥಸ್ಪಷ್ಟತೆಯನ್ನು ಸೂಚಿಸಲು

೨) ವಾಕ್ಯ/ವಾಕ್ಯಾಂಶವು ದೊಡ್ಡ ವಾಕ್ಯವೊಂದರ ಭಾಗವಾಗಿದ್ದು, ಅರ್ಥಪೂರ್ಣತೆಯನ್ನು ಹೊಂದಿ ಮುಂದುವರಿಯುವಂತಿದ್ದರೆ, ಅಂತಹ ವಾಕ್ಯ, ವಾಕ್ಯಾಂಶದ ನಂತರ
*ಉದಾ:* ಹೌದು, ನಾವು ಯುದ್ಧ ಮಾಡಿದೆವು; ಆದರೆ ಯಾರನ್ನಾದರೂ ಪೀಡಿಸಲು, ಸೋಲಿಸಲು ನಾವು ಯುದ್ಧ ಮಾಡಲಿಲ್ಲ; ನಮ್ಮ ಸ್ವರಾಜ್ಯದ ರಕ್ಷಣೆಗಾಗಿ ನಾವು ಹೋರಾಡಿದೆವು.

೩) ಸಂಯುಕ್ತ ವಾಕ್ಯದಲ್ಲಿ ಎರಡು ವಾಕ್ಯ ಭಾಗಗಳ ನಡುವೆ, 'ಅಥವಾ', 'ಮತ್ತು', 'ಹಾಗೂ' ಮುಂತಾದ ಸಂಬಂಧ ಸೂಚಕಾವ್ಯಯಗಳನ್ನು ಬಳಸದೇ ಇದ್ದಾಗ, ಅವುಗಳ ನಡುವಿನ ಸಂಬಂಧವನ್ನು ಸೂಚಿಸಲು
*ಉದಾ:* ಕಾವ್ಯ ಬೇರೆಯಲ್ಲ, ಶಾಸ್ತ್ರ ಬೇರೆಯಲ್ಲ; ಪದ್ಯ ಬೇರೆಯಲ್ಲ, ಗದ್ಯ ಬೇರೆಯಲ್ಲ; ಸಂಗೀತ ಬೇರೆಯಲ್ಲ.

೪) ಕಂಡಿಕೆ (ವಾಕ್ಯಬಂಧ)ಯ ಕೊನೆಯ ವಾಕ್ಯ ಅಪೂರ್ಣವಾಗಿದ್ದು, ಅದಕ್ಕೆ ಹೊಂದಿಕೊಂಡ ಇತರ ಭಾಗಗಳನ್ನು ಪಟ್ಟಿಮಾಡಿ ಹೇಳುವಾಗ, ಕೊನೆಯ ವಾಕ್ಯದ ನಂತರ
*ಉದಾ:* ಈ ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಇರಬೇಕಾದ ಅರ್ಹತೆಗಳು
ಅ. ಅವರ ಸಂಬಂಧಿಕರು ಯಾರೂ ಸಂಸ್ಥೆಯ ನೌಕರರಾಗಿರಬಾರದು
ಆ. ಈ ಹಿಂದಿನ ಆಯ್ಕೆ ಸ್ಪರ್ಧೆಗಳಲ್ಲಿ ಭಾಗವಹಿಸಿರಬಾರದು ಮತ್ತು
ಇ. ಸರ್ಕಾರಿ ನೌಕರರಾಗಿದ್ದಲ್ಲಿ ಅಗತ್ಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

೫) ಪಟ್ಟಿ ಮಾಡಿ ಹೇಳುವ ಅಂಶಗಳನ್ನು ಮೂಲ ವಾಕ್ಯದಲ್ಲಿಯೇ ಅಡಕಗೊಳಿಸಿ ಬರೆಯುವಾಗ.
*ಉದಾ:* ಈ ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಇರಬೇಕಾದ ಅರ್ಹತೆಗಳು: ಅವರ ಸಂಬಂಧಿಕರು ಯಾರೂ ಸಂಸ್ಥೆಯ ನೌಕರರಾಗಿರಬಾರದು; ಈ ಹಿಂದಿನ ಆಯ್ಕೆ ಸ್ಪರ್ಧೆಗಳಲ್ಲಿ ಭಾಗವಹಿಸಿರಬಾರದು; ಸರ್ಕಾರಿ ನೌಕರರಾಗಿದ್ದಲ್ಲಿ ಅಗತ್ಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

**ಈ) ವಿವರಣ ವಿರಾಮ/ವಿವರಣಾತ್ಮಕ (:)**

೧) ವಿಷಯಕ್ಕೆ ವಿವರಣೆಯನ್ನು ಸೂಚಿಸುವ ಸಂದರ್ಭದಲ್ಲಿ
*ಉದಾ:* ದೃಶ್ಯ ಪ್ರಪಂಚದ ಪ್ರಭೇದಗಳು: ನಿತ್ಯ–ಅನಿತ್ಯ, ಸತ್ಯ–ಮಿಥ್ಯ, ಶಾಶ್ವತ–ಅಶಾಶ್ವತ ಇತ್ಯಾದಿಗಳ ಅರಿವು.

೨) ಉಪಶೀರ್ಷಿಕೆ ಹಾಗೂ ಮುಂಬರುವ ಕಂಡಿಕೆಯ ಆರಂಭದ ನಡುವೆ

*ಉದಾ:* ಕನ್ನಡ ಶೈಲಿ: ಬಳಕೆಯ ವಿಧಾನ:

೩) ಅರ್ಜಿ, ಆಡಳಿತ ಪತ್ರ, ನಮೂನೆಗಳಲ್ಲಿ ವಾಕ್ಯರೂಪದ ಪದಗಳಾದ ದಿನಾಂಕ, ಉಲ್ಲೇಖ, ವಿಷಯ, ಸೂಚನೆ, ಹೆಸರು, ವಿದ್ಯಾರ್ಹತೆ, ಸ್ಥಳ ಮುಂತಾದುವುಗಳ ನಂತರ ವಿವರಗಳನ್ನು ಕೊಡುವುದಕ್ಕೆ ಮುಂಚೆ

*ಉದಾ:* ದಿನಾಂಕ : ಫೆಬ್ರವರಿ ೧೮, ೨೦೧೪. ಸ್ಥಳ : ಕಾಸರಗೋಡು.

೪) ಸುದ್ದಿ ಶೀರ್ಷಿಕೆ ಹಾಗೂ ಶೀರ್ಷಿಕೆಯ ವಿಸ್ತರಣೆಯ ನಡುವೆ

*ಉದಾ:* ಕಾಶ್ಮೀರ : ಅಮೆರಿಕಾ ಬೆಂಬಲ ಗಿಟ್ಟಿಸುವ ಪಾಕ್ ಯತ್ನ ವಿಫಲ.

೫) ಸಂಭಾಷಣೆಗಳಲ್ಲಿ ಪಾತ್ರದ ಹೆಸರಿನ ಮುಂದೆ.

*ಉದಾ:* ರಾಮಕೃಷ್ಣ : ಅದರಲ್ಲಿ ನಾವಿಬ್ರೂ ಭಾಗವಹಿಸಬೇಕು, ನೋಡು!

**ಉ) ಅಪೂರ್ಣವಿರಾಮ (...)**

೧) ಮಾತಿನ ಅಪೂರ್ಣತೆಯನ್ನು ಬರವಣಿಗೆಯಲ್ಲಿ ಸೂಚಿಸಲು

*ಉದಾ:* .... ಹಾಗಾದರೆ .... ಹಾಗಾದರೆ ಎಂದರೆ .... ನಾನೇನು ಮಾಡಲಿ ....

೨) ನಾಟಕ, ಸಂಭಾಷಣೆಗಳಲ್ಲಿ ವಾಕ್ಯ ಅಥವಾ ವಾಕ್ಯಾಂಶಗಳ ಅಪೂರ್ಣತೆಯನ್ನು ಸೂಚಿಸಲು

*ಉದಾ:* ಇಲ್ಲ, ರಾಮಕೃಷ್ಣ.... ಸತ್ತಿರೋದು.

೩) ದೀರ್ಘ ಅವತರಣಿಕೆಯಲ್ಲಿ ಬಳಸದೆ ಬಿಟ್ಟಿರುವ ಅಂಶಗಳನ್ನು ಸೂಚಿಸಲು

*ಉದಾ:* "ಭಾಷಾ ಅಲ್ಪಸಂಖ್ಯಾತ ಗುಂಪಿಗೆ ಸೇರಿದ ಮಕ್ಕಳಿಗೆ ಪ್ರಾಥಮಿಕ ಶಾಲೆಯ ಒಂದನೆಯ ತರಗತಿಯಿಂದ ಕನ್ನಡವನ್ನು ಕಡ್ಡಾಯ ವಿಷಯವನ್ನಾಗಿ ಮಾಡುವುದು ..... ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರುವ ಪ್ರೌಢಶಾಲೆಗಳಲ್ಲಿ ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ಆರಂಭಿಸಲು ಒತ್ತಾಯಿಸುವುದು. ಅಷ್ಟರಮಟ್ಟಿಗೆ ಸಂವಿಧಾನದ ೨೯(೧) ಮತ್ತು ೩೦(೧)ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತವೆ."

೪) ಉದ್ಧರಿತ ಭಾಗವೊಂದರ ಪ್ರಾರಂಭವನ್ನು ಬಿಟ್ಟು, ಭಾಗವನ್ನು ಮಾತ್ರ ಬರೆಯುವಾಗ.

*ಉದಾ:* ".... ಉದಾಹರಣೆಗೆ ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಎಂಬಂತಹ ಮಾತು ಒಂದು ಹೇಳಿಕೆಯಾಗಿ ತೋರುವುದೇ ವಿನಾ ವಾಸ್ತವವಾಗಿ ಒಂದು ನಿರ್ಧರಿತ ಕಾರ್ಯಕ್ರಮವಾಗಲಾರದು."

## ೨. ಸೂಚಕಗಳು:

ಆಶ್ಚರ್ಯ, ಕೋಪ, ಸಂದೇಹ, ಪ್ರಶ್ನೆ ಮುಂತಾದುವನ್ನು ಬರವಣಿಗೆಯಲ್ಲಿ ಸೂಚಿಸಲು ಕೆಲವು ಸೂಚಕಗಳನ್ನು ಬಳಸಲಾಗುತ್ತದೆ.

**ಅ) ಪ್ರಶ್ನಸೂಚಕ (ಪ್ರಶ್ನಾರ್ಥಕ) (?)**

೧) ಪ್ರಶ್ನಾರ್ಥಕ ವಾಕ್ಯದ ಕೊನೆಯಲ್ಲಿ

*ಉದಾ:* "ಅಪ್ಪಾ, ಅದಕ್ಕಿಷ್ಟು ಚಿಂತೆ ಯಾಕೆ ಮಾಡ್ತೀರಾ?"

೨) ಪ್ರಶ್ನಾರ್ಥಕ ವಾಕ್ಯವು ಒಂಟಿ ಅಥವಾ ಜೋಡಿ ಉದ್ಧರಣ ಚಿಹ್ನೆಯೊಳಗಿದ್ದರೆ ಉದ್ಧರಣ ಚಿಹ್ನೆಯೊಳಗೇ

*ಉದಾ:* "ಎಲ್ಲಾ ಸರಿ, ಈ ಕೆಲಸ ಮಾಡುವುದು ಹೇಗೆ? ಅದರಿಂದ ಪ್ರಯೋಜನ ಆಗುತ್ತಾ?"

೩) ಪ್ರಶ್ನಾರ್ಥಕ ಪದ ಅಥವಾ ಪ್ರತ್ಯಯ ಇಲ್ಲದಿದ್ದರೂ, ವಾಕ್ಯ ಅಥವಾ ಶೀರ್ಷಿಕೆಯಲ್ಲಿ ಅರ್ಥದ ದೃಷ್ಟಿಯಿಂದ ಪ್ರಶ್ನೆ ಅಡಕವಾಗಿದ್ದಾಗ

*ಉದಾ:* ಕರ್ನಾಟಕದಲ್ಲಿ ರಾಜ್ಯಪಾಲರ ಆಡಳಿತ? ರೈತರ ಸಾಲ ಮನ್ನಾ?

೪) ಬರೆಯುವವರಿಗೆ ತಾವು ಸೂಚಿಸುವ ವಿಷಯದ ಬಗ್ಗೆ ಸಂದೇಹವಿದ್ದಲ್ಲಿ ಆ ವಿಷಯದ (ಪದ, ವಾಕ್ಯ ಕಂಡಿಕೆ, ಹೇಳಿಕೆ) ಪಕ್ಕದಲ್ಲಿ ದುಂಡಾವರಣ ಚಿಹ್ನೆಯೊಳಗೆ

*ಉದಾ:* ಪಂಜೆ ಮಂಗೇಶರಾಯರು 'ಕವಿಶಿಷ್ಯ' (?) ಎನ್ನುವ ಕಾವ್ಯನಾಮವನ್ನಿರಿಸಿಕೊಂಡಿದ್ದರು.

೫) ಸಂದೇಹಾಸ್ಪದ ಸಂಗತಿಯನ್ನು ಇಡಿಯಾಗಿ ಪ್ರಶ್ನಸೂಚಕ ಚಿಹ್ನೆಯೊಂದಿಗೆ ಆವರಣದೊಳಗೆ

*ಉದಾ:* ಡಾ. ಎಂ.ಎಚ್. ಮರಿಗೌಡರನ್ನು ವಿಜ್ಞಾನಿಯೊಬ್ಬರು (ಡಾ. ಸಿ.ವಿ. ರಾಮನ್?) ಮುಕ್ತಕಂಠದಿಂದ ಶ್ಲಾಘಿಸಿದರೆನ್ನಲಾಗಿದೆ.

೬) ಪ್ರಶ್ನಾರ್ಥಕ ವಾಕ್ಯದಲ್ಲಿ ಅಡಕಗೊಂಡಿರುವ ಪ್ರಶ್ನೆಯ ಭಾವವನ್ನು ಒತ್ತಿ ಹೇಳಬೇಕಾದಾಗ ವಾಕ್ಯದ ಕೊನೆಯಲ್ಲಿ

*ಉದಾ:* ನಾಳೆಯೇ ಮಂತ್ರಿಮಂಡಲದ ವಿಸ್ತರಣೆ??

೭) ಪ್ರಶ್ನಾರ್ಥಕ ವಾಕ್ಯ ಬೇರೊಂದು ವಾಕ್ಯದ ಭಾಗವಾಗಿದ್ದರೆ ಅಂತಹ ವಾಕ್ಯದ ನಂತರ

*ಉದಾ:* ನಿಮ್ಮ ಶಾಲೆಯಲ್ಲಿ ಎಷ್ಟು ವಿಭಾಗಗಳಿವೆ, ಯಾವ ಯಾವ ಕ್ರೀಡೆಗಳಿವೆ, ನಿಮ್ಮ ಅಚ್ಚುಮೆಚ್ಚಿನ ಅಭ್ಯಾಸದ ವಿಷಯ ಯಾವುದು ಎನ್ನುವುದನ್ನು ವಿವರಿಸಿ.

**ಆ) ಭಾವಸೂಚಕ (ಭಾವಾರ್ಥಕ) (!)**

೧) ಸಂತೋಷ, ದುಃಖ, ಆಶ್ಚರ್ಯ, ಕೋಪ, ಹೇಸಿಗೆ ಮುಂತಾದ ಭಾವನೆಗಳನ್ನು ಸೂಚಿಸುವ ಪದ ಅಥವಾ ವಾಕ್ಯದ ಕೊನೆಯಲ್ಲಿ

*ಉದಾ:* ಬನ್ನಿ, ಬನ್ನೀ! ಅಯ್ಯೋ! ಹೌದೇ!

೨) ಅರ್ಥದ ದೃಷ್ಟಿಯಲ್ಲಿ ವಿಶಿಷ್ಟ ಭಾವನೆ ಅಡಕವಾಗಿದ್ದರೆ

*ಉದಾ:* ಲೋಕಾಯುಕ್ತರ ರಾಜೀನಾಮೆ!

೩) ಭಾವಸೂಚಕ ವಾಕ್ಯ ಉದ್ಧರಣ ಚಿಹ್ನೆಯೊಳಗಿದ್ದರೂ ಭಾವಸೂಚಕ ಚಿಹ್ನೆ ಆದ ಮೇಲೆ ಉದ್ಧರಣ ಚಿಹ್ನೆಯನ್ನು ಹಾಕಬೇಕು.

*ಉದಾ:* ರಂಗ ಹಿಂದುಮುಂದು ನೋಡದೆ "ರಾಮ ರಾಮ!!" ಎಂದು ಕೂಗಿ ಹೊಳೆಗೆ ಹಾರಿದ.

## ೩. ಉದ್ಧರಣಗಳು (' ' " ")

ಸಾಮಾನ್ಯವಾಗಿ ಮತ್ತೊಬ್ಬರ ವಾಕ್ಯಗಳನ್ನು ಬರವಣಿಗೆಯಲ್ಲಿ ಅಳವಡಿಸಿಕೊಂಡಾಗ ಅವನ್ನು ಉದ್ಧರಣ ಚಿಹ್ನೆಯಲ್ಲಿ ತೋರಿಸಬೇಕು. ಬೇರೆ ಕೆಲವು ವಿಶಿಷ್ಟ ಸಂದರ್ಭಗಳಲ್ಲಿಯೂ ಉದ್ಧರಣ ಚಿಹ್ನೆ ಬಳಕೆಯಾಗುತ್ತದೆ. ಉದ್ಧರಣ ಚಿಹ್ನೆಗಳಲ್ಲಿ ಎರಡು ವಿಧಗಳಿವೆ: (ಅ) ಒಂಟಿ ಉದ್ಧರಣ, (ಆ) ಜೋಡಿ ಉದ್ಧರಣ.

**ಅ) ಒಂಟಿ ಉದ್ಧರಣ/ವಾಕ್ಯವೇಷ್ಟನ ಚಿಹ್ನೆ (' ')**

೧) ವಾಕ್ಯದಲ್ಲಿ ಯಾವುದಾದರೂ ಅಕ್ಷರ, ಪ್ರತ್ಯಯ, ಪದ ಅಥವಾ ಪದಪುಂಜವನ್ನು ವಿಶೇಷವಾಗಿ ಸೂಚಿಸಬೇಕಾದಾಗ,

*ಉದಾ:* ಇದು 'ಋ'ಕಾರದ ಚಿಹ್ನೆಯ ಬಗೆಗೆ ನಡೆದ ಚರ್ಚೆ.

೨) ಬರವಣಿಗೆಯಲ್ಲಿ ಬಳಸುವ ಪದ ಅಥವಾ ಪದಪುಂಜ ವಿಶೇಷ ಅರ್ಥವನ್ನು ಪಡೆಯುವುದಾದರೆ, ಅಂದರೆ ಆ ಪದ ಅಥವಾ ಪದಪುಂಜ ಪಾರಿಭಾಷಿಕವಾಗಿ ಬಳಕೆಯಾದಾಗ,

*ಉದಾ:* ಆ ನಿವೇಶನಗಳನ್ನು 'ಸಕ್ರಮ'ಗೊಳಿಸಲಾಗುವುದು.

೩) ಬರವಣಿಗೆಯ ಪ್ರಸ್ತುತ ವಿಷಯಕ್ಕೆ ನೇರವಾಗಿ ಸಂಬಂಧಪಡದ, ಆದರೆ ವಿಷಯದ ಭಾಗವಾಗಿ ಬರುವ ವಿಶಿಷ್ಟ ಪದ, ಪದಪುಂಜಗಳನ್ನು

*ಉದಾ:* 'ಮೈಸೂರ ಮಲ್ಲಿಗೆ'ಯ 'ಶಬ್ದ' ಕೂಡ ವಿಚಿತ್ರ.

೪) ವಾಕ್ಯದಲ್ಲಿ ಗಾದೆ, ಸೂಕ್ತಿ ಮುಂತಾದುವುಗಳನ್ನು ಅಡಕಗೊಳಿಸಿದಾಗ, ಆ ಭಾಗವನ್ನು,

*ಉದಾ:* 'ಸತ್ಯಮೇವ ಜಯತೇ' ಎನ್ನುವುದು ಭಾರತೀಯರ ಮನದ ಮಾತು.

೫) ಉದ್ಧರಿತ ಭಾಗವೊಂದರಲ್ಲಿ ಬೇರೊಂದು ಉದ್ಧರಿತ ಭಾಗವನ್ನು ಅಳವಡಿಸಿದಾಗ, ಅದರ ಪ್ರತ್ಯೇಕತೆಯನ್ನು ಸೂಚಿಸಲು,

*ಉದಾ:* 'ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ' ಎನ್ನುವುದು ಸರ್ವಜ್ಞನ ನುಡಿ.

೬) ವಾಕ್ಯದಲ್ಲಿ ಲೇಖನ, ಪುಸ್ತಕ, ಪತ್ರಿಕೆ ಮುಂತಾದುವುಗಳ ಹೆಸರುಗಳನ್ನು.

*ಉದಾ:* 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಇವೆರಡು ಕು.ವೆಂ.ಪು. ಅವರು ರಚಿಸಿದ ಕಾದಂಬರಿಗಳು.

**ಆ) ಜೋಡಿ ಉದ್ಧರಣ ಚಿಹ್ನೆ (" ")**

೧) ಮತ್ತೊಬ್ಬರ ಮಾತುಗಳನ್ನು ನಮ್ಮ ಮಾತುಗಳಲ್ಲಿ ಅಳವಡಿಸುವಾಗ ಎರಡು ರೀತಿಗಳಲ್ಲಿ ಉದ್ಧರಿಸಬಹುದು. ಅವರ ಮಾತುಗಳನ್ನೇ ನೇರವಾಗಿ ಬಳಸುವುದು ಮತ್ತು ಅವರ ಮಾತುಗಳನ್ನು 'ಎಂದು' ಎನ್ನುವ ಉದ್ಧರಣ ಪದದೊಂದಿಗೆ ಅಳವಡಿಸಿ ಹೇಳುವುದು – ಈ ಸಂದರ್ಭಗಳಲ್ಲಿ ಜೋಡಿ ಉದ್ಧರಣ ಚಿಹ್ನೆಯನ್ನು ಬಳಸಬೇಕು.

*ಉದಾ:* ವ್ಯಾಸ ಮಹರ್ಷಿಗಳು ಅರ್ಜುನನಿಗೆ ಹೇಳಿದರು: "ಮಗೂ, ಕೌರವರಲ್ಲಿ ಅಮಿತ ಪರಾಕ್ರಮಿಗಳಿದ್ದಾರೆ. ಅವರನ್ನು ಸಾಮಾನ್ಯ ಯುದ್ಧದಲ್ಲಿ ಮಣಿಸುವುದು ಬಹಳ ಕಷ್ಟ."

೨) ಸಂಭಾಷಣೆಗಳಲ್ಲಿ ಪ್ರತಿಸಂಭಾಷಣೆಯ ಮೊದಲಿಗೆ ಹಾಗೂ ಕೊನೆಯಲ್ಲಿ ಪೂರ್ಣವಿರಾಮ ಚಿಹ್ನೆಯನ್ನು ಹಾಕಿದ ನಂತರ

*ಉದಾ:* ತಿಪ್ಪಣ್ಣ: "ಅವು ನಮ್ಮ ಮನೆಗಳು, ನಿಮ್ಮವು ಅಲ್ಲ."

೩) ಒಂದೇ ಮೂಲದಿಂದ ಒಂದಕ್ಕಿಂತ ಹೆಚ್ಚು ಕಂಡಿಕೆಗಳನ್ನು ಉದ್ಧರಿಸುವಾಗ ಪ್ರತಿಕಂಡಿಕೆಯೂ.

*ಉದಾ:* ಜಿ.ಎಸ್.ಎಸ್. ಅವರ ಮೊದಲಿನ ಕಾವ್ಯ ವಿಸ್ಮಯ–ಮೂಲವಾದದ್ದು, ಸುಂದರವಾದ ಬಹಿರಂಗ ಲೋಕದಲ್ಲಿ ಬೆರಗುಗಣ್ಣುಗಳಿಂದ ಉತ್ಸಾಹದಿಂದ ವಿಹಾರಗೈದ ಚೇತನಕಾವ್ಯ ಅದು ಎಂದು ಹೇಳಿ ಕೊನೆಗೆ "ಶಿವ ಮತ್ತು ಸುಂದರ ಪ್ರಧಾನವಾದ ಕಾವ್ಯ, ಕುವೆಂಪು ಮತ್ತು ಪುತಿನ ಅವರ ಅಂಶಗಳನ್ನು ಬೆರೆಸಿಕೊಂಡ ವ್ಯಕ್ತಿಯೊಬ್ಬ ಅದರ ಹಿಂದೆ ಇಲ್ಲಿ ಕಾಣುತ್ತಾನೆ" ಎಂದಿದ್ದಾರೆ.

## ೪. ಗೆರೆಗಳು ( –, —, |, / )

ಕೆಲವು ಲೇಖನ ಚಿಹ್ನೆಗಳನ್ನು ಬರವಣಿಗೆಯಲ್ಲಿ ಮಾತ್ರ ಬಳಸಲಾಗುತ್ತದೆ. ಇವು ವಿಶಿಷ್ಟ ಸಂದರ್ಭಗಳಲ್ಲಿ ನಿರ್ದಿಷ್ಟ ಉದ್ದೇಶಗಳಿಗಾಗಿ ಬಳಕೆಯಾಗುತ್ತವೆ. ಅಂತಹ ಕೆಲವನ್ನು ಈ ಮುಂದೆ ವಿವರಿಸಲಾಗಿದೆ:

**ಅ) ಕಿರುಗೆರೆ (–)**

೧) ಭಾಷೆಯಲ್ಲಿ ಬಳಕೆಯಾಗುವ ಪ್ರತ್ಯಯಗಳನ್ನು ಬಿಡಿಯಾಗಿ ಗುರುತಿಸುವಾಗ ಪ್ರತ್ಯಯಕ್ಕೆ ಮುಂಚೆ
*ಉದಾ:* –ಇಗೆ, –ಅರೆ, –ಇಂದ.

೨) ಎರಡು ಪದಗಳ ನಡುವಿನ ರೂಪವ್ಯತ್ಯಾಸವನ್ನು ಸೂಚಿಸಲು
*ಉದಾ:* ಬ್ರಹ್ಮ – ಬೊಮ್ಮ ರಮಾ – ರಮೆ

೩) ಎರಡು ಪದಗಳು ಸೇರಿ ಜೋಡುನುಡಿಯಾಗಿ ಬಳಕೆಯಾಗುವಾಗ,
*ಉದಾ:* ದವಸ–ಧಾನ್ಯ ಕನಸು–ನನಸು

೪) ಎರಡು ನಾಮಪದಗಳು ನಡುವೆ 'ಮತ್ತು' ಎನ್ನುವ ಅರ್ಥದಲ್ಲಿ
*ಉದಾ:* ಚೆನ್ನೈ–ಬೆಂಗಳೂರು ನಡುವೆ ಓಲ್ವೋ ಬಸ್ ಸಂಚಾರ.

೫) ವ್ಯಕ್ತಿಯೊಬ್ಬರ ಹೇಳಿಕೆಯನ್ನು ಸೂಚಿಸಲು ಹೇಳಿಕೆ ಮತ್ತು ಹೆಸರಿನ ನಡುವೆ
*ಉದಾ:* ಶೇಕಡ ೧ರ ಬಡ್ಡಿ ದರದಲ್ಲಿ ರೈತರಿಗೆ ಸಾಲ – ಮುಖ್ಯಮಂತ್ರಿ.

೬) ಮುಖ್ಯ ವಿಭಾಗ, ಉಪವಿಭಾಗ ಮುಂತಾದುವುಗಳನ್ನು ಸೂಚಿಸುವಾಗ ಶೀರ್ಷಿಕೆ ಮತ್ತು ಸಂಖ್ಯೆಯ ನಡುವೆ
*ಉದಾ:* ಸಮಾಸ ಪದಗಳು – ೪ ಅನುಬಂಧ – ೫

೭) ಅಂಕೆಗಳು, ದಿನಾಂಕ, ವರ್ಷ ಮುಂತಾದುವುಗಳ ನಡುವಿನ ಅವಧಿ, ಅಂತರ ಇತ್ಯಾದಿಗಳನ್ನು ಸೂಚಿಸಲು
*ಉದಾ:* ಪುಟ ೭೪–೭೮ ೨೦೧೩–೧೪

**ಆ) ಉದ್ದಗೆರೆ (—)**

೧) ಒಂದೇ ವಾಕ್ಯದಲ್ಲಿ ಹಲವು ಪದಗಳು ಸರಣಿಯಲ್ಲಿ ಬಂದಾಗ ಅವುಗಳ ಕೊನೆಯಲ್ಲಿ
*ಉದಾ:* ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ — ಇವು ಮೂರು ಸಿದ್ಧಾಂತಗಳಾಗಿವೆ.

೨) ವಾಕ್ಯದಲ್ಲಿ ಹೇಳಿಕೆಯೊಂದನ್ನು ಅಳವಡಿಸಿ ಬರೆಯುವಾಗ
*ಉದಾ:* ಹಲವಾರು ಸಮ್ಮೇಳನಗಳು — ಜಾತ್ರೆಗಳು — ದಿನನಿತ್ಯವೂ ನಡೆಯುತ್ತಲೇ ಇರುತ್ತವೆ.

೩) ಅಭಿಪ್ರಾಯವೊಂದನ್ನು ಕುರಿತಂತೆ ಟೀಕೆ ಅಥವಾ ವಿಮರ್ಶೆಯನ್ನು ಹೇಳುವಾಗ, ಅಭಿಪ್ರಾಯದಿಂದ ಟೀಕೆಯನ್ನು ಬೇರ್ಪಡಿಸಲು.
*ಉದಾ:* 'ಮಂಕುತಿಮ್ಮನ ಕಗ್ಗ' ಕಗ್ಗವಲ್ಲ — ಅದೊಂದು ತಾತ್ತ್ವಿಕಗೀತೆ.

**ಇ) ಲಂಬಗೆರೆ ( | )**

೧) ಡಾಕ್ಟರ್, ಪ್ರೊಫೆಸರ್, ಪ್ರೊಪ್ರೈಟರ್, ಅನುವಾದಕ, ಸಂಪಾದಕ, ಸಂಕಲನಕಾರ, ವಿದ್ವಾಂಸ, ಪಂಡಿತ ಮುಂತಾದ ಪದಗಳ ಸಂಕ್ಷೇಪಗಳ ನಂತರ, ಒಂದು ಅಥವಾ ಎರಡು ಲಂಬಗೆರೆಗಳನ್ನು ಬಳಸುವ ರೂಢಿ ಇದೆ.
*ಉದಾ:* ಡಾ। ಡಾ॥ ಪ್ರೊ। ಪ್ರೊ॥

೨) ವಿವಿಧ ಛಂದೋರೂಪಗಳಲ್ಲಿ ಪದ್ಯಾರ್ಥವನ್ನು ಸೂಚಿಸಲು, ಅನುಪಲ್ಲವಿಯನ್ನು ಸೂಚಿಸಲು ಒಂದು ಲಂಬಗೆರೆಯನ್ನೂ, ಪದ್ಯದ ಮುಕ್ತಾಯವನ್ನು ಸೂಚಿಸಲು, ಪಲ್ಲವಿಯನ್ನು ಸೂಚಿಸಲು ಎರಡು ಲಂಬಗೆರೆಗಳನ್ನೂ ಬಳಸಲಾಗುತ್ತದೆ.

*ಉದಾ:* ಮಾನವಜನ್ಮ ದೊಡ್ಡದು – ಇದ
ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ ॥ ಪ ॥

೩) ಛಂದಶ್ಶಾಸ್ತ್ರದಲ್ಲಿ ಗಣಗಳನ್ನು ವಿವರಿಸಲು
*ಉದಾ:* ಈಶನ | ಕರುಣೆಯ |
ನಾಶಿಸು | ವಿನಯದಿ |

**ಈ) ಓರೆಗೆರೆ ( / )**

೧) ಪದ, ಪದಪುಂಜ, ವಾಕ್ಯಾಂಶಗಳ ನಡುವೆ ಪರ್ಯಾಯವನ್ನು ಸೂಚಿಸಲು
*ಉದಾ:* ಗಂಡಸು / ಹೆಂಗಸು ಅವನು / ಅವಳು

೨) ವಿಳಾಸದಲ್ಲಿ ಉಪವಿಭಾಗಗಳನ್ನು ಸೂಚಿಸಲು.
*ಉದಾ:* ೨೧/ಅ, ಚಿಕ್ಕನಹಳ್ಳಿ

**ಉ) ಅಡಿಗೆರೆ ( __ )**

೧) ಬರವಣಿಗೆಯಲ್ಲಿ ಮುಖ್ಯ ವಿಷಯವೊಂದನ್ನು ಗುರುತಿಸಲು, ಯಾವುದಾದರೂ ವಾಕ್ಯ, ಪದ, ಪದಪುಂಜದತ್ತ ಓದುಗರ ಗಮನವನ್ನು ಸೆಳೆಯಲು.
*ಉದಾ:* ಪ್ರಾಸಾಕ್ಷರಗಳ ಹಿಂದೆ ಅನುಸ್ವಾರವಿದ್ದರೆ <u>ವೃಷಭಪ್ರಾಸ</u>.

## ೫. ಆವರಣ(ಕಂಸ)ಗಳು ( ) [ ]

**ಅ) ದುಂಡಾವರಣ/ಅಲ್ಪಾವರಣ ( )**

೧) ನಿಘಂಟು, ಶಬ್ದಕೋಶ, ಸಂಪಾದಿತ ಗ್ರಂಥಗಳು ಮುಂತಾದುವುಗಳಲ್ಲಿ ವ್ಯಾಕರಣಾಂಶ, ಆಕರ, ಪರ್ಯಾಯ ಶಬ್ದಗಳನ್ನು ಸೂಚಿಸಲು,
*ಉದಾ:* ಗರತಿ (ನಾ) ಗದರು (ಕ್ರಿ)

೨) ಐಚ್ಛಿಕವಾಗಿ ಬಳಕೆಯಾಗುವ ಅಕ್ಷರ, ಪದ, ಪದಪುಂಜ ಮುಂತಾದುವುಗಳನ್ನು ತೋರಿಸಲು,
*ಉದಾ:* ಹಳೆ(ಯ) ಪುಸ್ತಕ, ಎತ್ತರ(ವಾ)ದ ಮರ.

೩) ನಾಟಕಗಳಲ್ಲಿ ಸಂಭಾಷಣೆ, ಅಭಿನಯ ಮತ್ತು ರಂಗಸಜ್ಜಿಕೆಗಳಿಗೆ ಸಂಬಂಧಿಸಿದ ಪೂರಕ ಮಾಹಿತಿಯನ್ನು
*ಉದಾ:* ರಾಣಿ : (ಗೌರಿಯನ್ನು ನೋಡಿ ಆಶ್ಚರ್ಯಚಕಿತಳಾಗಿ) ಏನಾಯಿತೆ ಗೌರಿ?

೪) ಯಾವುದೇ ವಿಷಯಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಣೆಗಳನ್ನು ಒದಗಿಸಲು ಆ ಅಂಶವನ್ನು
*ಉದಾ:* ಅಡಕೆ (ಹಳೆಯದು) ಕಾಲುಬಳೆ (ಬೆಳ್ಳಿಯದು)

೫) ಸಂಕ್ಷೇಪಗಳ ಪೂರ್ಣರೂಪಗಳನ್ನು ಸೂಚಿಸಬೇಕಾದರೆ ಹಾಗೆಯೇ ಪೂರ್ಣರೂಪಗಳ ಸಂಕ್ಷೇಪಗಳನ್ನು ಸೂಚಿಸುವಾಗಲೂ
*ಉದಾ:* ಕವಿಮಂ (ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ) ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ)

೬) ವಾಕ್ಯಗಳಲ್ಲಿ ಪೂರಕ ಮಾಹಿತಿ, ವಿವರಣೆ, ಭಿನ್ನಾಭಿಪ್ರಾಯ ಮುಂತಾದುವುಗಳನ್ನು ಸೂಚಿಸಲು
*ಉದಾ:* (ದಿ. ೨೧–೩–೧೯೫೩ರವರೆಗೆ) ಜೊತೆಯಲ್ಲಿದ್ದರು.

೭) ಓದುಗರಿಗೆ ಕೊಡಬೇಕಾದ ವಿಶೇಷ ಸೂಚನೆಗಳನ್ನು
*ಉದಾ:* (ಎರಡನೆಯ ಪುಟ ನೋಡಿ) (ನಾಲ್ಕನೆಯ ಪುಟಕ್ಕೆ)

೮) ಪೂರಕ ಅಂಕಿ–ಅಂಶಗಳನ್ನು ಪ್ರತ್ಯೇಕವಾಗಿ ತೋರಿಸಲು.
*ಉದಾ:* ಮಾಜಿ ಮಂತ್ರಿ ಶ್ರೀ ಗುರುಪಾದ ಸ್ವಾಮಿಯವರು (೮೬) ಮೊನ್ನೆ ನಿಧನರಾದರು.

**ಆ) ಚೌಕಾವರಣ/ದೀರ್ಘಾವರಣ [ ]**

೧) ಒಂದೇ ಹೇಳಿಕೆಯಲ್ಲಿ ಎರಡು ಆವರಣಗಳನ್ನು ಒಂದರೊಳಗೊಂದು ಬಳಸಬೇಕಾದ ಸಂದರ್ಭದಲ್ಲಿ ಹೊರಗಿನ ಆವರಣವನ್ನು,

*ಉದಾ:* ಈ ಪಟ್ಟಿಯನ್ನು 'ಶ್ರೀ ಜಗನ್ನಾಥದಾಸರು' (ಉಷಾ ಸಾಹಿತ್ಯ ಮಾಲೆ, ಮೈಸೂರು) ಗ್ರಂಥದಲ್ಲಿ [ಪುಟ ೩೮೮–೪೦೦ (ಅನುಬಂಧ ೩)] ನೋಡಬಹುದು.

೨) ಸುದ್ದಿ ಹಾಗೂ ಗ್ರಂಥ ಸಂಪಾದಕರು ತಮ್ಮ ಅನುಮಾನ, ಅಭಿಪ್ರಾಯ, ಟೀಕೆ, ಟಿಪ್ಪಣಿ, ಸೇರ್ಪಡೆ ಮುಂತಾದುವನ್ನು.

*ಉದಾ:* ಪ್ರಕೃ[+ತಿ?] ಒಂದೇ ಭಾಂಡವಾದುದು ಕಂಡು ಉಣಲೊಲ್ಲದೆ,

## ೬. ಇತರ ಚಿಹ್ನೆಗಳು ( *, –"–, +, = )

**ಅ) ನಕ್ಷತ್ರ ಚಿಹ್ನೆ (*)**

೧) ಅಡಿಟಿಪ್ಪಣಿ ವಿಷಯಕ್ಕೆ ಸಂಬಂಧಿಸಿದಂತಹ ಪೂರಕ ಟಿಪ್ಪಣಿ, ಮರೆತುಹೋದ ಅಂಶಗಳನ್ನು ಪ್ರತ್ಯೇಕವಾಗಿ ಸೂಚಿಸಬೇಕಾದಾಗ ಮೂಲಪಠ್ಯದಲ್ಲಿ ನಕ್ಷತ್ರದ ಗುರುತನ್ನು ಹಾಕಿ ಅದೇ ಪುಟ ಅಥವಾ ಅಧ್ಯಾಯದ ಕೊನೆಯಲ್ಲಿ ಇದೇ ಚಿಹ್ನೆಯನ್ನು ಬಳಸಿ ಮಾಹಿತಿಯನ್ನು ಕೊಡಬೇಕು.

*ಉದಾ:* ಕನಕದಾಸರ ಕಾಲ*

೨) ದಾಖಲೆಗಳಿಂದ ಅಧಿಕೃತವಾಗಿ ತೆಗೆದು ಹಾಕಿದ ಭಾಗಗಳನ್ನು ಮತ್ತು ಮೂಲಪ್ರತಿಗಳಲ್ಲಿ ಹಾಳಾಗಿರುವ ಭಾಗಗಳನ್ನು ಸೂಚಿಸಲು,

*ಉದಾ:* ಶಾಸಕರು ಮಂತ್ರಿಗಳನ್ನು **** ಎಂದು ದೂರಿದರು.

**ಆ) ಪುನರಾವರ್ತನ ಚಿಹ್ನೆ ( –"– )**

೧) ಒಂದು ಸಾಲಿನಲ್ಲಿ ನಮೂದಿಸಿದ ವಿಷಯ ಮುಂದಿನ ಸಾಲಿನಲ್ಲಿಯೂ ಅದೇ ಸ್ಥಳದಲ್ಲಿ ಪುನರಾವರ್ತನೆ ಯಾಗುವುದಾದರೆ.

*ಉದಾ:* ವಿದ್ಯಾರಣ್ಯಪುರ ನಾಲ್ಕನೇ ಮೆಯಿನ್ ಮೂರನೇ ಕ್ರಾಸ್‌ನಲ್ಲಿ ಸೇತುವೆ ನಿರ್ಮಾಣ.

–"– ಐದನೇ ಮೆಯಿನ್ ರಸ್ತೆ ಮಗ್ಗುಲಿಗೆ ಕಲ್ಲುಚಪ್ಪಡಿ ಹಾಸುವುದು.

**ಇ) ಅಧಿಕ ಚಿಹ್ನೆ ( + )**

೧) ಎರಡು ಪದಗಳನ್ನು ಅಥವಾ ಸಂಖ್ಯೆಗಳನ್ನು ಕೂಡಿಸುವಾಗ.

*ಉದಾ:* ಮಳೆ + ಕಾಲ = ಮಳೆಗಾಲ.

ಎರಡು + ತಂಡ = ಇತ್ತಂಡ.

**ಈ) ಸಮಾನಾರ್ಥಕ ಚಿಹ್ನೆ ( = )**

೧) ಎರಡು ಪದಗಳ ಅಥವಾ ವಾಕ್ಯಗಳ ಅರ್ಥ ಸಮಾನವಾಗಿದೆ ಎಂದು ತಿಳಿಸುವಾಗ.

*ಉದಾ:* ಸುರರು = ದೇವತೆಗಳು.

ನೆರೆ = ಪ್ರವಾಹ, ಸೇರು (ಧಾತು)